ಮಂಗಳವಾರ, ಮೇ 27, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 146 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಲೋಕೋಮೋಟಿವ್ ತಯಾರಿಕೆಗೆ ಚಾಲನೆ



9,000 ಅಶ್ವಶಕ್ತಿಯ ಎಂಜಿನ್ ದೇಶದಲ್ಲಿಯೇ ಮೊದಲ ಬಾರಿಗೆ ಈ ಎಂಜಿನ್ ತಯಾರಿಸಲಾಗಿದೆ

4,600 ಟನ್ ಸರಕು ಸಾಗಿಸುವ ಸಾಮರ್ಥ್ಯ ಹೊಂದಿದೆ. ಪ್ರತಿ ತಾಸಿಗೆ 75 ಕಿ.ಮೀ. ವೇಗದಲ್ಲಿ ಸಾಗಲಿದೆ

ಗುಜರಾತ್‌ನ ದಾಹೋದ್‌ನಲ್ಲಿ ತಯಾರಿಕಾ ಕೇಂದ್ರವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,176	25,001	₹1.04 ಲಕ್ಷ (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	85.10

ಕಕ್ಷಿದಾರರಿಗೆ ತ್ವರಿತ ನ್ಯಾಯ

ಕೇಂದ್ರದ ಸಿಪಿಸಿ ಕಾಯ್ದೆಗೆ ರಾಜ್ಯ ಸರ್ಕಾರದ ತಿದ್ದುಪಡಿ • ರಾಷ್ಟ್ರಪತಿ ಅಂಕಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿವಿಲ್ ಪ್ರಕರಣಗಳ ತ್ವರಿತ ವಿಲೇವಾರಿ ಮತ್ತು ಶೀಘ್ರವಾಗಿ ನ್ಯಾಯ ಒದಗಿಸುವ ಉದ್ದೇಶದಿಂದ ಕೇಂದ್ರದ 'ಸಿವಿಲ್ ಪ್ರಕ್ರಿಯಾ ಸಂಹಿತೆ (ಸಿಪಿಸಿ) ಕಾಯ್ದೆ'ಗೆ ರಾಜ್ಯ ಸರ್ಕಾರ ತಂದಿರುವ ತಿದ್ದುಪಡಿಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ ಹಾಕಿದ್ದಾರೆ.

ಆ ಮೂಲಕ, ದೇಶದಲ್ಲಿಯೇ ಮೊದಲ ಬಾರಿ ಕರ್ನಾಟಕದಲ್ಲಿ ಕಕ್ಷಿದಾರರಿಗೆ ಶೀಘ್ರ ನ್ಯಾಯ ದೊರಕಿಸಲು ಕಾನೂನಿನಲ್ಲಿ ಮಹತ್ವದ ಬದಲಾವಣೆ ತರಲಾಗಿದೆ.

ಬೆಳಗಾವಿಯಲ್ಲಿ 2024ರ ಡಿಸೆಂಬರ್‌ನಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಮಸೂದೆಯನ್ನು ಅಂಗೀಕರಿಸಲಾಗಿತ್ತು. ರಾಜ್ಯಪಾಲರು ಈ ಮಸೂದೆಯನ್ನು ರಾಷ್ಟ್ರಪತಿಯ ಅಂಕಿತಕ್ಕೆ ಕಾಯ್ದಿರಿಸಿದ್ದರು. ರಾಷ್ಟ್ರಪತಿ ಮೇ 19ರಂದು ಅಂಕಿತ ಹಾಕಿದ್ದಾರೆ. ಸೋಮವಾರ (ಮೇ 26) ರಾಜ್ಯಪತ್ರ ಹೊರಡಿಸಲಾಗಿದ್ದು, ತಕ್ಷಣದಿಂದ ತಿದ್ದುಪಡಿಗಳು ಜಾರಿಗೆ ಬರಲಿವೆ.

ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, 'ನ್ಯಾಯದಾನ ಪದ್ಧತಿಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ಸಿಪಿಸಿ ಕಾಯ್ದೆಗೆ ರಾಜ್ಯ ಸರ್ಕಾರ ತಿದ್ದುಪಡಿಗಳನ್ನು ಮಾಡಿತ್ತು. ರಾಜ್ಯದಲ್ಲಿ ನಿರ್ದಿಷ್ಟ ಸಮಯ ಪಾಲನೆಯೊಂದಿಗೆ ಸಿವಿಲ್ ಪ್ರಕರಣಗಳು ಇತ್ಯರ್ಥಗೊಂಡು, ಶೀಘ್ರ ನ್ಯಾಯದಾನಕ್ಕೆ ಈ ತಿದ್ದುಪಡಿಗಳು ಅವಕಾಶ ಕಲ್ಪಿಸಲಿವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ನಮ್ಮ ಶಾಸಕಾಂಗ ಮಾಡಿರುವ ಈ ತಿದ್ದುಪಡಿಯ ಅನ್ವಯ, ಪ್ರತಿಯೊಂದು ಸಿವಿಲ್ ಪ್ರಕರಣವನ್ನು ಕಕ್ಷಿದಾರರ ನಡುವೆ ರಾಜಿ ಸಂಧಾನದ ಮೂಲಕ ಬಗೆಹರಿಸಲು ಕಡ್ಡಾಯ ಪ್ರಯತ್ನ ಮಾಡಬೇಕು. ಎರಡು ತಿಂಗಳ ಒಳಗಾಗಿ ರಾಜಿ ಸಂಧಾನದ ಪ್ರಯತ್ನ ತಾರ್ಕಿಕ ಅಂತ್ಯ ಕಾಣಬೇಕು. ಅದು ಸಾಧ್ಯವಾಗದೇ ಇದ್ದಾಗ ನ್ಯಾಯಾಲಯ ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂಬ ಶಾಸನಾತ್ಮಕ ಅವಕಾಶ ದೊರೆತಿರುವುದು ಕಕ್ಷಿದಾರನ ಪಾಲಿಗೆ ತೆರೆದ ಭಾಗ್ಯದ ಬಾಗಿಲು' ಎಂದು ಅವರು ಬಣ್ಣಿಸಿದರು.

'ಈ ಐತಿಹಾಸಿಕ ತಿದ್ದುಪಡಿಗಳ ಮೂಲಕ ಸಿವಿಲ್ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳ ವಿಲೇವಾರಿಗೆ ಹಲವು ವರ್ಷಗಳವರೆಗೆ ಕಾಯುವ, ವಿಳಂಬಕ್ಕೆ ಮುಕ್ತಿ ನೀಡಲು ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ. ಯಾವುದೇ ಸಿವಿಲ್ ಪ್ರಕರಣವು ದಾಖಲಾದ ದಿನದಿಂದ 24 ತಿಂಗಳೊಳಗೆ ಇತ್ಯರ್ಥವಾಗಿ, ತಾರ್ಕಿಕ ಅಂತ್ಯ ಕಾಣುವುದನ್ನು ಈ ತಿದ್ದುಪಡಿಯು ಖಚಿತಪಡಿಸಲಿದೆ' ಎಂದರು.

12ನೇ ಪುಟ ನೋಡಿ

ಸಿಪಿಸಿ ಕಾಯ್ದೆ ತಿದ್ದುಪಡಿ– ಮುಖ್ಯಾಂಶಗಳು

- ನ್ಯಾಯದಾನ ವ್ಯವಸ್ಥೆಯ ಸಂಪೂರ್ಣ ಸುಧಾರಣೆಗೆ ಅವಕಾಶ
- ಕಕ್ಷಿದಾರರ ನಡುವೆ ರಾಜಿ ಸಂಧಾನಕ್ಕೆ ಕಡ್ಡಾಯವಾಗಿ ಪ್ರಯತ್ನಿಸಬೇಕು
- ಲಿಖಿತ ಹೇಳಿಕೆ, ಸಾಕ್ಷ್ಯಗಳ ಸಂಗ್ರಹ ಎಲ್ಲದಕ್ಕೂ ಕಾಲಮಿತಿ
- ಕಕ್ಷಿದಾರರ ವೃಥಾ ಅಲೆದಾಟಕ್ಕೆ ಕೊನೆ
- ನ್ಯಾಯಾಲಯಗಳಲ್ಲಿ ಪ್ರಕರಣಗಳ ವಿಲೇವಾರಿ ವಿಳಂಬಕ್ಕೆ ಇತಿಶ್ರೀ
- ಪ್ರಕರಣ ದಾಖಲಾದ ದಿನವೇ ಅಂತಿಮ ತೀರ್ಪಿನ ದಿನ ನಿರ್ಣಯ



ಇದೊಂದು ಕ್ರಾಂತಿಕಾರಕ ತಿದ್ದುಪಡಿ. ಕಕ್ಷಿದಾರರಲ್ಲಿ ರಾಜಿ ಸಂಧಾನದ ಮುಖಾಂತರ ವ್ಯಾಜ್ಯ ಬಗೆಹರಿಸಲು ಅನುಕೂಲ ಕಲ್ಪಿಸಲು ದೇಶದಲ್ಲಿಯೇ ಮೊದಲ ಬಾರಿಗೆ ಸಿಪಿಸಿ ಕಾಯ್ದೆಗೆ ಬದಲಾವಣೆ ತರಲಾಗಿದೆ

ಎಚ್‌.ಕೆ. ಪಾಟೀಲ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ರಾಜ್ಯದೆಲ್ಲೆಡೆ ಮಳೆಯ ಅಬ್ಬರ

ಪ್ರಜಾವಾಣಿ ವಾರ್ತೆ

ಮಂಗಳೂರು/ಹುಬ್ಬಳ್ಳಿ: ರಾಜ್ಯದ ವಿವಿಧ ಭಾಗಗಳಲ್ಲಿ ಸೋಮವಾರವೂ ಮಳೆಯ ಅಬ್ಬರ ಮುಂದುವರಿದಿದೆ. ಕೆಲವೆಡೆ ಅಂಗನವಾಡಿಗಳಿಗೆ ರಜೆ ಘೋಷಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ದಿನವಿಡೀ ಧಾರಾಕಾರ ಮಳೆಯಾಗಿದೆ. ಗಾಳಿಯೂ ಜೋರಾಗಿತ್ತು.

ಪಶ್ಚಿಮ ಘಟ್ಟ ಹಾಗೂ ಘಟ್ಟದ ಮೇಲ್ಭಾಗದಲ್ಲೂ ಭಾರಿ ಮಳೆಯಾಗಿದ್ದರಿಂದ ಕುಮಾರಧಾರಾ ನದಿ ತುಂಬಿ ಹರಿಯುತ್ತಿದೆ. ಕುಕ್ಕೆ ಸುಬ್ರಹ್ಮಣ್ಯದ ಸ್ನಾನಘಟ್ಟ ಮುಳುಗಡೆಯಾಗಿದೆ. ಕ್ಷೇತ್ರಕ್ಕೆ ಭೇಟಿ ನೀಡಿರುವ ಭಕ್ತರು ಸ್ನಾನಘಟ್ಟದ ಬಳಿ ನದಿಯ ನೀರಿಗೆ ಇಳಿಯದಂತೆ ಸೂಚನೆ ನೀಡಲಾಗಿದೆ.

ಭಾಗಮಂಡಲದಲ್ಲಿ 22.50ಸೆಂ.ಮೀ ಮಳೆ ಸುರಿದಿದ್ದು, ಕಾವೇರಿ ನದಿ ಉಕ್ಕಿ ಹರಿದಿದೆ. ಹಾಸನದ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತವಾಗಿದ್ದು, ಮಣ್ಣು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಣೆಯಾಗಿರುವುದರಿಂದ, ಅಂಗನವಾಡಿಯಿಂದ ಹಿಡಿದು ಪಿಯುಸಿ ವರೆಗಿನ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಮಂಗಳವಾರ ಮತ್ತು ಬುಧವಾರ ರಜೆ ನೀಡಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.



ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ಚಿಕ್ಲಿಹೊಳೆ ಜಲಾಶಯ ಮುಂಗಾರು ಆರಂಭದಲ್ಲಿಯೇ ಭರ್ತಿಯಾಗಿ ಪ್ರವಾಸಿಗರನ್ನು ಸೆಳೆಯುತ್ತಿದೆ

ಮೂವರ ಸಾವು: ಮಳೆಗೆ ಸಂಬಂಧಿಸಿದ ವಿವಿಧ ಪ್ರಕರಣಗಳಲ್ಲಿ ಮೂವರು ಮೃತಪಟ್ಟಿದ್ದಾರೆ. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಏಚಗಳ್ಳಿಯಲ್ಲಿ ವಿದ್ಯುತ್ ತಂತಿ ತುಳಿದು ಸಿದ್ದರಾಜು (55), ಬೆಳಗಾವಿ ಜಿಲ್ಲೆಯ ಗೋಕಾಕದ ಮಹಾಲಿಂಗೇಶ್ವರ ಕಾಲೊನಿಯಲ್ಲಿ ಸೋಮವಾರ ನಸುಕಿನಲ್ಲಿ ಮನೆ ಗೋಡೆ ಕುಸಿದು, ಮೂರು ವರ್ಷದ ಬಾಲಕಿ ಕೃತಿಕಾ ನಾಗೇಶ ಪೂಜಾರಿ ಹಾಗೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕಣವಾಡಿ ಗ್ರಾಮದ ರೈತ ಕಲ್ಲಪ್ಪ ಧರೆಪ್ಪ ಅಂಬಿ (65) ಭಾನುವಾರ ಕೃಷ್ಣಾ ನದಿಯಲ್ಲಿ ಈಜುತ್ತ ತಮ್ಮ ಜಮೀನಿಗೆ ಹೋಗುವಾಗ, ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಮಗು ಸಾವು: ಶವವಿಟ್ಟು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಂಡ್ಯ: ನಗರದ ಸ್ವರ್ಣಸಂದ್ರದ ಸಮೀಪದ ಹೆದ್ದಾರಿಯಲ್ಲಿ ಸಂಚಾರ ಪೊಲೀಸರು ಬೈಕ್‌ಗೆ ಅಡ್ಡಗಟ್ಟಿದ ಪರಿಣಾಮ, ತಾಯಿ ಮಡಿಲಿನಲ್ಲಿದ್ದ ಮಗು ಜಾರಿ ರಸ್ತೆಗೆ ಬಿದ್ದು ಸಾವಿಗೀಡಾಗಿದೆ.

ಮದ್ದೂರು ತಾಲ್ಲೂಕು ಗೊರವನಹಳ್ಳಿಯ ಅಶೋಕ-ವಾಣಿಶ್ರೀ ದಂಪತಿ ಪುತ್ರಿ ರಿತೀಕ್ಷಾ (3) ಮೃತ ಬಾಲಕಿ.

ರಿತೀಕ್ಷಾಳಿಗೆ ಮನೆ ಬಳಿ ನಾಯಿ ಕಚ್ಚಿತ್ತು. ತಕ್ಷಣ ಮಗುವನ್ನು ಬೈಕ್‌ನಲ್ಲಿ ಪತಿಯ ಸಹೋದರ ಭಾಸ್ಕರ್‌ಗೌಡ ಅವರೊಂದಿಗೆ ವಾಣಿಶ್ರೀ ಅವರು ಮದ್ದೂರು ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ದು, ನಂತರ ಹೆಚ್ಚಿನ ಚಿಕಿತ್ಸೆಗೆ ಮಂಡ್ಯ ನಗರದ ಮಿಮ್ಸ್ ಆಸ್ಪತ್ರೆಗೆ ಕರೆತರುವಾಗ ಘಟನೆ ನಡೆದಿದೆ.

'ಹೆಲ್ಮೆಟ್ ಧರಿಸದೆ ಬೈಕ್ ಚಾಲನೆ ಮಾಡುತ್ತಿದ್ದುದರಿಂದ ಪೊಲೀಸರು ತಡೆಯಲು ಮುಂದಾದರು. ಅದೇ ವೇಳೆ ಬೈಕಿನ ಹಿಂಭಾಗದಿಂದ ಅತಿವೇಗವಾಗಿ ಬಂದ ಕ್ಯಾಂಟರ್ ವಾಹನ ಡಿಕ್ಕಿ ಹೊಡೆದು, ಬೈಕ್‌ನಲ್ಲಿದ್ದ ಮೂವರು ಆಯತಪ್ಪಿ ನೆಲಕ್ಕೆ ಬಿದ್ದೆವು. ಮಗುವಿನ ತಲೆಗೆ ಪೆಟ್ಟುಬಿದ್ದು ರಕ್ತಸ್ರಾವದಿಂದ ನರಳುತ್ತಿದ್ದಾಗ, ಸ್ಥಳದಲ್ಲಿದ್ದ ಸಾರ್ವಜನಿಕರು ಆಟೊದಲ್ಲಿ ಮಿಮ್ಸ್ ಆಸ್ಪತ್ರೆಗೆ ಕರೆದೊಯ್ದರು. ಆದರೆ, ಮಗು ಮೃತಪಟ್ಟಿದೆ ಎಂದು ವೈದ್ಯರು ತಿಳಿಸಿದರು' ಎಂದು ಭಾಸ್ಕರಗೌಡ, ಪೊಲೀಸರಿಗೆ ದೂರು ನೀಡಿದ್ದಾರೆ.

7ನೇ ಪುಟ ನೋಡಿ

'ಮೂವರು ಎಎಸ್‌ಐ ಅಮಾನತು'

'ಎಎಸ್‌ಐಗಳಾದ ನಾಗರಾಜು, ಜಯರಾಮು ಮತ್ತು ಗುರುದೇವ್ ಅವರನ್ನು ಘಟನೆಗೆ ಸಂಬಂಧಿಸಿ ಅಮಾನತು ಮಾಡಲಾಗಿದೆ. ಮಗುವಿನ ಕುಟುಂಬಸ್ಥರಿಗೆ ಸೂಕ್ತ ಪರಿಹಾರ ಕೊಡಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು

ಎನ್‌.ಚಲುವರಾಯಸ್ವಾಮಿ
ಜಿಲ್ಲಾ ಉಸ್ತುವಾರಿ ಸಚಿವ

ರಾಜ್ಯ ಸರ್ಕಾರದಿಂದ 11 ವಿಷಯಗಳ ವಿವರಣೆ ಕೇಳಿದ ಅರಣ್ಯ ಸಚಿವಾಲಯ

'ದಟ್ಟಾರಣ್ಯದಲ್ಲಿ ಶರಾವತಿ ಯೋಜನೆ ಏಕೆ?'

• ಮಂಜುನಾಥ ಹೆಬ್ಬಾರ್

ನವದೆಹಲಿ: ದಟ್ಟ ಹಾಗೂ ಅತಿ ದಟ್ಟ ಅರಣ್ಯದಲ್ಲೇ ₹8 ಸಾವಿರ ಕೋಟಿ ಯೋಜನಾ ವೆಚ್ಚದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರ ಮುಂದಾಗಿರುವುದು ಏಕೆ ಎಂದು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯ ತಕರಾರು ಎತ್ತಿದೆ.

ಪಂಪ್ಡ್ ಸ್ಟೋರೇಜ್ ಯೋಜನೆಗೆ ಶರಾವತಿ ವನ್ಯಜೀವಿಧಾಮದ 134 ಎಕರೆ ಕಾಡು ಬಳಸಲು ಅನುಮತಿ ಕೇಳಿ ಸಚಿವಾಲಯಕ್ಕೆ ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಿತ್ತು. ಸಚಿವಾಲಯವು 11 ವಿಷಯಗಳಲ್ಲಿ ವಿವರಣೆ ಕೇಳಿದೆ.

'ಯೋಜನೆಗೆ 3 ಅರಣ್ಯ ವಲಯಗಳಲ್ಲಿ ಕಾಡು ಬಳಸುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ. ಎಲ್ಲ ವಿಭಾಗಗಳಲ್ಲಿ ಸಸ್ಯವರ್ಗದ ಸಾಂದ್ರತೆ 0.1ರಿಂದ 0.7ರ ವರೆಗೆ ಇದೆ' ಎಂದು ಸಚಿವಾಲಯ ಹೇಳಿದೆ.

12ನೇ ಪುಟ ನೋಡಿ

ಹುಲಿ ಕಾರಿಡಾರ್‌ನಲ್ಲಿ ಯೋಜನೆ

'ರಾಜ್ಯ ಸರ್ಕಾರ ಒದಗಿಸಿದ ಮಾಹಿತಿಯ ಪ್ರಕಾರ, ಶರಾವತಿ ಕಣಿವೆಯ ಸಿಂಹ ಬಾಲದ ಸಿಂಗಳೀಕ ಅಭಯಾರಣ್ಯ ಮತ್ತು ಪರಿಸರ ಸೂಕ್ಷ್ಮ ಪ್ರದೇಶದ ಕಾಡನ್ನು ಯೋಜನೆಗೆ ಉಪಯೋಗಿಸಲಾಗುತ್ತದೆ. ಆದಾಗ್ಯೂ, ನಮ್ಮ ವಿಶ್ಲೇಷಣೆಯ ಪ್ರಕಾರ, ಪ್ರಸ್ತಾವಿತ ಅರಣ್ಯ ಪ್ರದೇಶವು ದಾಂಡೇಲಿ ಶರಾವತಿ ಹುಲಿ ಕಾರಿಡಾರ್ ಮೂಲಕ ಹಾದುಹೋಗುತ್ತಿದೆ. ಶರಾವತಿ ವನ್ಯಜೀವಿಧಾಮದಿಂದ 1.95 ಕಿ.ಮೀ ಮತ್ತು ಅಘನಾಶಿನಿ ಸಿಂಗಳೀಕ ಅಭಯಾರಣ್ಯದ ಮೀಸಲು ಪ್ರದೇಶದಿಂದ 9.25 ಕಿ.ಮೀ ದೂರದಲ್ಲಿದೆ. ಈ ಬಗ್ಗೆ ರಾಜ್ಯ ವಿವರಣೆ ನೀಡಬೇಕು. ಜತೆಗೆ, ವನ್ಯಜೀವಿ ಅನುಮೋದನೆ ಪ್ರಸ್ತಾವ ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾಹಿತಿ ನೀಡಬೇಕು' ಎಂದು ಸಚಿವಾಲಯ ಸೂಚಿಸಿದೆ.

'ಶರಾವತಿ ವನ್ಯಜೀವಿಧಾಮ, ಅಘನಾಶಿನಿ ಸಿಂಗಳೀಕ ಅಭಯಾರಣ್ಯ, ಹೊನ್ನಾವರ ಹಾಗೂ ಸಾಗರ ಆಸುಪಾಸಿನ ಅರಣ್ಯಗಳನ್ನು ಸೇರಿಸಿ ಶರಾವತಿ ಸಿಂಹ ಬಾಲದ ಸಿಂಗಳೀಕ ಅಭಯಾರಣ್ಯವೆಂದು 2019ರಲ್ಲೇ ಅಧಿಸೂಚನೆ ಹೊರಡಿಸಲಾಗಿದೆ. ಈ ಪ್ರದೇಶವು 930 ಚದರ ಕಿ.ಮೀ. ಒಳಗೊಂಡಿದೆ. ಪಂಪ್ಡ್ ಸ್ಟೋರೇಜ್ ಯೋಜನೆಗೆ ಶರಾವತಿ ಸಿಂಗಳೀಕ ಅಭಯಾರಣ್ಯದ ಕಾಡು ಬಳಕೆಯಾಗಲಿದೆ' ಎಂದು ರಾಜ್ಯ ಸ್ಪಷ್ಟಪಡಿಸಿದೆ.

ನದಿ ತಿರುವು ಇಲ್ಲ

'ಪ್ರಸ್ತಾವಿತ ಯೋಜನೆ ಮತ್ತು ಜಲಾಶಯದಿಂದಾಗಿ ನದಿಯ ಜಲಚರ ಪ್ರಾಣಿ ಪ್ರಭೇದಗಳ ಮೇಲೆ ಉಂಟಾಗುವ ಪರಿಣಾಮದ ಕುರಿತು ಯಾವುದೇ ಅಧ್ಯಯನ ಮಾಡಲಾಗಿದೆಯೇ ಎಂಬುದನ್ನು ರಾಜ್ಯ ಸರ್ಕಾರ ಸ್ಪಷ್ಟಪಡಿಸಬೇಕು' ಎಂದು ಸಚಿವಾಲಯ ಪ್ರಶ್ನಿಸಿದೆ. 'ಈ ಯೋಜನೆಗೆ ಯಾವುದೇ ನದಿಯನ್ನು ತಿರುಗಿಸು ವುದಿಲ್ಲ. ಈಗಿರುವ ಎರಡು ಜಲಾಶಯಗಳನ್ನು ಸಂಪರ್ಕಿಸಲು ಭೂಗತ ನೀರು ವಾಹಕ ವ್ಯವಸ್ಥೆ ನಿರ್ಮಿಸಲಾಗುತ್ತದೆ' ಎಂದು ರಾಜ್ಯ ವಿವರಣೆ ನೀಡಿದೆ.



‘ಖರ್ಗೆ ಹೇಳಿಕೆ ಖಂಡನೀಯ’

ಬೆಂಗಳೂರು: ‘ಹೊಸಪೇಟೆಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ‘ಬೇಡ ಜಂಗಮ ಹೆಸರಿನಲ್ಲಿ, ಲಿಂಗಾಯತ ಜಂಗಮರು ನಕಲಿ ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳುತ್ತಿದ್ದಾರೆ’ ಎಂಬ ಆರೋಪ ಮಾಡಿರುವುದು ಖಂಡನೀಯ’ ಎಂದು ಅಖಿಲ ಕರ್ನಾಟಕ ಡಾ. ಅಂಬೇಡ್ಕರ್ ಬೇಡಜಂಗಮ ರಕ್ಷಣಾ ವೇದಿಕೆಯ ರಾಜ್ಯ ಸಂಚಾಲಕಿ ಎಂ.ಇ. ಸುಜಾತಾ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೇಡ ಜಂಗಮಗರಿಗೆ ಜಾತಿ ಪ್ರಮಾಣ ಪತ್ರ ನೀಡಿದ ಅಧಿಕಾರಿಗಳಿಗೆ ಜೈಲಿಗೆ ಕಳುಹಿಸಬೇಕು ಎಂಬ ಹೇಳಿಕೆ ಸರಿಯಲ್ಲ. ನಾವು ಬೇಡ ಜಂಗಮರು ಎಂಬುದಕ್ಕೆ ಸರ್ಕಾರಿ ದಾಖಲೆಗಳು, ಕೋರ್ಟ್‌ನ ಆದೇಶಗಳಿವೆ. ನಾವು ಬೇಡ ಜಂಗಮರು ಅಲ್ಲ ಎಂಬುದಕ್ಕೆ ನಿಮ್ಮ ಬಳಿ ಏನಾದರೂ ದಾಖಲೆಗಳಿವೆಯಾ’ ಎಂದು ಪ್ರಶ್ನಿಸಿದರು.

ಪ್ರವಾಹ ಪೀಡಿತ ಪ್ರದೇಶದಲ್ಲಿ ಸಮಸ್ಯೆ ಬಗೆಹರಿಸಿ: ಮಹೇಶ್ವರ್ ರಾವ್ ಸೂಚನೆ

ಜಲಾವೃತ ತಡೆಗೆ ಕ್ರಮ ಕೈಗೊಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿದುಹೋಗುವಂತೆ ಮಾಡಿ, ಸುತ್ತಮುತ್ತಲಿನ ಪ್ರದೇಶಗಳು ಜಲಾವೃತ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.



ಮಹೇಶ್ವರ್ ರಾವ್

ಮಳೆಗಾಲದಲ್ಲಿ ವಲಯವಾರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿ ಅವರು ಮಾತನಾಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಗುರುತಿಸಿರುವಂತಹ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಮಸ್ಯೆ ಬಗೆಹರಿಸಬೇಕು.

ಮುಖ್ಯಾಂಶಗಳು
- 210 ಪ್ರವಾಹ ಪೀಡಿತ ಪ್ರದೇಶ
- 166 ಕಡೆ ಬಗೆಹರಿದ ಸಮಸ್ಯೆ
- 44 ಸ್ಥಳಗಳಲ್ಲಿ ಮುಂದುವರಿದ ಸಂಕಷ್ಟ

ಮಳೆಗಾಲದ ವೇಳೆ ಪ್ರತಿ ವಲಯದ ಎಲ್ಲ ಅಧಿಕಾರಿಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಬೇಕು ಎಂದರು.

ರಾಜಕಾಲುವೆ ವಿಭಾಗದಿಂದ ನಿರಂತರವಾಗಿ ಹೂಳು ತೆಗೆದು ಸ್ವಚ್ಛತೆ ಕಾಪಾಡುವ ಕೆಲಸ ಮಾಡಬೇಕು. ಆರ್‌ಸಿಸಿ ತಡೆಗೋಡೆ ನಿರ್ಮಾಣ ಮಾಡದ ರಾಜಕಾಲುವೆಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ತುಂಬಿಕೊಳ್ಳದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ನಗರದಲ್ಲಿ 210 ಪ್ರವಾಹ ಪೀಡಿತ ಪ್ರದೇಶಗಳ ಪೈಕಿ ಈಗಾಗಲೇ 166 ಕಡೆ ಸಮಸ್ಯೆಯನ್ನು ಬಗೆಹರಿಸಲಾಗಿದ್ದು, ವಲಯ ಆಯುಕ್ತರು ಅವುಗಳಿಗೆ ದೃಢೀಕರಣ ನೀಡಬೇಕು. ಬಾಕಿಯಿರುವ 44 ಸ್ಥಳಗಳಲ್ಲಿ ಕೂಡಲೇ ತಾತ್ಕಾಲಿಕ ಕ್ರಮ ಕೈಗೊಳ್ಳುವುದರ ಜೊತೆಗೆ ಶಾಶ್ವತ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು ಎಂದರು.


183 ಕೆರೆಗಳಲ್ಲಿ 13 ಕೆರೆಗಳಿಗೆ ತೂಬು (ಸ್ಲೂಯಿಸ್ ಗೇಟ್) ಅಳವಡಿಸಲಾಗಿದೆ. ತೂಬು ಅಳವಡಿಸಿರುವ ಕೆರೆಗಳಲ್ಲಿ ನೀರು ತುಂಬಿದ್ದರೆ ನೀರಿನ ಮಟ್ಟವನ್ನು ಕಡಿಮೆ ಮಾಡಿ ಮಳೆ ನೀರು ತುಂಬಲು ಅನುವಾಗುವಂತೆ ಮಾಡಬೇಕು. ಉಳಿದ ಎಲ್ಲ ಕೆರೆಗಳಿಗೂ ಹಂತ-ಹಂತವಾಗಿ ತೂಬುಗಳನ್ನು ಅಳವಡಿಸಲು ಹಾಗೂ ತೆರವು ಮಾಡಲು ಯೋಜನೆ ರೂಪಿಸಬೇಕು ಎಂದು ಕೆರೆಗಳ ವಿಭಾಗದ ಅಧಿಕಾರಿಗಳಿಗೆ ಸೂಚಿಸಿದರು.

ಮಳೆಗಾಲದ ವೇಳೆ ಧರೆಗುರುಳಿದ ಮರ, ಕೊಂಬೆಗಳನ್ನು ಕೂಡಲೇ ತೆರವು ಮಾಡಲು ತಂಡಗಳು ಸದಾ ಸನ್ನದ್ಧವಾಗಿರಬೇಕು. ಒಣಗಿದ, ಅಪಾಯದ ಸ್ಥಿತಿಯಲ್ಲಿರುವ ಮರ, ರೆಂಬೆ, ಕೊಂಬೆಗಳನ್ನು ಗುರುತಿಸಿ ತೆರವುಗೊಳಿಸಬೇಕು ಎಂದರು.

ರಸ್ತೆ ಬದಿಯಲ್ಲಿ ಆಟೋ ಟಿಪ್ಪರ್‌ಗಳಿಂದ ಕಾಂಪ್ಯಾಕ್ಟರ್‌ಗಳಿಗೆ ತ್ಯಾಜ್ಯ ವರ್ಗಾವಣೆ ಮಾಡುತ್ತಿದ್ದು, ಇದನ್ನು ಸ್ಥಳಾಂತರ ಮಾಡಬೇಕು. ಪಾಲಿಕೆಯ ಜಾಗ ಅಥವಾ ಇನ್ನಿತರೆ ಸ್ಥಳಗಳನ್ನು ಗುರುತಿಸಬೇಕು ಎಂದು ಹೇಳಿದರು.

ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷಾ ಕಾರ್ಯವನ್ನು ಎಂಟೂ ವಲಯಗಳ ವಲಯ ಆಯುಕ್ತರು ಮೇಲ್ವಿಚಾರಣೆ ಮಾಡಬೇಕು ಎಂದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಕೆ ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಅವಿನಾಶ್ ಮೆನನ್ ರಾಜೇಂದ್ರನ್, ಪ್ರೀತಿ ಗೆಹ್ಲೋಟ್, ವಲಯ ಆಯುಕ್ತರಾದ ಸತೀಶ್, ರಮ್ಯಾ, ದಿಗ್ವಿಜಯ್ ಬೋಡ್ಕೆ, ಕರೀಗೌಡ, ಸ್ನೇಹಲ್, ರಮೇಶ್ ಉಪಸ್ಥಿತರಿದ್ದರು.



ನಗರದಲ್ಲಿ ದಾಖಲೆ ಮಳೆ

ಬೆಂಗಳೂರು: ನಗರದಲ್ಲಿ ದಶಕದ ಅತಿಹೆಚ್ಚು ಮಳೆ 30.79 ಸೆಂ.ಮೀ ಮೇ ತಿಂಗಳಲ್ಲಿ (26ರವರೆಗೆ) ದಾಖಲಾಗಿದ್ದು, 2023ರ ಮೇ ನಲ್ಲಿ ಸುರಿದ 30.54 ಸೆಂ.ಮೀ ಮಳೆಯ ಪ್ರಮಾಣವನ್ನು ಮೀರಿದೆ.

ನಗರದಲ್ಲಿ ಪೂರ್ವ ಮುಂಗಾರಿನಲ್ಲಿ ಮಾರ್ಚ್ 1ರಿಂದ ಮೇ 26ರವರೆಗೆ 34.06 ಸೆಂ.ಮೀ ಮಳೆಯಾಗಿದೆ. ಇದು ವಾಡಿಕೆಗಿಂತ (15.5 ಸೆಂ.ಮೀ) ದುಪ್ಪಟ್ಟಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕಳೆದ ಒಂದು ದಶಕದಲ್ಲಿ ವರ್ಷದ ಮೊದಲ ಐದು ತಿಂಗಳಲ್ಲಿ ಅತಿಹೆಚ್ಚು ಮಳೆ ಸುರಿದ ದಾಖಲೆಯೂ ಈ ವರ್ಷದಲ್ಲೇ ಆಗಿದೆ.

ವೈನ್ ಪರವಾನಗಿ: ಶುಲ್ಕ ಕಡಿಮೆ ಮಾಡಿ

ಬೆಂಗಳೂರು: ಪರವಾನಗಿ ಶುಲ್ಕ, ಮೊಲಾಸಸ್ ಮೇಲಿನ ಶುಲ್ಕ ಕಡಿಮೆ ಮಾಡುವಂತೆ ವೈನ್ ವ್ಯಾಪಾರಿಗಳ ಒಕ್ಕೂಟದ ಪದಾಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು.

ಕಾವೇರಿ ನಿವಾಸದಲ್ಲಿ ಸೋಮವಾರ ಭೇಟಿ ಮಾಡಿ, ಹಲವು ಬೇಡಿಕೆಗಳ ಈಡೇರಿಕೆ ಕುರಿತು ಚರ್ಚಿಸಿದರು. ‘ಅಬಕಾರಿ ಹಾಗೂ ಆರ್ಥಿಕ ಇಲಾಖೆ ಸಚಿವರು, ಅಧಿಕಾರಿಗಳ ಜತೆ ಚರ್ಚೆ ನಡೆಸಿ, ಬೇಡಿಕೆಗಳ ಈಡೇರಿಕೆಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

ಕಸದ ಸೆಸ್ ಅಧಿಕ: ಅಶೋಕ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸದ ಸೆಸ್ ಹೆಸರಿನಲ್ಲಿ ರಾಜ್ಯ ಸರ್ಕಾರ ಜನರ ಹಣವನ್ನು ಲೂಟಿ ಮಾಡುತ್ತಿದೆ. ಬೆಂಗಳೂರು ಜನರ ಬದುಕನ್ನು ದುಬಾರಿಯಾಗಿಸಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು. ಕಸ ವಿಲೇವಾರಿಗೂ ತೆರಿಗೆ ಹಾಕಲಾಗಿದೆ. ಸಣ್ಣ ಮನೆಗಳಿಗೂ ₹720 ನಿಗದಿ ಮಾಡಿದ್ದಾರೆ. ಕಸವನ್ನು ಅವರೇ ನಿರ್ವಹಣೆ ಮಾಡಿಕೊಳ್ಳುತ್ತಿದ್ದರೂ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ₹1,800 ಇದ್ದ ಸೆಸ್ ₹18,000ಕ್ಕೆ ಹೆಚ್ಚಿಸಲಾಗಿದೆ ಎಂದು ದೂರಿದರು.



ಮಂಡ್ಯದಲ್ಲಿ ಪೊಲೀಸರ ನಿರ್ಲಕ್ಷ್ಯದಿಂದ ಬೈಕ್‌ನಿಂದ ಬಿದ್ದು ಮಗು ಮೃತಪಟ್ಟಿದೆ. ಮಗುವಿನ ಕುಟುಂಬಕ್ಕೆ ಸರ್ಕಾರ ₹25 ಲಕ್ಷ ಪರಿಹಾರ ನೀಡಬೇಕು

ಆರ್. ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

ಜಮೀನು, ಖಾಲಿ ನಿವೇಶನ, ಮಾಲ್‌ಗಳು, ಆಸ್ಪತ್ರೆಗಳ ಕಸದ ಸೆಸ್ ಜಾಸ್ತಿಯಾಗಿದೆ. ಕಸವೇ ಉತ್ಪತ್ತಿ ಆಗದ ಜಾಗದಲ್ಲಿ ಬಿಬಿಎಂಪಿ ಹಣ ಉತ್ಪತ್ತಿ ಮಾಡುತ್ತಿದೆ. ಎರಡು ವರ್ಷಗಳಿಂದ ಅಭಿವೃದ್ಧಿ ಕೆಲಸಗಳೂ ಆಗಿಲ್ಲ ಎಂದರು.

ನೀತಿ ಆಯೋಗದ ಸಭೆಗೆ ಗೈರು ಏಕೆ?: ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ಆರೋಪ ಮಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನೀತಿ ಆಯೋಗದ ಸಭೆಗೆ ಏಕೆ ಗೈರುಹಾಜರಾದರು. ರಾಜಸ್ತಾನದ ಕಾಂಗ್ರೆಸ್ ಸಭೆಗೆ, ರಾಹುಲ್ ಗಾಂಧಿ ಭೇಟಿಗೆ, ಕ್ರಿಕೆಟ್ ಸ್ಟೇಡಿಯಂಗೆ ಹೋಗಿ ಸಮೋಸ, ಕಡ್ಲೆಪುರಿ ತಿನ್ನಲು ಸಮಯ ಇದೆ. ಕೇಂದ್ರ ಸರ್ಕಾರದ ಬಳಿ ಅನುದಾನ ಕೇಳಲು ಸಮಯ ಇಲ್ಲವೇ ಎಂದು ಪ್ರಶ್ನಿಸಿದರು.

ಕೋವಿಡ್ ನಿಯಂತ್ರಣಕ್ಕೆ ಆಗ್ರಹ: ರಾಜ್ಯದಲ್ಲಿ ಕೋವಿಡ್ ಮತ್ತೆ ಹರಡುತ್ತಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳನ್ನು ಅಲೆಸುತ್ತಾರೆ. ಎಲ್ಲ ಆಸ್ಪತ್ರೆಗಳಲ್ಲೂ ಕೋವಿಡ್ ವಾರ್ಡ್ ಆರಂಭಿಸಬೇಕು. ಔಷಧ ಪೂರೈಸಬೇಕು. ಸರ್ಕಾರವೇ ಪೂರ್ತಿ ವೆಚ್ಚ ಭರಿಸಬೇಕು ಎಂದು ಒತ್ತಾಯಿಸಿದರು.

ಎಂಡಿಎ ಪ್ರಭಾರ ಆಯುಕ್ತ ರಕ್ಷಿತ್

ಮೈಸೂರು: ಇಲ್ಲಿನ ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಪ್ರಭಾರ ಆಯುಕ್ತರನ್ನಾಗಿ ಕೆ.ಆರ್. ರಕ್ಷಿತ್ ಅವರನ್ನು ನೇಮಿಸಿ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ರಕ್ಷಿತ್ ಪ್ರಸ್ತುತ ಮೈಸೂರು ಉಪ ವಿಭಾಗಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

2014ರ ಕೆಎಎಸ್ ಬ್ಯಾಚ್‌ನ ಅಧಿಕಾರಿಯಾದ ರಕ್ಷಿತ್ ಇದಕ್ಕೂ ಮುನ್ನ ಸಕಲೇಶಪುರ, ಹರಿಹರ ಹಾಗೂ ಮೈಸೂರು ತಹಶೀಲ್ದಾರ್ ಆಗಿ ಹಾಗೂ ಬಿಬಿಎಂಪಿ ಸಹಾಯಕ ಆಯುಕ್ತರಾಗಿಯೂ ಕಾರ್ಯ ನಿರ್ವಹಿಸಿದ್ದರು.


ಭೀಮನಕುಪ್ಪೆ: ₹12 ಕೋಟಿ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಕಾರ್ಯಾಚರಣೆ ನಡೆಸಿ, ಭೀಮನಕುಪ್ಪೆ ಗ್ರಾಮದಲ್ಲಿ ಒತ್ತುವರಿಯಾಗಿದ್ದ ಸುಮಾರು ₹12 ಕೋಟಿ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ಭೀಮನಕುಪ್ಪೆ ಗ್ರಾಮದ ಸರ್ವೆ ನಂ. 206/1ರಲ್ಲಿನ 1 ಎಕರೆ 26 ಗುಂಟೆ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಕಂದಾಯ ನಿವೇಶನ ಹಾಗೂ ಶೆಡ್‌ಗಳನ್ನು ತೆರವುಗೊಳಿಸಿ, ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು.

ಪ್ರಾಧಿಕಾರದ ಕಾರ್ಯನಿರತ ಪಡೆಯ ಡಿವೈಎಸ್‌ಪಿ, ನಾಡಪ್ರಭು ಕೆಂಪೇಗೌಡ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಯಿತು.



ಭೀಮಕುಪ್ಪೆಯಲ್ಲಿ ಅನಧಿಕೃತ ಶೆಡ್‌ಗಳನ್ನು ತೆರವುಗೊಳಿಸಲಾಯಿತು



ವಿದ್ಯುತ್ ಪರಿವರ್ತಕದ ತಳಪಾಯ ಕುಸಿದ ಸ್ಥಳದಲ್ಲಿ ದುರಸ್ತಿ ಕೈಗೊಂಡಿರುವುದು

ವಿದ್ಯುತ್ ಪರಿವರ್ತಕದ ತಳಪಾಯ ಸರಿಪಡಿಸಿದ ಬೆಸ್ಕಾಂ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಉಲ್ಲಾಳು ವಾರ್ಡ್‌ನ ನಾಗದೇವನಹಳ್ಳಿಯ ಪಾದಚಾರಿ ಮಾರ್ಗದಲ್ಲಿರುವ ವಿದ್ಯುತ್ ಪರಿವರ್ತಕ ಇರುವ ಜಾಗದ ತಳಪಾಯ ಕುಸಿದಿತ್ತು. ಬೆಸ್ಕಾಂ ಸಿಬ್ಬಂದಿ ಕುಸಿದ ಜಾಗವನ್ನು ಸೋಮವಾರ ದುರಸ್ತಿಗೊಳಿಸಿದ್ದಾರೆ.

‘ಪ್ರಜಾವಾಣಿ’ಯ ಮೇ 26ರ ಸಂಚಿಕೆಯ ಕುಂದು ಕೊರತೆ ವಿಭಾಗದಲ್ಲಿ ‘ವಿದ್ಯುತ್ ಪರಿವರ್ತಕ ಇರುವ ಜಾಗದ ಕುಸಿತ’ ಎಂಬ ಶೀರ್ಷಿಕೆ ಅಡಿಯಲ್ಲಿ ಸಾರ್ವಜನಿಕರ ಅಹವಾಲು ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಬೆಸ್ಕಾಂ ಸಿಬ್ಬಂದಿ ವಿದ್ಯುತ್ ಪರಿವರ್ತಕ ಇರುವ ಜಾಗದ ತಳಪಾಯ ಕುಸಿದ ಸ್ಥಳದಲ್ಲಿ ದುರಸ್ತಿ ಕಾರ್ಯ ಕೈಗೊಂಡಿದ್ದಾರೆ.

ಶಾಲಾ ಮಕ್ಕಳಲ್ಲಿ ಸಮೀಪದೃಷ್ಟಿ ಸಮಸ್ಯೆ

ಬೆಂಗಳೂರು: ಭಾರತದಲ್ಲಿ ಶೇ 23ರಷ್ಟು ಶಾಲಾ ಮಕ್ಕಳು ಸಮೀಪದೃಷ್ಟಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. 2050ರ ವೇಳೆಗೆ ಇದು ಶೇ 53 ತಲುಪುವ ಸಾಧ್ಯತೆ ಇದೆ ಎಂದು ಭಾರತದ ಸಮುದಾಯ ನೇತ್ರಶಾಸ್ತ್ರಜ್ಞರ ಸಂಘ (ಎಸಿಒಐಎನ್) ತಿಳಿಸಿದೆ.

ಮಕ್ಕಳಿಗೆ ತಮಗೆ ದೃಷ್ಟಿ ಸಮಸ್ಯೆ ಇದೆ ಎಂಬುದು ತಿಳಿದಿರುವುದಿಲ್ಲ. ಮಗುವಿಗೆ ಶಾಲೆಯಲ್ಲಿ ಓದಲು ಕಷ್ಟವಾದ ಮೇಲೆ ಪೋಷಕರಿಗೆ ಗೊತ್ತಾಗುತ್ತದೆ. ನಗರ ಪ್ರದೇಶಗಳಲ್ಲಿ ಮಕ್ಕಳಲ್ಲಿ ಸಮೀಪದೃಷ್ಟಿ ಸಮಸ್ಯೆ ಹೆಚ್ಚಾಗುತ್ತಿದೆ ಎಂದು ಸಮೀಪದೃಷ್ಟಿ ಜಾಗೃತಿ ವಾರ ಆಚರಣೆಯಲ್ಲಿ ನೇತ್ರ ತಜ್ಞರು ತಿಳಿಸಿದ್ದಾರೆ.

ರಾಜೀವ್ ಗಾಂಧಿ ಆರೋಗ್ಯ ಮತ್ತು ವಿಜ್ಞಾನ ವಿಶ್ವವಿದ್ಯಾಲಯದ ಜರ್ನಲ್ ಅಧ್ಯಯನದ ಪ್ರಕಾರ, ‘ಗ್ರಾಮೀಣ ಪ್ರದೇಶಕ್ಕಿಂತ ನಗರಗಳಲ್ಲಿ ದೃಷ್ಟಿ ದೋಷ ಹೆಚ್ಚಿದೆ. ಬೆಂಗಳೂರಿನ ನಗರದಲ್ಲಿ 5ವರ್ಷದಿಂದ 8 ವರ್ಷ ವಯಸ್ಸಿನ ಮಕ್ಕಳಲ್ಲಿ ಸುಮಾರು ಶೇ 13ರಷ್ಟು, 9-15 ವಯೋಮಾನದವರಲ್ಲಿ ಶೇ 40 ಕ್ಕಿಂತ ಹೆಚ್ಚು ಮಕ್ಕಳು ಸಮೀಪ ದೃಷ್ಟಿ ಸಮಸ್ಯೆಯಿಂದ ಬಳಲುತ್ತಿದ್ದಾರೆ’ ಎಂದು ನೇತ್ರತಜ್ಞರು ಮಾಹಿತಿ ನೀಡಿದ್ದಾರೆ.

ಸ್ಮಾರ್ಟ್‌ಫೋನ್, ಟ್ಯಾಬ್ಲೆಟ್‌ಗಳ ಪರದೆ ನೋಡುವುದರಲ್ಲಿ ಹೆಚ್ಚು ಸಮಯ ಕಳೆಯುವುದು, ಹೊರಾಂಗಣ ಆಟದಲ್ಲಿ ಕಡಿಮೆ ತೊಡಗಿಕೊಂಡಿರುವುದು ಇದಕ್ಕೆ ಮುಖ್ಯ ಕಾರಣ ಎಂದು ನೇತ್ರಧಾಮ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಸವಿತಾ ಅರುಣ್ ತಿಳಿಸಿದರು.

ಮಗು ತುಂಬಾ ಹತ್ತಿರದಿಂದ ಟಿ.ವಿ ನೋಡಲು ಪ್ರಾರಂಭಿಸಿದಾಗ, ಪುಸ್ತಕಗಳನ್ನು ಕಣ್ಣಿಗೆ ಹತ್ತಿರ ಹಿಡಿದಿಟ್ಟುಕೊಂಡು ಓದುವಾಗ, ಶಾಲೆಯಲ್ಲಿ ಬೋರ್ಡ್‌ಮೇಲೆ ಬರೆದಿದ್ದು ಕಾಣಿಸುತ್ತಿಲ್ಲ ಎಂದು ದೂರಿದಾಗ ಮಾತ್ರ ಸಮೀಪ ದೃಷ್ಟಿ ಸಮಸ್ಯೆಯ ಚಿಹ್ನೆಗಳನ್ನು ಪೋಷಕರು ಗಮನಿಸುತ್ತಾರೆ. ಮಗುವಿಗೆ ಸಮಸ್ಯೆ ಆರಂಭವಾದಾಗಲೇ ಪತ್ತೆ ಹಚ್ಚಿದರೆ ಪರಿಹಾರ ಕಂಡುಕೊಳ್ಳುವುದು ಸುಲಭ ಎಂದು ಅವರು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ಶನೇಶ್ವರಸ್ವಾಮಿ ಜಯಂತಿ: ಬೆಳಿಗ್ಗೆ 6.30ಕ್ಕೆ ಶನೇಶ್ವರಸ್ವಾಮಿಯ ಮೂಲ ವಿಗ್ರಹಕ್ಕೆ ಫಲಪಂಚಾಮೃತ ಅಭಿಷೇಕ, 9ಕ್ಕೆ ವಿಶೇಷವಾದ ಮಹಾ ಅಲಂಕಾರ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ಶನಿದೇವರ ದೇವಾಲಯ, ಪ್ಯಾಲೇಸ್ ಗುಟ್ಟಹಳ್ಳಿ

2024–25ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಕನ್ನಡ ಸಂಘ, ಎನ್‌ಸಿಸಿ, ಎನ್‌ಎಸ್‌ಎಸ್, ಯುವ ರೆಡ್‌ಕ್ರಾಸ್, ರೇಂಜರ್ಸ್ ಮತ್ತು ರೋವರ್ಸ್ ಇತರೆ ಚಟುವಟಿಕೆಗಳ ಸಮಾರೋಪ ಸಮಾರಂಭ: ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಕೆ. ಕೃಷ್ಣಪ್ಪ, ಸುರ್‌ಜಿತ್ ಸಿಂಗ್, ಇಂದುಮತಿ ಸಾಲಿಮಠ, ಉಪಸ್ಥಿತಿ: ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 10.30

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ, ‘ಡಾ.ಬಿ.ಆರ್. ಅಂಬೇಡ್ಕರ್’ ಪ್ರಶಸ್ತಿ, ‘ಸಾರಿಗೆ ರತ್ನ’ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಕಲ್ಯಾಣ ಸಿರಿ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಪ್ರಶಸ್ತಿ ಪ್ರದಾನ: ಕೆ.ಎನ್. ರಾಜಣ್ಣ, ಅಧ್ಯಕ್ಷತೆ: ಎಸ್.ಆರ್. ಶ್ರೀನಿವಾಸ್, ಭಾಗವಹಿಸುವವರು: ರಾಜು ಕಾಗೆ, ಶರತ್ ಬಚ್ಚೇಗೌಡ, ಮೊಹಮ್ಮದ್ ರಿಜ್ವಾನ್ ನವಾಬ್, ಪೀರಾಸಾಬ ಅ. ಕೌತಾಳ, ಮಲ್ಲೇಪುರಂ ಜಿ. ವೆಂಕಟೇಶ್, ಎಫ್.ಎಚ್. ಜಕ್ಕಪ್ಪನವರ, ಮಾವಳ್ಳಿ ಶಂಕರ್, ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ನೌಕರರ ಸಂಘ, ಸ್ಥಳ: ಪುಟ್ಟಣ್ಣ ಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3.30

‘ಬನ್ನಿರಿ ಭಾಮೆಯರೆಲ್ಲಾ’ ರಂಗಗೀತೆಗಳ ಗಾಯನ: ಉದ್ಘಾಟನೆ: ಅನುಪಮಾ ಹೊಸಕೆರೆ, ಆಯೋಜನೆ: ಚಂಕರ, ಸ್ಥಳ: ಪ್ರಯೋಗ್ ಥಿಯೇಟರ್, ಹೊರವರ್ತುಲ ರಸ್ತೆ, ಮೂರನೇ ಹಂತ ಬನಶಂಕರಿ, ಸಂಜೆ 4.30

ಡಾ.ಬಿ.ಎಂ. ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವ, ಬಿ.ಟಿ. ಜಾಹ್ನವಿ ಅವರು ಸಂಪಾದಿಸಿದ ‘ಮುಟ್ಟಿಸಿಕೊಂಡವರು’ ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಅತಿಥಿ: ಮೋಹನ್ ಕೊಂಡಜ್ಜಿ, ಪುಸ್ತಕ ಪರಿಚಯ: ದು. ಸರಸ್ವತಿ, ವಿ.ಎಲ್. ನರಸಿಂಹಮೂರ್ತಿ, ಉಪಸ್ಥಿತಿ: ದಿಲಾವರ್ ರಾಮದುರ್ಗ, ವಿಷ್ಣುಕುಮಾರ್ ಎಸ್., ಆಯೋಜನೆ: ಬೀ ಕಲ್ಚರ್ ಪ್ರಕಾಶನ, ಸ್ಥಳ: ಕೊಂಡಜ್ಜಿ ಸಭಾಂಗಣ, ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಸಂಜೆ 5

‘ವೈಯಾಕರಣಿ ಗರಣಿ ಕೃಷ್ಣಾಚಾರ್ಯ ದತ್ತಿ ‘ಕಾವ್ಯ ಮೀಮಾಂಸೆ–ಬೇಂದ್ರೆ ದೃಷ್ಟಿ’ ಉಪನ್ಯಾಸ: ಸುರೇಶ್ ನಾಗಲಮಡಿಕೆ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5


ಕುರುಬ ವೀರ ಗೊಲ್ಲಾಳ ಜಯಂತಿ: ಉದ್ಘಾಟನೆ: ದೇವೇಂದ್ರಕುಮಾರ್ ಪತ್ತಾರ್, ಆಶಯ ನುಡಿ: ಎಸ್. ಪಿನಾಕಪಾಣಿ, ‘ಕಾಯಕದಲ್ಲಿ ದೇವರನ್ನು ಕಂಡ ಕುರುಬ ವೀರ ಗೊಲ್ಲಾಳೇಶರು’ ಉಪನ್ಯಾಸ: ವಿದ್ಯಾಶ್ರೀ ಹರಕೂಡೆ, ಅತಿಥಿ: ಆರ್. ಚನ್ನಕೇಶವಮೂರ್ತಿ, ಅಧ್ಯಕ್ಷತೆ: ಎಸ್.ಆರ್. ಹೊನ್ನಲಿಂಗಯ್ಯ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಪೂರ್ಣಚಂದ್ರ ತೇಜಸ್ವಿ ರಂಗಮಂದಿರ, ಡಿ ಗ್ರೂಪ್ ಬಡಾವಣೆ, ಸಂಜೆ 5.30

‘ಹೆಸರೆ ಇಲ್ಲದವರು’ ನಾಟಕ ಪ್ರದರ್ಶನ: ನಿರ್ದೇಶನ: ರಾಜಗುರು ಹೊಸಕೋಟೆ, ಆಯೋಜನೆ: ರಂಗಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7.30

‘ಷೇಕ್ಸ್‌ಪಿಯರ್‌ನ ಬುರಡೆ’ ನಾಟಕ ಪ್ರದರ್ಶನ: ನಿರ್ದೇಶನ: ಪ್ರಭಾಕರ್ ಎಸ್. ರಾವ್, ಆಯೋಜನೆ: ಧ್ವನಿ, ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕ್ಷೇಮ–ಕುಶಲ ಓದಿರಿ





ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಹೊಸ ಪ್ರಯತ್ನ

ಹಸಿರು ಬೆಂಗಳೂರಿಗೆ 'ನಗರ ತೋಟಗಾರಿಕೆ' ಉಸಿರು

• ಗಾಣಧಾಳು ಶ್ರೀಕಂಠ

ಬೆಂಗಳೂರು: ರಸ್ತೆ ಬದಿಯಲ್ಲಿ ಗಿಡಗಳನ್ನು ನೆಟ್ಟು ಬೆಂಗಳೂರನ್ನು ಹಸಿರಾಗಿಸುವ ಪ್ರಯತ್ನ ನಿರಂತರವಾಗಿದೆ. ಈಗ ಅದಕ್ಕೆ ಬೆಂಬಲವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ 'ನಗರ ತೋಟಗಾರಿಕೆ' ಮೂಲಕ ನಗರದ ಮನೆ ಮನೆಯಲ್ಲಿ ಹಸಿರು ಬೆಳೆಸಲು ನಾಗರಿಕರನ್ನು ಅಣಿಗೊಳಿಸುವ ಕೆಲಸಕ್ಕೆ ಮುಂದಾಗಿದೆ.

ಮನೆ ಅಂಗಳದಲ್ಲಿ, ತಾರಸಿಯಲ್ಲಿ, ಖಾಲಿ ನಿವೇಶನಗಳಲ್ಲಿ ಕೈ ತೋಟಗಳ ನಿರ್ಮಾಣಕ್ಕಾಗಿ ಕೃಷಿ ವಿಶ್ವವಿದ್ಯಾಲಯ ಎರಡು ದಿನಗಳ ಅಲ್ಪಾವಧಿ ಕೋರ್ಸ್ (ತರಬೇತಿ) ಆರಂಭಿಸಿದೆ. ಇದರ ಭಾಗವಾಗಿ ಕಳೆದ ತಿಂಗಳು ಕಾರ್ಯಾಗಾರವನ್ನು ಆಯೋಜಿಸಿತ್ತು. ಇದಕ್ಕೆ ಉತ್ತಮ ಪ್ರತಿಕ್ರಿಯೆಯೂ ವ್ಯಕ್ತವಾಯಿತು. ಈ ಕಾರಣದಿಂದ ಕೃಷಿ ವಿಶ್ವವಿದ್ಯಾಲಯ ವರ್ಷಕ್ಕೊಮ್ಮೆ ಆಯೋಜಿಸುತ್ತಿದ್ದ 'ನಗರ ತೋಟಗಾರಿಕೆ' ತರಬೇತಿಯನ್ನು ಈಗ ತಿಂಗಳಿಗೊಮ್ಮೆ ಆಯೋಜಿಸಲು ಯೋಜನೆ ರೂಪಿಸಿದೆ.

ನಗರ ನಿವಾಸಿಗಳು ಇರುವಷ್ಟೇ ಜಾಗದಲ್ಲಿ ಮನೆಗಾಗುವಷ್ಟು ತರಕಾರಿ, ಹಣ್ಣು, ಹೂವು ಬೆಳೆದುಕೊಳ್ಳಲು ಆರಂಭಿಸಿದರೆ, ನಗರದ ಮನೆ ಮನೆಯೂ ಹಸಿರಾಗುತ್ತದೆ. ಹಸಿರು ಬೆಳೆಸಿದವರಿಗೆ ಪೌಷ್ಟಿಕ ಆಹಾರವೂ ಲಭ್ಯವಾಗುತ್ತದೆ. ಹೀಗಾಗಿ, ಕೃಷಿ ವಿಶ್ವವಿದ್ಯಾಲಯದ 'ನಗರ ತೋಟಗಾರಿಕೆ' ಪರಿಕಲ್ಪನೆಯ ಹಿಂದೆ ಬೆಂಗಳೂರನ್ನು ಹಸಿರಾಗಿಸುವ ಜತೆಗೆ ನಗರವಾಸಿಗಳ ಆರೋಗ್ಯದ ಕಾಳಜಿಯೂ ಇದೆ.

ತರಬೇತಿಯ ಪರಿಕಲ್ಪನೆ: ಮನೆಯಲ್ಲಿ ಒಣ ಮತ್ತು ಹಸಿ ತ್ಯಾಜ್ಯವನ್ನು ಗೊಬ್ಬರವಾಗಿಸುವುದು, ಬೀಜದಿಂದ ಗಿಡ ಬೆಳೆಸುವುದು, ಗೊಬ್ಬರ ಬೆರೆಸಿ ಮಣ್ಣನ್ನು ಹದಗೊಳಿಸುವುದು, ಕುಂಡಗಳಲ್ಲಿ ಗಿಡಗಳನ್ನು ನೆಟ್ಟು ಆರೈಕೆ ಮಾಡುವುದು, ತಾರಸಿ ತೋಟ, ಲಂಬ ತೋಟಗಾರಿಕೆ (ವರ್ಟಿಕಲ್ ಗಾರ್ಡನಿಂಗ್), ಒಳಾಂಗಣ ಸಸ್ಯಗಳನ್ನು ಬೆಳೆಸುವುದು, ಸಸ್ಯ ರೋಗಗಳು/ಕೀಟ ಬಾಧೆ ನಿರ್ವಹಣೆಯ ಸಾಮಾನ್ಯ ಅಂಶಗಳ ಬಗ್ಗೆ ಮಾಹಿತಿ ನೀಡುವುದು ಸೇರಿದಂತೆ ವಿವಿಧ ಆಯಾಮಗಳಲ್ಲಿ ತರಬೇತಿ ನೀಡಲಾಗುತ್ತದೆ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ್ ಅವರು ಕಲಿಕಾ ವಿಧಾನವನ್ನು ವಿವರಿಸಿದರು.

'ತರಬೇತಿಯಲ್ಲಿ ಪ್ರಾಯೋಗಿಕ ಕಲಿಕೆಗೆ ಒತ್ತು ನೀಡಲಾಗುತ್ತದೆ. ಪಾಲ್ಗೊಂಡವರು ತರಬೇತಿ ನಂತರವೂ ವಿಶ್ವವಿದ್ಯಾಲಯದ ಸಂಪರ್ಕದಲ್ಲಿದ್ದು ಮಾಹಿತಿ ಪಡೆಯಬಹುದು. ತರಬೇತಿಯಲ್ಲಿ ಭಾಗವಹಿಸುವವರಿಗೆ ಹಣ್ಣು, ತರಕಾರಿ, ಹೂವಿನ ಬೀಜಗಳು, ಕೈತೋಟ ಕುರಿತ ಮಾಹಿತಿ ಪತ್ರವನ್ನೊಳಗೊಂಡ ಕಿಟ್ ನೀಡಲಾಗುತ್ತದೆ' ಎಂದು ಕೃಷಿ ವಿಶ್ವವಿದ್ಯಾಲಯದ ತಜ್ಞರು ಮಾಹಿತಿ ನೀಡಿದರು.

ಯಾರೆಲ್ಲ ತರಬೇತಿ ಪಡೆಯಬಹುದು?: 'ಕಡಿಮೆ ಜಾಗ ಇದೆ, ತೋಟ ಮಾಡುವುದು ಹೇಗೆ' ಎಂದು ಚಿಂತಿಸುತ್ತಿರುವವರು, 'ಮನೆಯೊಳಗೆ ಎಂಥಹ ಅಲಂಕಾರಿಕ ಸಸ್ಯಗಳನ್ನು ಬೆಳೆಸಬೇಕು' ಎಂದು ಯೋಚಿಸುತ್ತಿರುವವರು, ಅಪಾರ್ಟ್‌ಮೆಂಟ್‌ಗಳಲ್ಲಿರುವ ತೆರೆದ ಸ್ಥಳಗಳಲ್ಲಿ ತೋಟ ಮಾಡಲು ಬಯಸುವವರು.. ಒಟ್ಟಾರೆ, ಕೈತೋಟ ಮಾಡಲು ಉತ್ಸಾಹ, ಆಸಕ್ತಿ ಇರುವ ಎಲ್ಲ 'ಹಸಿರು ಪ್ರೀತಿಯ' ಮನಸ್ಸಿನವರೂ ನಗರ ತೋಟಗಾರಿಕೆ ತರಬೇತಿಯಲ್ಲಿ ಭಾಗವಹಿಸಬಹುದು.

'ಎರಡು ದಿನಗಳ ತರಬೇತಿಗೆ ₹1,770 ಶುಲ್ಕ ನಿಗದಿಪಡಿಸಿದೆ. ಈ ಶುಲ್ಕದಲ್ಲಿ ಊಟ, ಟೀ, ಲಘು ಉಪಹಾರದ ಜೊತೆಗೆ, ಮಾಹಿತಿ ಪತ್ರವನ್ನೊಳಗೊಂಡ ಕಿಟ್ ಕೂಡ ಸೇರುತ್ತದೆ' ಎಂದು ಕೃಷಿ ವಿಶ್ವವಿದ್ಯಾಲಯದ ತೋಟಗಾರಿಕೆ ವಿಭಾಗದ ಸಿಬ್ಬಂದಿ ಮಾಹಿತಿ ನೀಡಿದರು.



ಸಾಂದರ್ಭಿಕ ಚಿತ್ರ



ಜಿಕೆವಿಕೆಯ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದಲ್ಲಿ ನಡೆದ 'ನಗರ ತೋಟಗಾರಿಕೆ ತರಬೇತಿ'

'ಜನರ ಉತ್ಸಾಹವೇ ಪ್ರೇರಣೆ'

ಪ್ರತಿ ವರ್ಷ ಕೃಷಿ ಮೇಳಕ್ಕೆ ಹೆಚ್ಚು ನಗರವಾಸಿಗಳು ಭೇಟಿ ನೀಡುತ್ತಿದ್ದು, ಕೈತೋಟ ನಿರ್ಮಾಣ ಕುರಿತು ಆಸಕ್ತಿ ತೋರುತ್ತಿದ್ದರು. ನಮ್ಮ ತಜ್ಞರು ಅವರಿಗೆ ನಗರ ತೋಟಗಾರಿಕೆ ಪರಿಕಲ್ಪನೆ ಪರಿಚಯಿಸುತ್ತಿದ್ದರು. ಈಗ ಅದನ್ನು ಇನ್ನಷ್ಟು ಜನಪ್ರಿಯಗೊಳಿಸಲು ಪ್ರಯತ್ನಿಸುತ್ತಿದ್ದೇವೆ.

ಎಸ್.ವಿ.ಸುರೇಶ್, ಕುಲಪತಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಜೂನ್ 25–26 ರಂದು ಕಾರ್ಯಾಗಾರ

'ನಗರ ತೋಟಗಾರಿಕೆ' ಕುರಿತ ಮುಂದಿನ ಕಾರ್ಯಾಗಾರ ಜೂನ್ 25 ಮತ್ತು 26ರಂದು ನಿಗದಿಯಾಗಿದೆ. ಆಸಕ್ತರು ಜೂನ್ 16ರೊಳಗೆ ಹೆಸರು ನೋಂದಾಯಿಸಬೇಕು. 30 ಜನರಿಗೆ ಮಾತ್ರ ಅವಕಾಶ. ಮೊದಲು ಬಂದವರಿಗೆ ಆದ್ಯತೆ. ನೋಂದಣಿಗಾಗಿ ಮೊಬೈಲ್ ಸಂಖ್ಯೆ 6360466004/9481735592 ಸಂಪರ್ಕಿಸಬಹುದು ಎಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ತಿಳಿಸಿದೆ.



ಇತ್ತೀಚೆಗೆ ಜಿಕೆವಿಕೆಯಲ್ಲಿ ನಡೆದ 'ನಗರ ತೋಟಗಾರಿಕೆ' ಕಾರ್ಯಾಗಾರದಲ್ಲಿ ಗಿಡ ನೆಡಲು ಕುಂಡಗಳನ್ನು ಸಿದ್ಧತೆ ಮಾಡಿಕೊಳ್ಳುವ ಪ್ರಾತ್ಯಕ್ಷಿಕೆ ಪ್ರದರ್ಶನ.

'ನಗರ ತೋಟಗಾರಿಕೆ' ಪ್ರಯೋಜನಗಳು

'ನಗರ ತೋಟಗಾರಿಕೆ'ಯಿಂದ ಹಣ್ಣು, ತರಕಾರಿಗಳನ್ನು ಬೆಳೆಯುವ ಜೊತೆಗೆ ಬೆಂಗಳೂರನ್ನು ಸ್ವಚ್ಛವಾಗಿಸುವ, ಹಸಿರಾಗಿಸುವ ಪ್ರಯತ್ನಗಳಿಗೂ ಕೈ ಜೋಡಿಸಬಹುದು' ಎನ್ನುತ್ತಾರೆ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್.

'ನಗರದಲ್ಲಿ ಕಸದ ಸಮಸ್ಯೆ ಹೆಚ್ಚಿದೆ. ಮನೆಯಲ್ಲೇ ಒಣ–ಹಸಿ ಕಸ ಬೇರ್ಪಡಿಸಿ, ಕಾಂಪೋಸ್ಟ್ ಮಾಡಿ, ಗಿಡಗಳಿಗೆ ಬಳಸಿದರೆ, ಬಿಬಿಎಂಪಿ ಮೇಲಿನ ಹೊರೆ ತುಸು ಕಡಿಮೆಯಾಗುತ್ತದೆ. ಇದು 'ಸ್ವಚ್ಛ ಬೆಂಗಳೂರು' ಪ್ರಯತ್ನಕ್ಕೆ ಸಣ್ಣದೊಂದು ಕೊಡುಗೆಯಾಗುತ್ತದೆ' ಎಂದು ಅವರು ವಿವರಿಸಿದರು. 'ನಗರ ಪ್ರದೇಶದ ಅನೇಕ ಮಕ್ಕಳಿಗೆ ತಾವು ಉಣ್ಣುವ ಆಹಾರ ಎಲ್ಲಿಂದ ಬರುತ್ತದೆ ಎಂದು ಗೊತ್ತಿರುವುದಿಲ್ಲ. ತರಗತಿಗಳಲ್ಲಿ ಪಠ್ಯದ ಮೂಲಕ ಮಾಹಿತಿ ಪಡೆದಿರಬಹುದೇ ಹೊರತು ಪ್ರಾಯೋಗಿಕ ಮಾಹಿತಿ ಕಡಿಮೆ. ಮನೆಯಲ್ಲಿ ಕೈತೋಟ ಬೆಳೆಸುವುದರಿಂದ ಮಕ್ಕಳಿಗೆ ಸಸ್ಯ ಪ್ರಪಂಚದ ಜೊತೆಗೆ, ಕೃಷಿಯ ಬಗ್ಗೆ ಪ್ರಾಯೋಗಿಕ ಮಾಹಿತಿ ನೀಡಬಹುದು' ಎನ್ನುತ್ತಾರೆ ಅವರು.

ಸಹ ಕಲಾವಿದೆ ಮೇಲೆ ಅತ್ಯಾಚಾರ ಪ್ರಕರಣ: ಆರೋಪಿ ವಿಚಾರಣೆ ನಡೆಸಿದ ಪೊಲೀಸರು

ನಟ ಮನು ಪರಪ್ಪನ ಅಗ್ರಹಾರ ಜೈಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹ ಕಲಾವಿದೆ ಮೇಲೆ ಅತ್ಯಾಚಾರ ಎಸಗಿದ ಆರೋಪದ ಅಡಿ ಬಂಧನಕ್ಕೆ ಒಳಗಾಗಿರುವ ನಟ ಮಡೆನೂರು ಮನು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ.



ಮಡೆನೂರು ಮನು

33 ವರ್ಷದ ಸಹ ನಟಿ ನೀಡಿದ ದೂರಿನ ಮೇರೆಗೆ ನಟನ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 351(2), 352, 69, 89, 64(2)ರ ಅಡಿ ಪ್ರಕರಣ ದಾಖಲಿಸಿಕೊಂಡಿದ್ದ ಅನ್ನಪೂರ್ಣೇಶ್ವರಿ ನಗರ ಠಾಣೆಯ ಪೊಲೀಸರು, ಮಂಗಳವಾರ ಸಂಜೆ (ಮೇ 20) ಬಂಧಿಸಿದ್ದರು. ಬುಧವಾರ ನ್ಯಾಯಾಲಯಕ್ಕೆ ಹಾಜರು ಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಮನವಿ ಮಾಡಿದ್ದರು. ಪೊಲೀಸರ ಮನವಿ ಪುರಸ್ಕರಿಸಿದ್ದ ನ್ಯಾಯಾಲಯವು ಸೋಮವಾರದವರೆಗೂ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿತ್ತು.

ಆರೋಪಿ ಮತ್ತು ಸಂತ್ರಸ್ತೆಯ ಮನೆಯಲ್ಲಿ ಸ್ಥಳ ಮಹಜರು, ಹೇಳಿಕೆ ದಾಖಲು ಸೇರಿದಂತೆ ಎಲ್ಲ ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ಪೊಲೀಸರು, ಮನು ಅವರನ್ನು ಸೋಮವಾರ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ಮುಂದಿನ ತನಿಖೆಗೆ ಆರೋಪಿಯ ಕಸ್ಟಡಿ ತಮಗೆ ಅಗತ್ಯವಿಲ್ಲ ಎಂದು ಪೊಲೀಸರ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು. ನ್ಯಾಯಾಧೀಶರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.

3 ವರ್ಷದ ಹಿಂದೆ ಕಿರುತೆರೆಯ ಶೋ ಒಂದರಲ್ಲಿ ನಟ ಹಾಗೂ ದೂರುದಾರೆ ಪರಿಚಯವಾಗಿದ್ದರು.

ನಟ ಜಗ್ಗೇಶ್ ಆಕ್ರೋಶ

ನಟ ಮಡೆನೂರು ಮನು ಅವರದ್ದು ಎನ್ನಲಾದ ಆಡಿಯೊ ರೆಕಾರ್ಡಿಂಗ್ ತುಣುಕು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಆಡಿಯೊದಲ್ಲಿ ನಟರಾದ ಶಿವರಾಜ್‌ಕುಮಾರ್, ದರ್ಶನ್ ಹಾಗೂ ಧ್ರುವ ಸರ್ಜಾ ಅವರ ಬಗ್ಗೆ ಕೀಳು ಮಾತುಗಳಿವೆ. ಈ ಬಗ್ಗೆ ನಟ ಜಗ್ಗೇಶ್ ತಮ್ಮ ಎಕ್ಸ್ ಖಾತೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರೀಲಿ ಕೊಡೆ ಹಿಡಿದಂಗೆ. ಗುರು ಹಿರಿಯರ ಮೇಲೆ ಗೌರವ ತೋರದವನು ಗೆದ್ದ ಇತಿಹಾಸ ಇಲ್ಲ. ಇಂದು ಇದ್ದದ್ದು ನಾಳೆ ಇರದು. ಅಹಂಕಾರ ಬಿಡಿ ಅಂಬೆಗಾಲು ಇಡುತ್ತಿರುವ ಕೂಸುಗಳೆ. ಆಯುಷ್ಯ ಬರೆಯೋದು ಬ್ರಹ್ಮ, ಚಿಲ್ಲರೆ ಮನುಷ್ಯರಲ್ಲಾ. ಇಂದಿನ ಚಿತ್ರರಂಗದ ಅಸಹ್ಯ ಕಂಡು ದುಃಖವಾಯಿತು. ಶಿವರಾಜ್‌ಕುಮಾರ್ ಚಿತ್ರರಂಗದ ಕಿರೀಟ ಇದ್ದಂತೆ. ಎಲ್ಲರನ್ನು ಪ್ರೀತಿಸುವ ಜೀವ. ಅಂಥವರ ಸಾವು ಬಯಸಿದವರಿಗೆ ಕೇಡುಗಾಲ ಕಾದಿದೆ. ನೊಂದುಕೊಳ್ಳದಿರಿ ಶಿವಣ್ಣ, ನೀವು ಹಿಮಾಲಯ, ನಿಮಗೆ ದೀರ್ಘಾಯುಷ್ಯ ಪ್ರಾಪ್ತಿ ಇದೆ. ನಿಮ್ಮ ಹೆತ್ತವರು, ಕನ್ನಡಿಗರ ಆಶೀರ್ವಾದ ಇದೆ' ಎಂದು 'ಎಕ್ಸ್'ನಲ್ಲಿ ಜಗ್ಗೇಶ್ ಬರೆದಿದ್ದಾರೆ.

ಮಡೆನೂರು ಮನು ವಿರುದ್ಧ ಶಿವರಾಜ್‌ಕುಮಾರ್ ಅಭಿಮಾನಿಗಳು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ದೂರು ನೀಡಿದ್ದು, ಈ ಬಗ್ಗೆ ಮಂಗಳವಾರ ಮಂಡಳಿ ಸುದ್ದಿಗೋಷ್ಠಿ ಕರೆದಿದೆ.

ಅಪರಾಧ ಸುದ್ದಿಗಳು

ಕಾನ್‌ಸ್ಟೆಬಲ್ ಮೇಲೆ ಕಾರು ಹತ್ತಿಸಲು ಯತ್ನ: ಚಾಲಕ ವಶಕ್ಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕಾರು ಚಾಲಕ ಆಡುಗೋಡಿ ಠಾಣೆ ಪೊಲೀಸರ ವಶಕ್ಕೆ
- ಭಾನುವಾರ ತಡರಾತ್ರಿ 1.30ರ ಸುಮಾರಿಗೆ ಘಟನೆ

ಬೆಂಗಳೂರು: ಕೋರಮಂಗಲದ ಜ್ಯೋತಿ ನಿವಾಸ್ ಕಾಲೇಜು ಎದುರಿನ ರಸ್ತೆಯಲ್ಲಿ ಮದ್ಯದ ಅಮಲಿನಲ್ಲಿ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆದು, ಪೊಲೀಸ್ ಕಾನ್‌ಸ್ಟೆಬಲ್ ಮೇಲೆ ಕಾರು ಹತ್ತಿಸಲು ಯತ್ನಿಸಿದ ಚಾಲಕನನ್ನು ಆಡುಗೋಡಿ ಠಾಣೆಯ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಕಾರು ಚಾಲಕ ನಂದುಕೃಷ್ಣ ಎಂಬಾತನನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು. ಭಾನುವಾರ ತಡರಾತ್ರಿ 1.30ರ ಸುಮಾರಿಗೆ ಘಟನೆ ನಡೆದಿದೆ.

'ಮದ್ಯದ ಅಮಲಿನಲ್ಲಿ ಚಾಲಕ ಅಜಾಗರೂಕತೆಯಿಂದ ಏಕಮುಖ ಸಂಚಾರದ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಕಾರು ಚಲಾಯಿಸಿಕೊಂಡು ಬರುತ್ತಿದ್ದ. ಅದನ್ನು ಗಮನಿಸಿದ ಕರ್ತವ್ಯನಿರತ ಪೊಲೀಸರು ಕಾರನ್ನು ತಡೆಯಲು ಯತ್ನಿಸಿದ್ದರು. ಈ ವೇಳೆ ಕಾರು ನಿಲ್ಲಿಸದೆ, ರಸ್ತೆಯಲ್ಲಿ ಅಡ್ಡಹಾಕಿದ್ದ ಬ್ಯಾರಿಕೇಡ್‌ಗೆ ಕಾರಿನಿಂದ ಡಿಕ್ಕಿ ಹೊಡೆದಿದ್ದಾನೆ. ಅದಾದ ಮೇಲೆ ಮತ್ತೊಂದು ಕಾರಿಗೆ ಡಿಕ್ಕಿ ಹೊಡೆಯಲು ಯತ್ನಿಸಿದ್ದಾನೆ. ಕಾನ್‌ಸ್ಟೆಬಲ್ ಬಿ.ಎನ್.ಶ್ರೀನಿವಾಸ್ ಅವರ ಮೇಲೆ ಕಾರು ಹತ್ತಿಸಲು ಯತ್ನಿಸಿದ್ದಾನೆ' ಎಂದು ಪೊಲೀಸರು ಹೇಳಿದರು.

'ಘಟನೆಯಲ್ಲಿ ಕೋರಮಂಗಲ ಠಾಣೆಯ ಬಿ.ಎನ್.ಶ್ರೀನಿವಾಸ್ ಅವರು ಗಾಯಗೊಂಡಿದ್ದಾರೆ. ಬಲಗಾಲಿನ ಮಂಡಿ, ಎಡಗಾಲಿನ ಪಾದಕ್ಕೆ ಗಾಯವಾಗಿದೆ. ಗಾಯಾಳು ಶ್ರೀನಿವಾಸ್ ಅವರನ್ನು ಅಕ್ಯೂರ ಆಸ್ಪತ್ರೆಗೆ ದಾಖಲು ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಘಟನೆಯ ಬಳಿಕ ಕಾರಿನ ಬಾಗಿಲು ತೆರೆಯದೇ ಆರೋಪಿ ಒಳಗೇ ಕುಳಿತಿದ್ದ. ಕಾರಿನ ಗಾಜನ್ನು ಪೊಲೀಸರೇ ಒಡೆದು ಆತನನ್ನು ಹೊರಗೆ ಎಳೆದು ತಂದರು' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಪಾರ್ಟಿಗೆ ತೆರಳಿದ್ದ ಆರೋಪಿ: ತಡರಾತ್ರಿ ಪಾರ್ಟಿ ಮುಗಿಸಿಕೊಂಡು ಮನೆಗೆ ವಾಪಸ್ ಆಗುತ್ತಿದ್ದ ವೇಳೆ ಚಾಲಕ ಈ ವರ್ತನೆ ತೋರಿದ್ದಾನೆ ಎಂದು ಗೊತ್ತಾಗಿದೆ. ಚಾಲಕ ವಿಪರೀತ ಮದ್ಯ ಸೇವನೆ ಮಾಡಿದ್ದರಿಂದ ಪ್ರಜ್ಞೆಯೇ ಇರಲಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಜಾತಿ ನಿಂದನೆ, ಕೊಲೆಗೆ ಸಂಚು 16 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ರೈಲ್ವೆ ವ್ಹೀಲ್ ಕಾರ್ಖಾನೆಯಲ್ಲಿ ಹಿರಿಯ ತಂತ್ರಜ್ಞರಾಗಿ ಕೆಲಸ ಮಾಡಿದ್ದ ಎಂ.ಬಸವಲಿಂಗಪ್ಪ ಅವರಿಗೆ ಜಾತಿ ನಿಂದನೆ ಮಾಡಿ, ಕೊಲೆ ಬೆದರಿಕೆ ಹಾಕಿದ್ದ ಆರೋಪದಡಿ 16 ಮಂದಿ ವಿರುದ್ಧ ಯಲಹಂಕ ನ್ಯೂ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಾರ್ಖಾನೆಯಲ್ಲಿ 33 ವರ್ಷ ಕೆಲಸ ಮಾಡಿದ್ದೆ. ಉತ್ತಮ ಸೇವೆಗಾಗಿ ಪ್ರಶಸ್ತಿಯೂ ಬಂದಿತ್ತು. 2022ರ ಅಕ್ಟೋಬರ್ 19ರಂದು ಪದೋನ್ನತಿ ನೌಕರರ ಪಟ್ಟಿ ಬಂದಿತ್ತು. ಆ ಪಟ್ಟಿಯಲ್ಲಿ ನನ್ನ ಹೆಸರು ಇತ್ತು. ಆಗ, ಯಾವುದೇ ಪದೋನ್ನತಿ ಹಾಗೂ ವೇತನ ಮುಂಬಡ್ತಿ ನೀಡದೇ ಕಾರ್ಖಾನೆಯಿಂದ ಹೊರಕ್ಕೆ ಹಾಕುತ್ತೇವೆ ಎಂದು ಬೆದರಿಸಿದ್ದರು. ಶರ್ಟ್‌ನ ಕಾಲರ್ ಹಿಡಿದುಕೊಂಡು ಜಾತಿ ನಿಂದನೆ ಮಾಡಿದ್ದರು' ಎಂದು ಬಸವಲಿಂಗಪ್ಪ ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.



'ಪದೋನ್ನತಿ ನೀಡದೇ ರೈಲ್ವೆ ಕಾಯ್ದೆ–1989 ಅನ್ನು ಉಲ್ಲಂಘನೆ ಮಾಡಿದ್ದಾರೆ. ಅಲ್ಲದೇ ಕೊಲೆಗೂ ಸಂಚು ರೂಪಿಸಿದ್ದರು' ಎಂಬುದಾಗಿ ದೂರು ನೀಡಿದ್ದಾರೆ.

'ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರುದಾರ, 71ನೇ ಸಿಸಿಎಚ್ ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸಿದ್ದರು. ನ್ಯಾಯಾಲಯದ ಸೂಚನೆ ಮೇರೆಗೆ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ನಿವೃತ್ತ 'ಡಿ' ಗ್ರೂಪ್ ನೌಕರನಿಗೆ ನಾಲ್ಕು ವರ್ಷ ಜೈಲು ಶಿಕ್ಷೆ



ಚಿಕ್ಕಬಳ್ಳಾಪುರ: ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದಿಸಿದ ಹಿನ್ನೆಲೆಯಲ್ಲಿ ಇಲ್ಲಿನ ನಿವೃತ್ತ 'ಡಿ' ಗ್ರೂಪ್ ನೌಕರ ಡಿ. ಶ್ರೀರಾಮಯ್ಯಗೆ ಚಿಕ್ಕಬಳ್ಳಾಪುರ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯವು ನಾಲ್ಕು ವರ್ಷ ಜೈಲು ಶಿಕ್ಷೆ, ₹10 ಲಕ್ಷ ದಂಡ ವಿಧಿಸಿದೆ. ಇದರ ಜೊತೆಗೆ ₹1.36 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲಿಗೆ ಆದೇಶಿಸಿದೆ.

ಶ್ರೀರಾಮಯ್ಯ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಕಚೇರಿಯಲ್ಲಿ 'ಡಿ' ಗ್ರೂಪ್ ನೌಕರರಾಗಿದ್ದರು. ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದಿಸಿದ ಆರೋಪದ ಮೇರೆಗೆ 2014ರಲ್ಲಿ ಅವರ ನಿವಾಸದ ಮೇಲೆ ಚಿಕ್ಕಬಳ್ಳಾಪುರ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ದಾಳಿ ನಡೆಸಿ ದಾಖಲೆಗಳನ್ನು ವಶಕ್ಕೆ ಪಡೆದಿದ್ದರು.

ಲೋಕಾಯುಕ್ತ ಡಿವೈಎಸ್‌ಪಿ ಸಿ.ಎನ್.ಬೋಪಯ್ಯ, ಡಿ.ಅಶೋಕ್ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಗೋವಿಂದರೆಡ್ಡಿ ಲೋಕಾಯುಕ್ತರ ಪರವಾಗಿ ವಾದ ಮಂಡಿಸಿದ್ದರು.

ಮಹಿಳೆ ಕೊಂದು ಚಿನ್ನ, ನಗದು ದೋಚಿ ಪರಾರಿ

ಬೆಂಗಳೂರು: ಇಲ್ಲಿನ ಕಾಟನ್‌ರಸ್ತೆಯ ದರ್ಗಾ ರಸ್ತೆಯಲ್ಲಿ ಇರುವ ಮನೆಯೊಂದಕ್ಕೆ ಸೋಮವಾರ ಮಧ್ಯಾಹ್ನ ನುಗ್ಗಿದ ದರೋಡೆಕೋರರು, ಮಹಿಳೆಯನ್ನು ಕೊಲೆ ಮಾಡಿ ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿ ಆಗಿದ್ದಾರೆ.



ಲತಾ

ಲತಾ (40) ಕೊಲೆಯಾದ ಮಹಿಳೆ.

'ಲತಾ ಅವರ ಪತಿ ಪ್ರಕಾಶ್ ಅವರು ಹೋಲ್‌ಸೇಲ್ ಬಟ್ಟೆ ವ್ಯಾಪಾರ ಮಾಡುತ್ತಿದ್ದು ಅಂಗಡಿಗೆ ತೆರಳಿದ್ದರು. ಪುತ್ರಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದಾರೆ. ಪುತ್ರ ಶಾಲೆಗೆ ತೆರಳಿದ್ದ. ಮನೆಯಲ್ಲಿ ಲತಾ ಒಬ್ಬರೆ ಇದ್ದರು. ಆ ಸಂದರ್ಭದಲ್ಲಿ ಕಳ್ಳರು ಕೃತ್ಯ ಎಸಗಿದ್ದಾರೆ. ಕೊಲೆ ಮಾಡಿ 150 ಗ್ರಾಂ ಚಿನ್ನಾಭರಣ, ₹2 ಲಕ್ಷ ನಗದು ಹಾಗೂ ಒಂದು ಮೊಬೈಲ್ ಫೋನ್ ಕಳ್ಳತನ ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಉಸಿರುಗಟ್ಟಿಸಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ ಎಂದು ಪೊಲೀಸರು ಹೇಳಿದರು.

ಪ್ರಕಾಶ್ ನೀಡಿದ ದೂರಿನ ಮೇರೆಗೆ ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಬೀದರ್‌ನವರಾದ ಲತಾ ಮತ್ತು ಪ್ರಕಾಶ್ ಕುಟುಂಬ ಹಲವು ವರ್ಷಗಳಿಂದ ನಗರದಲ್ಲಿ ನೆಲಸಿತ್ತು. ವರ್ಷದ ಹಿಂದೆಯಷ್ಟೇ ದರ್ಗಾ ರಸ್ತೆಯ ಬಾಡಿಗೆ ಮನೆಗೆ ಸ್ಥಳಾಂತರಗೊಂಡಿತ್ತು. ಮಗಳ ಮದುವೆಗಾಗಿ ಲತಾ ಕುಟುಂಬ ಸಿದ್ದತೆ ನಡೆಸಿತ್ತು. ಮದುವೆಗೆ ಬೇಕಾದ ಚಿನ್ನಾಭರಣವನ್ನು ಖರೀದಿಸಿ ಮನೆಯಲ್ಲಿ ಇಡಲಾಗಿತ್ತು ಎಂದು ಪೊಲೀಸರು ಹೇಳಿದರು. ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟೆಕಿಯ ಮೊಬೈಲ್ ಕಸಿದು ಪರಾರಿ



ಬೆಂಗಳೂರು: ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರ ಮೊಬೈಲ್ ಅನ್ನು ಕಳ್ಳರು ಕಸಿದುಕೊಂಡು ಪರಾರಿಯಾದ ಘಟನೆ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯ ಕುಂದಲಹಳ್ಳಿಯಲ್ಲಿ ಭಾನುವಾರ ರಾತ್ರಿ ನಡೆದಿದೆ.

'ಮೆಟ್ರೊದಿಂದ ಇಳಿದು ಮನೆಯತ್ತ ಸಾಗುತ್ತಿದ್ದೆ. ಮೆಟ್ರೊ ನಿಲ್ದಾಣದಿಂದ ಸ್ವಲ್ಪ ದೂರದಲ್ಲಿ ಬೀದಿದೀಪಗಳು ಇರಲಿಲ್ಲ. ಅಲ್ಲಿ ಕತ್ತಲು ಆವರಿಸಿತ್ತು. ಬೈಕ್‌ನಲ್ಲಿ ಬಂದಿದ್ದ ಇಬ್ಬರು ಕಳ್ಳರು ಮೊಬೈಲ್ ಕಸಿದುಕೊಂಡು ಹೋಗಿದ್ದಾರೆ ಎಂಬುದಾಗಿ ಯಶವಂತ್ ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಅಪಘಾತ: ಯುವಕ ಸಾವು

ಬೆಂಗಳೂರು: ಮಾಗಡಿ ಮುಖ್ಯರಸ್ತೆಯಲ್ಲಿ ಸೋಮವಾರ ಸಂಭವಿಸಿದ ಅಪಘಾತದಲ್ಲಿ ಪ್ರವೀಣ್ (19) ಎಂಬುವರು ಮೃತಪಟ್ಟಿದ್ದಾರೆ.

ಪ್ರವೀಣ್ ಅವರು ಮಾಗಡಿ ಮುಖ್ಯ ರಸ್ತೆಯ 9ನೇ ಅಡ್ಡರಸ್ತೆಯ ನಿವಾಸಿ. ಇವರ ತಂದೆ ಬಟ್ಟೆ ವ್ಯಾಪಾರ ನಡೆಸುತ್ತಿದ್ದಾರೆ. ಅದೇ ಅಂಗಡಿಯಲ್ಲಿ ಪ್ರವೀಣ್ ಅವರು ಕೆಲಸ ಮಾಡುತ್ತಿದ್ದರು. ವಿದ್ಯುತ್ ಚಾಲಿತ ದ್ವಿಚಕ್ರ ವಾಹನದಲ್ಲಿ ಬಟ್ಟೆ ಅಂಗಡಿಗೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಹೇಳಿದರು.

ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿ ಪಕ್ಕದಲ್ಲೇ ಹೋಗುತ್ತಿದ್ದ ಸರಕು ಸಾಗಣೆ ವಾಹನಕ್ಕೆ ಡಿಕ್ಕಿಯಾದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ವೇಳೆ ಪ್ರವೀಣ್, ಹೆಲ್ಮೆಟ್ ಧರಿಸಿರಲಿಲ್ಲ. ಸರಕು ಸಾಗಣೆ ವಾಹನದ ಚಾಲಕನನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.



ಪ್ರತಿಭಟನೆ

ಕನಿಷ್ಠ ವೇತನ ಜಾರಿಗೆ ಆಗ್ರಹಿಸಿ ರಾಜ್ಯ ಸರ್ಕಾರಿ ಗ್ರಾಮೀಣ ಗ್ರಂಥಾಲಯಗಳ ನೌಕರರ ಸಂಘದವರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ತಮನ್ನಾ ನೇಮಕದ ಹಿಂದೆ ವಾಣಿಜ್ಯಕ ಉದ್ದೇಶ: ಸಚಿವ ಎಂ. ಬಿ. ಪಾಟೀಲ

'ಕನ್ನಡಾಭಿಮಾನ ಕಲಿಯುವ ಅಗತ್ಯವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮವು (ಕೆಎಸ್‌ಡಿಎಲ್) ತನ್ನ ಉತ್ಪನ್ನಗಳ ಪ್ರಚಾರ ರಾಯಭಾರಿಯಾಗಿ ಹಿಂದಿ ನಟಿ ತಮನ್ನಾ ಭಾಟಿಯಾ ಅವರನ್ನು ನೇಮಿಸಿಕೊಂಡಿರುವುದರ ಹಿಂದೆ ವಾಣಿಜ್ಯಕ ಉದ್ದೇಶವಿದೆ. ಈ ವಿಷಯವನ್ನು ಸ್ಪಷ್ಟಪಡಿಸಿದ ಬಳಿಕ ಕೆಲವು ಕನ್ನಡಪರ ಸಂಘಟನೆಗಳ ನಾಯಕರು, ಒಳ್ಳೆಯ ಕೆಲಸ ಮಾಡಿದ್ದೀರೆಂದು ನನಗೆ ಹೇಳಿದ್ದಾರೆ' ಎಂದು ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿ, 'ಕೆಎಸ್‌ಡಿಎಲ್ ವಿಚಾರದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಕನ್ನಡ ಅಸ್ಮಿತೆಯ ಬಗ್ಗೆ ಮಾತನಾಡುತ್ತಿದ್ದಾರೆ. ನಾನು ಯಾರಿಂದಲೂ ಕನ್ನಡಾಭಿಮಾನವನ್ನು ಕಲಿಯುವ ಅಗತ್ಯವಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಕೆಎಸ್‌ಡಿಎಲ್ ಅಧ್ಯಕ್ಷರಾಗಿದ್ದ ಮಾಡಾಳ್ ವಿರೂಪಾಕ್ಷಪ್ಪ ಅವ್ಯವಹಾರ ನಡೆಸಿ ಜೈಲಿಗೆ ಹೋಗಿದ್ದರು. ಆಗ ತೆಪ್ಪಗಿದ್ದ ವಿಜಯೇಂದ್ರ ಅವರಿಗೂ ಮಾಡಾಳ್ ಅವರಿಗೂ ವ್ಯವಹಾರ ಇತ್ತೇನೋ. ಆಗ ಏಕೆ ಇವರಿಗೆ ಕನ್ನಡ ಅಸ್ಮಿತೆ ನೆನಪಾಗಲಿಲ್ಲ' ಎಂದು ಪ್ರಶ್ನಿಸಿದರು.

'ಕಳೆದ 2 ವರ್ಷಗಳಲ್ಲಿ ಕೆಎಸ್‌ಡಿಎಲ್ ಸಾರ್ವಕಾಲಿಕ ಉತ್ಪಾದನೆ, ವಹಿವಾಟು ಮತ್ತು ಲಾಭ ಮಾಡಿದೆ. ಇದನ್ನು ನಾನು ನನ್ನ ಸ್ವಂತ ವ್ಯಾಪಾರಕ್ಕಿಂತ ಹೆಚ್ಚು ಆದ್ಯತೆ ಕೊಟ್ಟು, ದಕ್ಷತೆ ಹೆಚ್ಚಿಸಿದ್ದೇನೆ' ಎಂದರು.

'ನಾವು ವ್ಯಾಪಾರವನ್ನು ವ್ಯಾಪಾರವಾಗಿಯೇ ನೋಡಬೇಕು. ಹೈದರಾಬಾದಿನಲ್ಲಿ ನಕಲಿ ಮೈಸೂರು ಸ್ಯಾಂಡಲ್ ಸೋಪ್ ತಯಾರಿಸುತ್ತಿದ್ದರು. ಅದನ್ನು ನಾವು ಮಟ್ಟ ಹಾಕಿದೆವು. ಈಗಲೂ ಕೆಲವರು ಇದನ್ನು ನಕಲು ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಇದರ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

ಕೆಎಸ್‌ಡಿಎಲ್‌ಗೆ ರಾಯಬಾರಿ ಬೇಕಿಲ್ಲ: ನಟಿ ರಮ್ಯಾ

'ಕೆಎಸ್‌ಡಿಎಲ್‌ಗೆ ಹೊಸ ಚೈತನ್ಯ ತುಂಬುವ ಆಶಯವನ್ನು ಪ್ರಶಂಸಿಸುತ್ತೇನೆ. ಆದರೆ, ಇದನ್ನು ಕಾರ್ಯಗತಗೊಳಿಸಿದ ರೀತಿ ಮಾತ್ರ ಅಸಂಬದ್ಧವಾಗಿದೆ. ವಹಿವಾಟಿನ ದೃಷ್ಟಿಯಿಂದ ನೋಡಿದಾಗಲೂ ಮೈಸೂರು ಸ್ಯಾಂಡಲ್ ಸೋಪ್‌ಗೆ ಯಾವುದೇ ರಾಯಬಾರಿಯ ಅಗತ್ಯವಿಲ್ಲ' ಎಂದು ನಟಿ, ಮಾಜಿ ಸಂಸದೆ ಕಾಂಗ್ರೆಸ್‌ನ ರಮ್ಯಾ ಹೇಳಿದ್ದಾರೆ.

ತಮ್ಮ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ಅವರು, 'ಈ ಸೋಪಿನ ನಿಷ್ಠ ಗ್ರಾಹಕರು ಕನ್ನಡಿಗರು. ಉತ್ತರ ಭಾರತದಲ್ಲಿನ ತಮ್ಮ ಗ್ರಾಹಕ ಮಾರುಕಟ್ಟೆಯನ್ನು ಗುರಿಯಾಗಿಟ್ಟುಕೊಂಡು ಕನ್ನಡಿಗರಲ್ಲದ ರಾಯಭಾರಿಯನ್ನು ನೇಮಿಸಿರುವುದು ತಮ್ಮದೇ ಜನರನ್ನು ದೂರ ಮಾಡಿದಂತೆ' ಎಂದಿದ್ದಾರೆ.

'ನಮ್ಮ ಕನ್ನಡ ಭಾಷೆಯ ಹಿರಿಮೆಯನ್ನು ಉಳಿಸಿಕೊಳ್ಳಲು ಹೋರಾಡುತ್ತಿರುವ ಸಂದರ್ಭದಲ್ಲೇ ಈ ನೇಮಕ! ಅವಾಸ್ತವಿಕ ಸೌಂದರ್ಯ ಮಾನದಂಡದಿಂದ ಹಿಡಿದು ಮತ ಹಾಕುವ ಹಕ್ಕಿನವರೆಗೆ ಮಹಿಳೆಯರು ಶತಮಾನಗಳ ಕಾಲ ಹೋರಾಡಿದ್ದಾರೆ. ಹೀಗಿರುವಾಗ ಇನ್ನೂ ಬಿಳಿ ಬಣ್ಣದ ಚರ್ಮವೇ ಶ್ರೇಷ್ಠ ಎಂದುಕೊಂಡಿದ್ದಾರೆ. ಮೈಸೂರು ಸ್ಯಾಂಡಲ್ ಸೋಪು ಇತರೆ ಸೋಪ್‌ಗಳಂತಲ್ಲ. ಕರ್ನಾಟಕ ಜನತೆ ದೃಷ್ಟಿಯಿಂದ ಇದನ್ನು ಸೂಕ್ಷ್ಮವಾಗಿ ಪರಿಗಣಿಸಬೇಕು' ಎಂದೂ ಹೇಳಿದ್ದಾರೆ.



ಅಪಘಾತ: ಬೈಕ್ ಸವಾರ ಸ್ಥಳದಲ್ಲೇ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಉಲ್ಲಾಳು ಸೇತುವೆಯ ಬಳಿ ಸೋಮವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಎನ್.ಅನಿಲ್‌ಕುಮಾರ್ (38) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬೆಳಿಗ್ಗೆ 10.30ರ ಸುಮಾರಿಗೆ ಅನಿಲ್ ಅವರು ಬೈಕ್‌ನಲ್ಲಿ ತೆರಳುತ್ತಿದ್ದರು. ಬೈಕ್ ಅನ್ನು ಮೈಸೂರು ರಸ್ತೆ ಕಡೆಯಿಂದ ಮಾಗಡಿ ರಸ್ತೆಯ ಕಡೆಗೆ ವೇಗವಾಗಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಮುಂದೆ ಸಾಗುತ್ತಿದ್ದ, ಕ್ಯಾಂಟರ್ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ರಸ್ತೆಗೆ ಬಿದ್ದು ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು.

'ಬೈಕ್ ಸವಾರ ಹೆಲ್ಮೆಟ್ ಧರಿಸದೇ ವೇಗವಾಗಿ ವಾಹನ ಚಾಲನೆ ಮಾಡಿಕೊಂಡು ತೆರಳುತ್ತಿದ್ದರು. ಕ್ಯಾಂಟರ್ ಹಿಂಭಾಗಕ್ಕೆ ಡಿಕ್ಕಿ ಹೊಡೆದಿದ್ದರಿಂದ ಅಪಘಾತ ಸಂಭವಿಸಿದೆ' ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಪುನರ್ವಸತಿ ನಿರ್ಲಕ್ಷ್ಯ • ತೆರವಾಗದ ಅತಿಕ್ರಮಣ • ಪರಿಹಾರ ನೀಡದ ಇಲಾಖೆ

ಪುಟ್ಟೇನಹಳ್ಳಿ ಕೆರೆ ಒತ್ತುವರಿ ಹೆಚ್ಚಳ

• ಆರ್. ಮಂಜುನಾಥ್

ಬೆಂಗಳೂರು: ಪುಟ್ಟೇನಹಳ್ಳಿ ಕೆರೆಯಲ್ಲಿ ಒತ್ತುವರಿ ಮಾಡಿಕೊಂಡವರಿಗೆ ಪುನರ್ವಸತಿ ಕಲ್ಪಿಸಲು ಕಂದಾಯ ಇಲಾಖೆ ನಿರ್ಲಕ್ಷ್ಯ ವಹಿಸಿದ್ದು, ದಿನೇದಿನೇ ಕೆರೆಯಲ್ಲಿ ಒತ್ತುವರಿ ಪ್ರಮಾಣ ಹೆಚ್ಚಾಗುತ್ತಿದೆ.

ಕೆರೆ ಒತ್ತುವರಿದಾರರಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರ ಜಮೀನು ನೀಡಿ, ಮೂಲಸೌಕರ್ಯ ಕಲ್ಪಿಸಲು ಬಿಬಿಎಂಪಿ ಹಣ ಒದಗಿಸಿ ದಶಕವೇ ಕಳೆದರೂ ಪುನರ್ವಸತಿ ಸೌಲಭ್ಯ ಕಲ್ಪಿಸಿಲ್ಲ. ಪುನರ್ವಸತಿ ಬಗ್ಗೆ ಸೂಕ್ತ ನಿರ್ಧಾರ ಕೈಗೊಂಡು, ಅದನ್ನು ಒದಗಿಸದೇ ತೆರವು ಕಾರ್ಯಾಚರಣೆ ಕೈಗೊಳ್ಳಬಾರದು ಎಂದು ನ್ಯಾಯಾಲಯ ಎರಡು ಬಾರಿ ಆದೇಶಿಸಿದ್ದರೂ, ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ.

ಒತ್ತುವರಿದಾರರಿಗೆ ಪುನರ್ವಸತಿ ವಿಳಂಬವಾಗುತ್ತಿರುವ ಸಂದರ್ಭದಲ್ಲೇ ಪುಟ್ಟೇನಹಳ್ಳಿ ಕೆರೆ ಒತ್ತುವರಿದಾರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಕೆರೆ ಯನ್ನು ಉತ್ತಮವಾಗಿ ಅಭಿವೃದ್ಧಿ ಮಾಡ ಲಾಗಿದ್ದು, ಶುಚಿತ್ವ ಕಾಪಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಪುಟ್ಟೇನಹಳ್ಳಿ ಕೆರೆಯ ಒತ್ತುವರಿಯನ್ನು 75 ದಿನಗಳಲ್ಲಿ ತೆರವು ಮಾಡಲಾಗುತ್ತದೆ ಎಂದು ಹೈಕೋರ್ಟ್‌ಗೆ 2023ರ ಸೆಪ್ಟೆಂಬರ್‌ನಲ್ಲಿ ಬಿಬಿಎಂಪಿ 'ಕ್ರಿಯಾಯೋಜನೆ' ಸಲ್ಲಿಸಿತ್ತು. ಒಂದೂವರೆ ವರ್ಷವಾದರೂ ಯಾವುದೇ ಕ್ರಮವಾಗಿಲ್ಲ.

'ಬೆಟ್ಟದಾಸಪುರದಲ್ಲಿ ಒತ್ತುವರಿ-ದಾರರಿಗೆ ಪುನರ್ವಸತಿ ಕಲ್ಪಿಸುವವರೆಗೆ ಒತ್ತುವರಿ ತೆರವು ಮಾಡಬಾರದು ಎಂದು ಹೈಕೋರ್ಟ್ 2015ರಲ್ಲಿ ಆದೇಶ ನೀಡಿದೆ' ಎಂಬ ಷರಾ ಬರೆದು ಬಿಬಿಎಂಪಿ ಅಧಿಕಾರಿಗಳು ಕಡತ ಮುಚ್ಚಿದ್ದಾರೆ. ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಕಟ್ಟಡ ನಿರ್ಮಿಸಲು ಹಣ ನೀಡಲಾಗಿದೆ ಎಂದೂ ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ. ಆದರೆ, ದಶಕ ಕಳೆದರೂ ಒತ್ತುವರಿ ತೆರವಿಗೆ, ಪುನರ್ವಸತಿ ಕಲ್ಪಿಸಲು ಬಿಬಿಎಂಪಿ, ಕಂದಾಯ ಇಲಾಖೆ, ಕೊಳೆಗೇರಿ ಅಭಿವೃದ್ಧಿ ಮಂಡಳಿ ಮುಂದಾಗಿಲ್ಲ.

ಜೆ.ಪಿ. ನಗರ 7ನೇ ಹಂತದಲ್ಲಿರುವ ಪುಟ್ಟೇನಹಳ್ಳಿ ಕೆರೆಯನ್ನು 'ಪುಟ್ಟೇನಹಳ್ಳಿ ನೈಬರ್‌ಹುಡ್ ಲೇಕ್ ಇಂಪ್ರೂವ್‌ಮೆಂಟ್ ಟ್ರಸ್ಟ್' ಸಹಯೋಗದಲ್ಲಿ ಬಿಬಿಎಂಪಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ದಶಕದ ಹಿಂದೆಯೇ ಅಭಿವೃದ್ಧಿ ಮಾಡಿದೆ. ಟ್ರಸ್ಟ್ ಕೆರೆಯ ರಕ್ಷಣೆಯಲ್ಲಿ ಸಾಕಷ್ಟು ಕೆಲಸ ಮಾಡಿದ್ದು, ಸ್ವಚ್ಛತೆ ಹಾಗೂ ಹಸಿರೀಕರಣ ಹೆಚ್ಚಿಸುವ ಕಾಯಕದಲ್ಲಿ 2008ರಿಂದಲೂ ತೊಡಗಿದೆ. ಇದೆಲ್ಲದರ ಫಲವಾಗಿ ಇಂದು ಪುಟ್ಟೇನಹಳ್ಳಿ ಕೆರೆಯಲ್ಲಿ ಸುಮಾರು 122 ಪ್ರಭೇದದ ಪಕ್ಷಿಗಳನ್ನು ಕಾಣಬಹುದಾಗಿದೆ.

ಜೆ.ಪಿ. ನಗರ 7ನೇ ಹಂತದ 'ರೆಸಿಡೆಂಟ್ಸ್ ಇನ್ ದ ವಿಸಿನಿಟಿ ಆಫ್ ಪುಟ್ಟೇನಹಳ್ಳಿ ಲೇಕ್' ಎಂಬ ವೇದಿಕೆಯಡಿ ಪುಟ್ಟೇನಹಳ್ಳಿ ಕೆರೆ ಸಮೀಪದ 1,000ಕ್ಕೂ ಹೆಚ್ಚು ನಿವಾಸಿಗಳು ಸಹಿ ಮಾಡಿದ ಮನವಿ ಪತ್ರವನ್ನು ಸ್ಥಳೀಯ ಶಾಸಕ ಎಂ. ಸತೀಶ್ ರೆಡ್ಡಿ ಅವರಿಗೆ ನೀಡಲಾಗಿದೆ. ಈ ಪತ್ರವನ್ನು ಉಲ್ಲೇಖಿಸಿ ಸತೀಶ್ ರೆಡ್ಡಿ ಅವರು ಜಿಲ್ಲಾಧಿಕಾರಿಗೆ 2024ರ ನವೆಂಬರ್‌ನಲ್ಲಿ ಪತ್ರ ಬರೆದಿದ್ದಾರೆ. ಆದರೆ ಪುನರ್ವಸತಿ ಕಲ್ಪಿಸುವಲ್ಲಿ, ಒತ್ತುವರಿ ತೆರವುಗೊಳಿಸು-ವಲ್ಲಿ ಯಾರೂ ಆಸಕ್ತಿ ವಹಿಸಿಲ್ಲ.


ಪುಟ್ಟೇನಹಳ್ಳಿ ಕೆರೆ ಆವರಣದಲ್ಲಿರುವ ಒತ್ತುವರಿ

ಕ್ರಮ ಕೈಗೊಳ್ಳದ ಇಲಾಖೆಗಳು: ಉಷಾ

'ಪುಟ್ಟೇನಹಳ್ಳಿ ಕೆರೆ ಅಂಗಳದಲ್ಲಿ ಹತ್ತಾರು ವರ್ಷಗಳಿಂದ ಒತ್ತುವರಿ ಉಳಿದಿದೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಬಿಬಿಎಂಪಿ, ಜಿಲ್ಲಾಧಿಕಾರಿ, ಸ್ಥಳೀಯ ಶಾಸಕ ಎಂ. ಸತೀಶ್ ರೆಡ್ಡಿ ಅವರಿಗೆ ಹಲವು ಬಾರಿ ಪತ್ರ ಬರೆದು ಮನವಿ ಮಾಡಿಕೊಳ್ಳಲಾಗಿದೆ. ಒತ್ತುವರಿದಾರರಿಗೆ ಪುನರ್ವಸತಿ ಕಲ್ಪಿಸಿ, ನಂತರ ಅವರನ್ನು ತೆರವು ಮಾಡಬೇಕು ಎಂದು ನ್ಯಾಯಾಲಯ ಎರಡು ಬಾರಿ ಆದೇಶ ನೀಡಿದ್ದರೂ, ಇಲಾಖೆಗಳ ನಡುವೆ ಸಮನ್ವಯ ಇಲ್ಲದೆ, ಒಬ್ಬರು ಮತ್ತೊಬ್ಬರನ್ನು ತೋರಿಸುತ್ತಾ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ. ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕ್ರಮ ಕೈಗೊಳ್ಳದ್ದರಿಂದ ಮುಖ್ಯ ಕಾರ್ಯದರ್ಶಿಯವರು ಮಧ್ಯಪ್ರವೇಶಿಸಿ ಕ್ರಮ ಕೈಗೊಂಡರೆ, ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಯಾಗಿರುವ ಕೆರೆಯನ್ನು ಸ್ವಚ್ಛವಾಗಿ ಉಳಿಸಿಕೊಳ್ಳಬಹುದು' ಎಂದು ಪುಟ್ಟೇನಹಳ್ಳಿ ನೈಬರ್‌ಹುಡ್ ಲೇಕ್ ಇಂಪ್ರೂವ್‌ಮೆಂಟ್ ಟ್ರಸ್ಟ್‌ನ ಅಧ್ಯಕ್ಷೆ ಉಷಾ ರಾಜಗೋಪಾಲನ್ ಹೇಳಿದರು.

ಅಂಕಿ ಅಂಶಗಳು

13 ಎಕರೆ **25** ಗುಂಟೆ
ಪುಟ್ಟೇನಹಳ್ಳಿ ಕೆರೆಯ ಒಟ್ಟು ವಿಸ್ತೀರ್ಣ

3 ಎಕರೆ **19** ಗುಂಟೆ
ಒತ್ತುವರಿ ಪ್ರದೇಶ

ಜಮೀನು ನೀಡಲಾಗಿದೆ: ಡಿಸಿ

'ಪುಟ್ಟೇನಹಳ್ಳಿ ಕೆರೆ ಒತ್ತು-ವರಿದಾರರಿಗೆ ಪುನರ್ವಸತಿ ಕಲ್ಪಿಸಲು ಬೆಟ್ಟದಾಸಪುರದಲ್ಲಿ 2.5 ಎಕರೆ ಸರ್ಕಾರಿ ಜಮೀನನ್ನು ಒದಗಿಸಲಾಗಿದೆ. ಅಲ್ಲಿ ಮೂಲಸೌಕರ್ಯ ಸೇರಿದಂತೆ ಕಟ್ಟಡ, ಮನೆ ನಿರ್ಮಿಸುವುದು ಜಿಲ್ಲಾಡಳಿತದ ವ್ಯಾಪ್ತಿಗೆ ಬರುವುದಿಲ್ಲ. ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕ್ರಮ ಕೈಗೊಳ್ಳಬೇಕು' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ತಿಳಿಸಿದರು.

ಪತ್ರ: ಬೆಟ್ಟದಾಸಪುರ-ದಲ್ಲಿ ಪುನರ್ವಸತಿ ಕಲ್ಪಿಸಲು 'ರಾಜೀವ್‌ಗಾಂಧಿ ವಸತಿ ನಿಗಮ'ಕ್ಕೆ ಭೂಮಿ ಹಸ್ತಾಂತರಿ ಸಲಾಗಿದೆ. ಲೋಕಾಯುಕ್ತ ಹಾಗೂ ಹೈಕೋರ್ಟ್ ನಿರ್ದೇಶನ ನೀಡಲಾಗಿದ್ದು, ಈ ಬಗ್ಗೆ ಆಗಿರುವ ಕಾರ್ಯಪ್ರಗತಿಯ ವರದಿಯನ್ನು ಈವರೆಗೂ ನೀಡಿಲ್ಲ. ಕೂಡಲೇ ಈ ಬಗ್ಗೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿಯವರು 'ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ನಿಗಮದ' ಆಯುಕ್ತರಿಗೆ 2023ರ ಸೆ.19ರಂದು ಪತ್ರ ಬರೆದಿದ್ದಾರೆ. ಆದರೂ ಯಾವುದೇ ಪ್ರಗತಿ-ಯಾಗಿಲ್ಲ.

ಹುಲಿ ದಾಳಿಗೆ ನವವಿವಾಹಿತ ಸಾವು

ಹುಣಸೂರು (ಮೈಸೂರು ಜಿಲ್ಲೆ): ಇಲ್ಲಿನ ನಾಗಾಪುರ ಗಿರಿಜನ ಪುನರ್ವಸತಿ ಕೇಂದ್ರದ 5ನೇ ಬ್ಲಾಕ್ ನಿವಾಸಿ ಹರೀಶ್ (29) ಕುರಿ ಮೇಯಿಸುತ್ತಿದ್ದಾಗ ಸೋಮವಾರ ಹುಲಿ ದಾಳಿ ಮಾಡಿ ಕೊಂದು ಹಾಕಿದೆ. ಮೂರು ತಿಂಗಳ ಹಿಂದಷ್ಟೆ ಅವರ ಮದುವೆಯಾಗಿತ್ತು.


ಕುರುಚಲು ಅರಣ್ಯ ಪ್ರದೇಶಕ್ಕೆ ತೆರಳಿದ್ದಾಗ ಪೊದೆಯಲ್ಲಿ ಅಡಗಿದ್ದ ಹುಲಿ ದಾಳಿ ನಡೆಸಿತ್ತು. ಕುತ್ತಿಗೆ ಭಾಗಕ್ಕೆ ತೀವ್ರ ಗಾಯವಾಗಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಸ್ಥಳಕ್ಕೆ ಪ್ರಾದೇಶಿಕ ಅರಣ್ಯ ಸಂರಕ್ಷಣಾಧಿಕಾರಿ ಮೊಹಮ್ಮದ್ ಫೈಜಲ್ ಮತ್ತು ವಲಯ ಅರಣ್ಯಾಧಿಕಾರಿ ನಂದಕುಮಾರ್ ಭೇಟಿ ನೀಡಿ, ಪರಿಹಾರದ ಭರವಸೆ ನೀಡಿದರು.

'ನಮ್ಮ ಆರ್ಟ್ ಬೆಂಗಳೂರು' ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಚಿತ್ರಕಲಾ ಪರಿಷತ್ತು ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಮೇ 28ರಿಂದ ಜೂನ್ 1ರವರೆಗೆ ಕುಮಾರಕೃಪಾ ರಸ್ತೆಯ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಪ್ರಥಮ ಬಾರಿಗೆ ನಮ್ಮ ಆರ್ಟ್ ಬೆಂಗಳೂರು ರಾಷ್ಟ್ರೀಯ ಕಲಾ ಉತ್ಸವ ನಡೆಸಲಾಗುತ್ತಿದೆ' ಎಂದು ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಹೇಳಿದರು.

ಸೋಮವಾರ ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿದ ಅವರು, 'ವಿಶ್ವ ಕಲಾ ಸಂಗಮ ಧ್ಯೇಯ ವಾಕ್ಯದ ಅಡಿಯಲ್ಲಿ ಉತ್ಸವ ಆಯೋಜಿಸ-ಲಾಗುತ್ತಿದೆ. ಇದರಲ್ಲಿ ದೇಶದ 100 ಆಹ್ವಾನಿತ ಉದಯೋನ್ಮುಖ ಹಾಗೂ ಹಿರಿಯ ವೃತ್ತಿನಿರತ ಕಲಾವಿದರು ಕಲಾ ಕೃತಿಗಳ ಪ್ರದರ್ಶನ ಹಾಗೂ ಮಾರಾಟ ಮಾಡಲಿದ್ದಾರೆ.


ಬಿ.ಎಲ್. ಶಂಕರ್

ಉತ್ಸವದಲ್ಲಿ ಪಾಲ್ಗೊಳ್ಳುವ ಕಲಾವಿದರು ₹25 ಸಾವಿರ ಶುಲ್ಕ ಪಾವತಿಸಿ ನೋಂದಣಿ ಮಾಡಿಸಿದ್ದು, ಪರಿಷತ್ತಿನ ಆವರಣದಲ್ಲಿ ಮಳಿಗೆ ನೀಡಲಾಗುತ್ತದೆ ಎಂದರು.

'ಕರ್ನಾಟಕ ಚಿತ್ರಕಲಾ ಪರಿಷತ್ತಿನ ಒಂದು ಪ್ರದರ್ಶನ ಗ್ಯಾಲರಿಯಲ್ಲಿ ಪರಿಷತ್ತಿನ ಸಂಗ್ರಹದಲ್ಲಿರುವ ಹಾಗೂ ಕರ್ನಾಟಕದ ಹಿರಿಯ ಮತ್ತು ಹೆಸರಾಂತ ಕಲಾವಿದರು ರಚಿಸಿರುವ ಅಪರೂಪದ ಅಪೂರ್ವ ಕಲಾಕೃತಿಗಳ ಪ್ರದರ್ಶನವೂ ಇರಲಿದೆ. ಉತ್ಸವಕ್ಕೆ ಸಾರ್ವಜನಿಕ-ರಿಗೆ ಉಚಿತ ಪ್ರವೇಶವಿದೆ. ಭಾರತ ಸೇವಾದಳದ ಆವರಣ ಹಾಗೂ ಕ್ರೆಸೆಂಟ್ ರಸ್ತೆಯ ಒಂದು ಬದಿಯಲ್ಲಿ ಕಲಾವಿದರು ಹಾಗೂ ಕಲಾಸಕ್ತರು ಶುಲ್ಕ ಪಾವತಿಸಿ, ವಾಹನ ನಿಲುಗಡೆ ಮಾಡಬಹುದು. ಉತ್ಸವದಲ್ಲಿ ಆಹಾರ ಮಳಿಗೆಗಳ ವ್ಯವಸ್ಥೆಯೂ ಇರಲಿದೆ' ಎಂದರು.

'ಮೇ 28ರಂದು ಸಂಜೆ 4.30ಕ್ಕೆ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಕರ್ನಾಟಕ ಚಿತ್ರಕಲಾ ಪರಿಷತ್ ಟ್ರಸ್ಟ್‌ನ ಅಧ್ಯಕ್ಷ ಎಸ್.ಎನ್. ಅಗರವಾಲ್ ಭಾಗವಹಿಸಲಿದ್ದಾರೆ. ಮೇ 29ರಿಂದ ಪ್ರತಿದಿನ ಬೆಳಿಗ್ಗೆ 10.30ರಿಂದ ಸಂಜೆ 7.30ರವರೆಗೆ ಪ್ರದರ್ಶನ ವೀಕ್ಷಿಸಲು ಅವಕಾಶವಿದೆ' ಎಂದರು.

ಪ್ರಭಾರ ಕುಲಪತಿ ಮೀರಾ ನೇಮಕ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿ-ದ್ಯಾಲಯದ ಪ್ರಭಾರ ಕುಲಪತಿ ಬಿ.ಕೆ.ಮೀರಾ ಅವರ ನೇಮಕಾತಿ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ನೇಮಕಾತಿಯನ್ನು ಪ್ರಶ್ನಿಸಿ, ಕುಲಪತಿ ಹುದ್ದೆ ಆಕಾಂಕ್ಷಿಯಾಗಿದ್ದ ಟಿ.ಎಂ. ಮಂಜುನಾಥ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಮೂರ್ತಿ ಆರ್.ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಕುಲಪತಿಯನ್ನು ನೇಮಕ ಮಾಡುವ ಅಧಿಕಾರ ಕುಲಾಧಿಪತಿಯಾದ ರಾಜ್ಯಪಾಲರಿಗೆ ಇದೆ. ಆದರೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000ರ ಕಲಂ 16(2)ರ ಪ್ರಕಾರ, ಕುಲಪತಿ ಹುದ್ದೆಗೆ ಡೀನ್, ನಿರ್ದೇಶಕರನ್ನು ಹೊರತುಪಡಿಸಿದಂತೆ ಇತರರನ್ನು ನೇಮಕ ಮಾಡಲಾಗದು' ಎಂದು ಆದೇಶಿಸಿದೆ.

'ನನ್ನನ್ನೇ ಕುಲಪತಿಯನ್ನಾಗಿ ನೇಮಕ ಮಾಡಲು ನಿರ್ದೇಶಿಸಿ ಎಂದು ಅರ್ಜಿದಾರರು ಕೋರಿದ್ದಾರೆ. ಆದರೆ, ನ್ಯಾಯಾಲಯ ಈ ರೀತಿಯ ಅದೇಶವನ್ನು ಮಾಡಲಾಗದು. ಕಾನೂನು ಪ್ರಕಾರ ಅರ್ಜಿದಾರರನ್ನು ನೇಮಕ ಮಾಡುವ ಬಗ್ಗೆ ರಾಜ್ಯಪಾಲರು ವಿಶ್ವವಿದ್ಯಾಲಯಗಳ ಕಾಯ್ದೆ–2000ರ ಕಲಂ 16(2) ಅನುಸಾರ ಪರಿಶೀಲನೆ ನಡೆಸಬಹುದು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಮಹಾರಾಣಿ ಕ್ಲಸ್ಟರ್ ವಿಶ್ವ ವಿದ್ಯಾಲಯದ ಕುಲಪತಿಯಾಗಿದ್ದ ಸಿ.ಉಷಾದೇವಿ 2025ರ ಮಾರ್ಚ್ 31ರಂದು ನಿವೃತ್ತರಾಗಿದ್ದರು. ಈ ಹುದ್ದೆಗೆ ಪ್ರಭಾರ ಕುಲಪತಿಯನ್ನಾಗಿ ಬಿ.ಕೆ. ಮೀರಾ ಅವರನ್ನು ನೇಮಕ ಮಾಡಿ 2025ರ ಮಾರ್ಚ್ 28ರಂದು ಆದೇಶ ಹೊರಡಿಸ ಲಾಗಿತ್ತು.

'ಸೇವಾ ಹಿರಿತನದಲ್ಲಿ ಹಿರಿಯ ನಿರ್ದೇಶಕನಾದ ನಾನೂ ಪ್ರಭಾರ ಕುಲಪತಿ ಹುದ್ದೆಗೆ ಅರ್ಹನಾಗಿದ್ದೆ. ಆದರೆ, ನನ್ನನ್ನು ಕಡೆ-ಗಣಿಸಲಾಗಿದ್ದು, ನೇಮಕಾತಿ ನಿಯಮಗಳನ್ನು ಉಲ್ಲಂಘಿಸಲಾಗಿದೆ' ಎಂದು ಆಕ್ಷೇಪಿಸಿ, ವಿಶ್ವವಿದ್ಯಾಲಯದ, 'ಸ್ಕೂಲ್ ಆಫ್ ಹ್ಯೂಮನಿಟೀಸ್ ಅಂಡ್ ಲಿಬರಲ್ ಆರ್ಟ್ಸ್' ವಿಭಾಗದ ನಿರ್ದೇಶಕರೂ ಆದ ಅರ್ಜಿದಾರ ಟಿ.ಎಂ. ಮಂಜುನಾಥ್ ಹೈಕೋರ್ಟ್ ಮೆಟ್ಟಿಲೇರಿದ್ದರು.

'ಪ್ರತಿವಾದಿ ಮೀರಾ, ಪ್ರಾಣಿಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕರಾಗಿದ್ದು, ಹೆಣ್ಣುಮಕ್ಕಳ ಭೌತಿಕ ಮತ್ತು ಶೈಕ್ಷಣಿಕ ಅಗತ್ಯಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬಲ್ಲರು. ಅಂತೆಯೇ, ಇದು ಮಹಿಳಾ ವಿಶ್ವವಿದ್ಯಾಲಯ ಆಗಿರುವುದರಿಂದ ಮಹಿಳೆಯನ್ನೇ ಕುಲಪತಿಯನ್ನಾಗಿ ನೇಮಕ ಮಾಡಲಾಗಿದೆ' ಎಂದು ರಾಜ್ಯಪಾಲರ ಕಚೇರಿಯು ಮೀರಾ ಅವರ ನೇಮಕಾತಿಯನ್ನು ಸಮರ್ಥನೆ ಮಾಡಿಕೊಂಡಿತ್ತು.

'ಬೈಗುಳ ಅವಮಾನ ಅಲ್ಲ'

ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮೇಲೆ ಹಲ್ಲೆ ನಡೆಸಿದ ಮತ್ತು ನಿಂದನೀಯ ಭಾಷೆ ಬಳಸಿದ ಆರೋಪದಡಿ ತೆಲಂಗಾಣದ ನಿವಾಸಿಯೊಬ್ಬರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಮತ್ತು ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ತಮ್ಮ ವಿರುದ್ಧದ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ವಾರಂಗಲ್ ಜಿಲ್ಲೆಯ ಹನುಮಕೊಂಡದ ಅನುಮಂದಲ ರಾಜೇಶ್ ರೆಡ್ಡಿ (33) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮೊಹಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರ ವಿರುದ್ಧದ ಆರೋಪಗಳು ಅಸ್ಪಷ್ಟವಾಗಿವೆ. ಆರೋಪಿ ಬಳಸಿದ ನಿಂದನೀಯ ಭಾಷೆಯ ಸ್ವರೂಪವನ್ನು ದೂರಿನಲ್ಲಿ ವಿವರಿಸಲಾಗಿಲ್ಲ. ಆರೋಪಿ, ಕೇವಲ ನಿಂದನೀಯ ಭಾಷೆ ಬಳಸಿದ್ದಾರೆ ಎಂದ ಮಾತ್ರಕ್ಕೆ ಅದು, ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 504ರ ಅಡಿಯಲ್ಲಿ ಉದ್ದೇಶಪೂರ್ವಕವಾಗಿ ಅವಮಾನ ಮಾಡಿದ ಅಪರಾಧಕ್ಕೆ ಅನ್ವಯ ಆಗುವುದಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವೇನು?: 'ಕ್ರಿಮಿನಲ್ ಪ್ರಕರಣವೊಂದಕ್ಕೆ ಸಂಬಂಧಿಸಿ ರಾಜೇಶ್ ರೆಡ್ಡಿ ಅವರನ್ನು ಬಂಧಿಸಲು ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆಯ ಪಿಎಸ್ಐ ಪ್ರಕಾಶ್ ಮತ್ತು ಸಿಬ್ಬಂದಿ ಮುಂದಾಗಿದ್ದರು. ಈ ವೇಳೆ ರೆಡ್ಡಿ ಅವರು, ಪ್ರಕಾಶ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಹಲ್ಲೆ ನಡೆಸಲು ಯತ್ನಿಸಿಸುವ ಮೂಲಕ ಪೊಲೀಸರ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ್ದಾರೆ' ಎಂದು ದೂರು ದಾಖಲಿಸಲಾಗಿತ್ತು.

ಕವಿಕಾ, ಎಂಇಐ ಬೇಡಿಕೆ ಪೂರೈಸಲಿವೆ: ಸಚಿವ ಜಾರ್ಜ್

ವಿದ್ಯುತ್ ಪರಿವರ್ತಕ ದುರಸ್ತಿ ಘಟಕ ಆರಂಭ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ರಾಜ್ಯದಲ್ಲಿ ವಿದ್ಯುತ್ ಪರಿವರ್ತಕಗಳಿಗೆ ಬೇಡಿಕೆ ಹೆಚ್ಚಿದ್ದು, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರಿಸ್ ಲಿ.(ಎಂಇಐ) ಮತ್ತು ಕರ್ನಾಟಕ ವಿದ್ಯುತ್ ಕಾರ್ಖಾನೆ (ಕವಿಕಾ) ಸಂಸ್ಥೆಗಳು ಬೇಡಿಕೆಯನ್ನು ಪೂರೈಸಲಿವೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಎಂಇಐ ಆವರಣದಲ್ಲಿ ಹಮ್ಮಿಕೊಂಡಿದ್ದ ವಿದ್ಯುತ್ ಪರಿವರ್ತಕ-ಗಳ ದುರಸ್ತಿ ಘಟಕ ಉದ್ಘಾಟಿಸಿ ಮತ್ತು ಪ್ರಗತಿ ಪರಿಶೀಲನಾ ಸಭೆಯ ನಂತರ ಅವರು ಮಾತನಾಡಿದರು

'ಹೊಸ ಹೊಸ ಯೋಜನೆಗಳ ಕೈಗೊಳ್ಳುವ ಕುರಿತು ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಲಾಗಿದೆ. ವಿದ್ಯುತ್ ಪರಿವರ್ತಕಗಳ ದುರಸ್ತಿಗಾಗಿ ಹೊಸ ಘಟಕ ಉದ್ಘಾಟನೆಯಾಗಿದೆ. ಕಾರ್ಮಿಕರು ಸಂಸ್ಥೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಸಂಸ್ಥೆಗಳು ಲಾಭದಾಯಕ ಸ್ಥಿತಿಯಲ್ಲಿವೆ' ಎಂದರು.

'ಮಳೆಯಿಂದ ವಿದ್ಯುತ್ ಪರಿಕರಗಳಿಗೆ ಎಷ್ಟೇ ಸಮಸ್ಯೆಯಾದರೂ ಅದನ್ನು ಪರಿಹರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ತಿಳಿಸಿದರು.

ಎಂಇಐ ಅಧ್ಯಕ್ಷ ಎಸ್. ಮನೋಹರ್ ಮಾತನಾಡಿ, 'ಸಂಸ್ಥೆ ಈ ವರ್ಷ ₹ 24ಕೋಟಿ ಲಾಭದಲ್ಲಿದೆ. ಸಂಸ್ಥೆಯಲ್ಲಿಯೇ ವಿದ್ಯುತ್ ಪರಿವರ್ತಕ-ಗಳ ದುರಸ್ತಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಎಂಇಐ ವತಿಯಿಂದಲೇ ಚಿತ್ರದುರ್ಗ, ಮೈಸೂರು, ಕಲ್ಯಾಣ ಕರ್ನಾಟಕ ಭಾಗದಲ್ಲಿಯೂ ವಿದ್ಯುತ್ ಪರಿವರ್ತಕಗಳ ದುರಸ್ತಿ ಕೇಂದ್ರಗಳನ್ನು ಪ್ರಾರಂಭಿಸಲಾಗುತ್ತಿದೆ' ಎಂದರು.

'ಕವಿಕಾ ಮತ್ತು ಎಂಇಐ ಸಂಸ್ಥೆಗಳು ರಾಜ್ಯಕ್ಕೆ ಅಗತ್ಯವಿರುವಷ್ಟು ಪರಿವ-ರ್ತಕಗಳನ್ನು ನೀಡಲು ಸಿದ್ಧವಿವೆ. ಖಾಸಗಿಯವರಿಗೆ ಗುತ್ತಿಗೆ ನೀಡುವುದನ್ನು ನಿಲ್ಲಿಸಿದರೆ ಪ್ರತಿ ವರ್ಷ ಕೋಟ್ಯಂತರ ರೂಪಾಯಿ ಸರ್ಕಾರಕ್ಕೆ ಉಳಿತಾಯ ಆಗಲಿದೆ' ಎಂದರು.

ಇಂದನ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್. ಎನ್, ಎಂಇಐ ವ್ಯವಸ್ಥಾಪಕ ನಿರ್ದೇಶಕಿ ಡಿ.ಪದ್ಮಾವತಿ ಕಾರ್ಯಕ್ರಮದಲ್ಲಿ ಇದ್ದರು.


ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ವಿದ್ಯುತ್ ಪರಿವರ್ತಕಗಳ ದುರಸ್ತಿ ಘಟಕವನ್ನು ಸಚಿವ ಕೆ.ಜೆ.ಜಾರ್ಜ್ ಉದ್ಘಾಟಿಸಿದರು

ಕಾರಂತ ಬಡಾವಣೆ: ಯಲಹಂಕ, ಉತ್ತರ ತಾಲ್ಲೂಕಿನ 18 ಗ್ರಾಮಗಳ ಆಯ್ಕೆ

2ನೇ ಹಂತಕ್ಕೆ ಸರ್ವೆ ಆರಂಭ

• ಕೆ.ಎಸ್.ಸುನಿಲ್

ಬೆಂಗಳೂರು: ನಗರದ ಉತ್ತರ ಭಾಗದಲ್ಲಿ ನಿರ್ಮಾಣವಾಗುತ್ತಿರುವ ಪ್ರತಿಷ್ಠಿತ ಡಾ.ಕೆ.ಶಿವರಾಮ ಕಾರಂತ (ಎಸ್.ಕೆ) ಬಡಾವಣೆಯ 30 ಸಾವಿರ ನಿವೇಶನಗಳ ಹಂಚಿಕೆಗೂ ಮುನ್ನವೇ ಎರಡನೇ ಹಂತಕ್ಕೆ ಸರ್ವೆ ಕಾರ್ಯ ಶುರುವಾಗಿದೆ.

ಮೊದಲ ಹಂತದಲ್ಲಿ ಸುಮಾರು 3,546 ಎಕರೆ ಪ್ರದೇಶದಲ್ಲಿ 30 ಸಾವಿರ ನಿವೇಶನ ನಿರ್ಮಾಣ ಕಾರ್ಯ ಸಾಗಿದ್ದು, ಬಾಕಿ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಮೂರು ತಿಂಗಳು ಗಡುವು ಸಹ ನೀಡಲಾಗಿದೆ.

‘ಈ ಪ್ರಕರಣವು ನ್ಯಾಯಾಲಯದಲ್ಲಿ ಇನ್ನೂ ಇತ್ಯರ್ಥವಾಗಿಲ್ಲ. ನ್ಯಾಯಾಲಯ ಆದೇಶ ನೀಡಿದ ಕೂಡಲೇ ನಿವೇಶನಗಳ ಹಂಚಿಕೆಗೆ ಅರ್ಜಿ ಆಹ್ವಾನಿಸಲಾಗುತ್ತದೆ. ಇದರಲ್ಲಿ ಸುಮಾರು 10-12 ಸಾವಿರ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುತ್ತದೆ’ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಮೂಲಗಳು ತಿಳಿಸಿವೆ.

ಕಾರಂತ ಬಡಾವಣೆ ವಿಸ್ತರಣೆಗೆ ಯಲಹಂಕ ಹಾಗೂ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಒಟ್ಟು 18 ಗ್ರಾಮಗಳನ್ನು ಗುರುತಿಸಲಾಗಿದ್ದು, ಅಂದಾಜು ಮೂರು ಸಾವಿರ ಎಕರೆ ಜಮೀನು ಅಗತ್ಯವಿದೆ. ಹಾಗಾಗಿ ಈ ಗ್ರಾಮಗಳಲ್ಲಿ ಜಮೀನು ಗುರುತಿಸುವುದು, ಖಾತೆದಾರರು ಹಾಗೂ ವಿಸ್ತೀರ್ಣದ ವಿವರ, ಜಮೀನಿನ ನಕ್ಷೆ, ಚಕ್ಕುಬಂದಿ ಮತ್ತು ಇತರೆ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ. ಡ್ರೋನ್ ಸರ್ವೆಯೂ ನಡೆಯುತ್ತಿದೆ.

ಯೋಜನೆಗೆ ಬೇಕಾಗಿರುವ ಜಮೀನು ಗುರುತಿಸುವ ಸಲುವಾಗಿ ಬಿಡಿಎ ಆಯುಕ್ತ ಎನ್.ಜಯರಾಮ್ ಅವರು ಭೂಸ್ವಾಧೀನಾಧಿಕಾರಿ ಜಿ.ಕೆ. ಕೃಪಾಲಿನಿ, ವಿಶೇಷ ಭೂಸ್ವಾಧೀನಾಧಿಕಾರಿಗಳಾದ ನಿಖಿತ ಚಿನ್ನಸ್ವಾಮಿ, ಪಿ.ಎಂ.ನಂದಿನಿ, ಬಿ.ಆರ್.ಹರೀಶ್ ನಾಯ್ಕ್ ಅವರ ನೇತೃತ್ವದಲ್ಲಿ ನಾಲ್ಕು ತಂಡಗಳನ್ನು ರಚಿಸಿದ್ದಾರೆ. ಪ್ರಾಥಮಿಕ ಮಾಹಿತಿ ಸಂಗ್ರಹಿಸಿ, ಹತ್ತು ದಿನದಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಈ ತಂಡವು ಎಂಜಿನಿಯರ್‌ಗಳು, ಅಧಿಕಾರಿಗಳು ಮತ್ತು ಭೂ ಮಾಪಕರೊಂದಿಗೆ ಸಮನ್ವಯ ಸಾಧಿಸಿ, ಉದ್ದೇಶಿತ ಯೋಜನೆಗೆ ಬೇಕಾಗಿರುವ ಜಮೀನನ್ನು ಗುರುತಿಸಿದೆ. ಅಲ್ಲದೇ ಈ ಭಾಗದಲ್ಲಿ ಬಡಾವಣೆ ವಿಸ್ತರಣೆ ಕಾರ್ಯಸಾಧುವೇ ಎಂಬುದರ ಬಗ್ಗೆ ಪರಿಶೀಲನೆ ನಡೆಸಿ, ವರದಿ ಸಹ ನೀಡಲಿದೆ.

‘ಸರ್ವೆ ಕಾರ್ಯ ಬಹುತೇಕ ಮುಕ್ತಾಯಗೊಂಡಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಸ್ತರಣೆಗೆ ಗುರುತಿಸಿರುವ ಗ್ರಾಮಗಳು ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆಗೆ (ಪಿಆರ್‌ಆರ್) ಸಮೀಪದ ಪ್ರದೇಶಗಳಲ್ಲಿವೆ. ಅವುಗಳಲ್ಲಿ ಸೋಲದೇವನಹಳ್ಳಿ, ಚಿಕ್ಕಬಾಣಾವರ, ಜೆ. ಬಿ. ಕಾವಲ್, ಮಾವಳ್ಳಿಪುರ ಸಹ ಸೇರಿವೆ.

‘ಸರ್ವೆ ಕಾರ್ಯ ಮತ್ತು ಯೋಜನೆಗೆ ಸಂಬಂಧಿಸಿದಂತೆ ಸಿದ್ಧತೆ ಪೂರ್ಣವಾಗಿದೆ. ಶೀಘ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಯೋಜಿಸಲಾಗಿದೆ. ಅನುಮೋದನೆ ದೊರೆತ ಬಳಿಕ ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗಲಿದೆ’ ಎಂದು ಬಿಡಿಎ ಆಯುಕ್ತ ಎನ್.ಜಯರಾಮ್ ತಿಳಿಸಿದರು.



ಬಿಡಿಎ ನಿರ್ಮಿಸುತ್ತಿರುವ ಶಿವರಾಮ ಕಾರಂತ ಬಡಾವಣೆ

ಪರಿಹಾರ ನೀಡಲು ಆಗ್ರಹ

‘ಶಿವರಾಮ ಕಾರಂತ ಬಡಾವಣೆಗೆ ರೈತರಿಂದ ಬಲವಂತವಾಗಿ ಜಮೀನು ಪಡೆದುಕೊಂಡು ಈವರೆಗೂ ಬಿಡಿಎ ಪರಿಹಾರ ನೀಡಿಲ್ಲ. ಫಸಲು ನಾಶ ಮಾಡಿ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ. ಜಮೀನು ನೀಡಿದ ರೈತರಿಗೆ ಶೇಕಡ 40ರಷ್ಟು ಪರಿಹಾರ ನೀಡಬೇಕೆಂದು ತೀರ್ಮಾನವಾಗಿತ್ತು. ಆದರೆ ಇದುವರೆಗೂ ನೀಡಿಲ್ಲ. ಕೆಲವರು ಪರಿಹಾರ ಕೋರಿ ನ್ಯಾಯಾಲಯಕ್ಕೆ ಹೋಗಿದ್ದಾರೆ. ಹಾಗಾಗಿ ಬಡಾವಣೆ ವಿಸ್ತರಣೆಗೆ ವಿರೋಧ ಇದೆ’ ಎಂದು ರೈತ ಮುಖಂಡ ಮಾವಳ್ಳಿಪುರ ಶ್ರೀನಿವಾಸ್ ಹೇಳಿದರು.

‘ನ್ಯಾಯಯುತ ಪರಿಹಾರ ನೀಡಿ ಜಮೀನು ಸ್ವಾಧೀನಪಡಿಸಿಕೊಳ್ಳಬಹುದು. ಅಂಜನಾಪುರ, ಕೆಂಪೇಗೌಡ ಬಡಾವಣೆ, ಅರ್ಕಾವತಿ ಬಡಾವಣೆಗಾಗಿ ಜಮೀನು ಕಳೆದುಕೊಂಡವರು ಈಗಲೂ ಪರಿಹಾರಕ್ಕಾಗಿ ಬಿಡಿಎ ಕಚೇರಿಗೆ ಅಲೆದಾಡುತ್ತಿದ್ದಾರೆ. ಬಡಾವಣೆ ವಿಸ್ತರಣೆಗೆ ಗುರುತಿಸಿರುವ ಗ್ರಾಮಗಳಲ್ಲಿನ ಜಮೀನುಗಳಲ್ಲಿ ಶೇಕಡ 60ರಷ್ಟು ಈಗಾಗಲೇ ಅಭಿವೃದ್ಧಿ ಆಗಿವೆ ’ ಎಂದು ತಿಳಿಸಿದರು.

ಸರ್ವೆಗೆ ಗುರುತಿಸಿರುವ ಗ್ರಾಮಗಳು
ಕೊಂಡಶೆಟ್ಟಿಹಳ್ಳಿ
ಲಿಂಗರಾಜಸಾಗರ
ಚಿಕ್ಕಬಾಣಾವರ
ಕೆಂಪಾಪುರ
ಕಸಘಟ್ಟಪುರ
ಕುಂಬಾರಹಳ್ಳಿ
ಆವಲಹಳ್ಳಿ
ಮಾವಳ್ಳಿಪುರ
ಜೆ.ಬಿ.ಕಾವಲ್
ಲಿಂಗರಾಜಪುರ
ಮೈಲಪ್ಪನಹಳ್ಳಿ
ಬ್ಯಾಲಕೆರೆ
ಮಧುಗಿರಿಹಳ್ಳಿ
ಶಿವಕೋಟೆ
ಮುತ್ತುಗದಹಳ್ಳಿ
ಕೃಷ್ಣರಾಜಪುರ
ಕೃಷ್ಣರಾಜಸಾಗರ

ವರ್ಗಾವಣೆ ಮಾರ್ಗಸೂಚಿ ಪಾಲನೆ ಕಡ್ಡಾಯ– ಸಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಮೇ 12 ರಂದು ಹೊರಡಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ವರ್ಗಾವಣೆ ಆದೇಶಗಳನ್ನು ಹೊರಡಿಸಬೇಕು’ ಎಂದು ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳಿಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚನೆ ನೀಡಿದ್ದಾರೆ.

ಮಾರ್ಗಸೂಚಿಗಳನ್ನು ಉಲ್ಲಂಘಿಸಿ ವರ್ಗಾವಣೆ ಆದೇಶ ಹೊರಡಿಸಿದ ಕಾರಣಕ್ಕೆ ಕೆಎಟಿಯಲ್ಲಿ ಹಲವು ಪ್ರಕರಣಗಳು ದಾಖಲಾಗಿವೆ. ಹೀಗಾಗಿ ಯಾವುದೇ ವರ್ಗಾವಣೆ ಆದೇಶ ಹೊರಡಿಸುವ ಮೊದಲು ಆಕ್ಷೇಪ ವ್ಯಕ್ತವಾಗದಂತೆ ಎಚ್ಚರಿಕೆ ವಹಿಸಬೇಕು ಎಂದೂ ಅವರು ಸಲಹೆ ನೀಡಿದ್ದಾರೆ.

ಕನಿಷ್ಠ ಅವಧಿ ಪೂರ್ಣಗೊಳಿಸದವರನ್ನು, ನಿವೃತ್ತಿಗೆ ಎರಡು ವರ್ಷಕ್ಕಿಂತ ಕಡಿಮೆ ಅವಧಿ ಇರುವವರನ್ನು ವರ್ಗಾವಣೆ ಮಾಡಬಾರದು. ಸಕಾರಣ ಇಲ್ಲದೆ ಅವಧಿಗೂ ಮೊದಲು ವರ್ಗಾವಣೆಗೆ ಅವಕಾಶ ಇಲ್ಲ. ಅಂಗವಿಕಲರಿಗೆ ನೀಡುವ ವಿನಾಯಿತಿಗಳನ್ನು ಅನುಸರಿಸಬೇಕು. ವರ್ಗಾವಣೆ ಆದೇಶದಲ್ಲಿ ಹುದ್ದೆಯನ್ನು ತೋರಿಸದಿರುವುದು, ಸಾಮಾನ್ಯ ವರ್ಗಾವಣೆ ಅವಧಿ ಮುಗಿದ ಬಳಿಕ ಮುಖ್ಯಮಂತ್ರಿಯ ಅನುಮೋದನೆ ಪಡೆಯದೆ ವರ್ಗಾವಣೆ ಆದೇಶ ಹೊರಡಿಸುವುದು ಸೇರಿದಂತೆ ಮಾರ್ಗಸೂಚಿಯಲ್ಲಿರುವ ಅಂಶಗಳನ್ನು ಪಾಲಿಸಬೇಕು ಎಂದೂ ಅವರು ನಿರ್ದೇಶನ ನೀಡಿದ್ದಾರೆ.

ವಿಜ್ಞಾನಿ ನಾರಾಯಣ ಹೊಸಮನೆಗೆ ಸ್ಕಾಲರ್‌ಜಿಪಿಎಸ್ ಗೌರವ

ಬೆಂಗಳೂರು: ಬೋರಾನ್ ರಸಾಯನವಿಜ್ಞಾನ ಕ್ಷೇತ್ರದಲ್ಲಿನ ಸಂಶೋಧನೆಯನ್ನು ಪರಿಗಣಿಸಿ ಗೋಕರ್ಣ ಮೂಲದವರಾದ ಸದ್ಯ ಅಮೆರಿಕಾದಲ್ಲಿರುವ ವಿಜ್ಞಾನಿ ನಾರಾಯಣ ಸದಾಶಿವ ಹೊಸಮನೆ ಅವರನ್ನು ಉನ್ನತ ವಿದ್ವಾಂಸ ಎಂದು ಸ್ಕಾಲರ್‌ಜಿಪಿಎಸ್ ಗುರುತಿಸಿದೆ.

2024ರ ಸ್ಕಾಲರ್‌ಜಿಪಿಎಸ್ ರ‍್ಯಾಂಕಿಂಗ್ ಬಿಡುಗಡೆ ಮಾಡಿದ್ದು, ನಾರಾಯಣ ಅವರ ಈವರೆಗಿನ ಸಾಧನೆಯನ್ನು ಪರಿಗಣಿಸಿ ‘ಉನ್ನತ ವಿದ್ವಾಂಸ’ ಎಂದು ಗುರುತಿಸಲಾಗಿದೆ ಎಂದು ಸಂಸ್ಥೆ ಹೇಳಿದೆ.

ಕುಮಟಾದ ಡಾ. ಎ.ವಿ.ಬಾಳಿಗಾ ಕಾಲೇಜಿನಲ್ಲಿ ಪದವಿ ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಎಡಿನ್‌ಬರ್ಗ್‌ನಲ್ಲಿ ಪಿಎಚ್‌.ಡಿ. ಪದವಿ ಪಡೆದ ಅವರು ಜಗತ್ತಿನ ಹಲವು ರಾಷ್ಟ್ರಗಳ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಅಧ್ಯಯನ ಹಾಗೂ ಸಂಶೋಧನೆ ನಡೆಸಿದ್ದಾರೆ. ಅಮೆರಿಕದ ಎಡಿನ್‌ಬರ್ಗ್ ವಿಶ್ವವಿದ್ಯಾಲಯದ ಡೆಕಾಲ್ಬ್‌ನಲ್ಲಿರುವ ಲೊಮಾ ಲಿಂಡಾ ವೈದ್ಯಕೀಯ ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕರಾಗಿದ್ದಾರೆ.

ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಒಳಗೊಂಡು ಒಟ್ಟು 14 ವಿಶಾಲ ಕ್ಷೇತ್ರಗಳಲ್ಲಿನ 177 ವಿಷಯಗಳು ಮತ್ತು 3.5 ಲಕ್ಷ ವಿಶೇಷಗಳನ್ನು ಸ್ಕಾಲರ್ ಜಿಪಿಎಸ್ ಪರಿಗಣಿಸಿ ಉನ್ನತ ವಿದ್ವಾಂಸ ಪಟ್ಟಿಯನ್ನು ಬಿಡುಗಡೆ ಮಾಡುತ್ತದೆ.

ಸಿದ್ಧಾರ್ಥ ಶಿಕ್ಷಣ ಸಂಸ್ಥೆ: ಇ.ಡಿ ದಾಳಿ ಖಂಡನೀಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ದಾಳಿ ನಡೆಸಿರುವುದು ಖಂಡನೀಯ ಎಂದು ದಲಿತ ಸಂಘಟನೆಗಳ ಒಕ್ಕೂಟ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ, ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ, ದಲಿತ ಸಂಘರ್ಷ ಸಮಿತಿಯ (ಭೀಮವಾದ) ರಾಜ್ಯ ಘಟಕದ ಅಧ್ಯಕ್ಷ ಆರ್. ಮೋಹನ್‌ರಾಜ್, ‘ಗೃಹ ಸಚಿವ ಜಿ. ಪರಮೇಶ್ವರ ಅವರ ರಾಜಕೀಯ ಪ್ರಗತಿಯನ್ನು ಸಹಿಸದ ಜಾತಿವಾದಿ ಶಕ್ತಿಗಳು ಇ.ಡಿ. ದಾಳಿಯ ಷಡ್ಯಂತ್ರವನ್ನು ರೂಪಿಸಿವೆ. ದಲಿತ ಸಮುದಾಯದ ವಿಮೋಚನೆಯನ್ನು ವಿರೋಧಿಸುವ ಶಕ್ತಿಗಳೇ ಈ ದಾಳಿಗೆ ಕುಮ್ಮಕ್ಕು ನೀಡಿದ್ದಾರೆ’ ಎಂದು ಆರೋಪಿಸಿದರು.

‘ದೇಶದ ಆಡಳಿತದ ಚುಕ್ಕಾಣಿ ಹಿಡಿಯಬೇಕಿದ್ದ ದಲಿತ ಸಮುದಾಯದ ನಾಯಕರನ್ನು ತುಳಿಯುವ ಹುನ್ನಾರ ನಡೆಯುತ್ತಿದೆ. ಇಂತಹ ರಾಜಕೀಯ ಪಿತೂರಿಗಳ ವಿರುದ್ಧ ದಲಿತ ಸಮುದಾಯ ಒಗ್ಗಟಾಗಿ ಹೋರಾಟ ಮಾಡಲಿದೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಹೈಕಮಾಂಡ್ ಪರಮೇಶ್ವರ ಬೆಂಬಲಕ್ಕೆ ನಿಲ್ಲಬೇಕು’ ಎಂದು ಆಗ್ರಹಿಸಿದರು. ‘ಕೇಂದ್ರವು ದಲಿತ ಸಮುದಾಯದವರ ತಾಳ್ಮೆ ಕೆಣಕುವ ಕೆಲಸ ಮಾಡಬಾರದು. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ರಾಷ್ಟ್ರಪತಿ, ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು’ ಎಂದರು.

ಬಾಣಂತಿ ಸಾವು: ಆಸ್ಪತ್ರೆ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಸ್ಕಿ: ಇಲ್ಲಿನ ಶರಣ ಬಸವೇಶ್ವರ ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯದಿಂದ ಬಾಣಂತಿ ಸಿದ್ದಮ್ಮ ಶರಣಪ್ಪ (22) ಮೃತಪಟ್ಟಿದ್ದಾರೆ ಎಂದು ಆರೋಪಿಸಿ ಕುಟುಂಬಸ್ಥರು ಆಸ್ಪತ್ರೆ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಆಂಬುಲೆನ್ಸ್ ಗಾಜು ಹೊಡೆದು ಆಕ್ರೋಶ ವ್ಯಕ್ತಪಡಿಸಿದರು.

ಸಿದ್ದಮ್ಮ ಅವರಿಗೆ ಇದೇ ಆಸ್ಪತ್ರೆಯಲ್ಲಿ 10 ದಿನಗಳ ಹಿಂದೆ ಸಿಜೇರಿಯನ್ ಮೂಲಕ ಹೆರಿಗೆ ಮಾಡಿಸಲಾಗಿತ್ತು. ಬಳಿಕ ಮನೆಗೆ ಕಳುಹಿಸಲಾಗಿತ್ತು. ಮೇ 25ರಂದು ಅವರಿಗೆ ಜ್ವರ ಕಾಣಿಸಿಕೊಂಡಿತ್ತು. ಮತ್ತೆ ಆಸ್ಪತ್ರೆಗೆ ಕರೆದುಕೊಂಡು ಬರಲಾಗಿತ್ತು. ಪರೀಕ್ಷಿಸಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಅಲ್ಲಿ ಬಾಣಂತಿ ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದ್ದರು. ಇದರಿಂದ ರೊಚ್ಚಿಗೆದ್ದ ಕುಟುಂಬಸ್ಥರು ಬಾಣಂತಿ ಸಾವಿಗೆ ಶರಣಬಸವೇಶ್ವರ ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದರು.



ಶರಣಬಸವೇಶ್ವರ ಆಸ್ಪತ್ರೆ ಎದುರು ಸೋಮವಾರ ಪ್ರತಿಭಟನೆ ನಡೆಸಲಾಯಿತು

ಐದು ತಾಸು ಕಡತ ಪರಿಶೀಲನೆ

ದೊಡ್ಡಬಳ್ಳಾಪುರ: ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸರ್ಕಾರ ಜಾರಿಗೆ ತಂದಿರುವ ‘ಬಿ’ಖಾತಾ ಆಂದೋಲನಕ್ಕೆ ಕುರಿತಂತೆ ಸಾರ್ವಜನಿಕರಿಂದ ಬಂದಿದ್ದ ದೂರು ಆಧಾರಿಸಿ ಸೋಮವಾರ ಇಲ್ಲಿನ ನಗರಸಭೆ ಕಾರ್ಯಾಲಯಕ್ಕೆ ಲೋಕಾಯುಕ್ತ ಪೊಲೀಸರು ದಿಢೀರ್ ಭೇಟಿ ನೀಡಿ ಸತತ ಐದು ತಾಸು ಕಡತ ಪರಿಶೀಲನೆ ನಡೆಸಿದರು.

ದಾಸನಪುರ ಎಪಿಎಂಸಿಗೆ ಹೋಗುವ ರಸ್ತೆ ತಡೆದು ಆಕ್ರೋಶ

ಎಪಿಎಂಸಿ ವಿರುದ್ಧ ಜನರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಎಪಿಎಂಸಿ ತರಕಾರಿ ಮಾರುಕಟ್ಟೆಯ ದುರ್ವಾಸನೆಯಿಂದಾಗಿ ಸ್ಥಳೀಯರು ವಾಸಮಾಡಲು ಆಗುತ್ತಿಲ್ಲ ಎಂದು ಆರೋಪಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಹುಸ್ಕೂರು ರಸ್ತೆಯಿಂದ ದಾಸನಪುರ ಎಪಿಎಂಸಿ ಮಾರುಕಟ್ಟೆಗೆ ಹೋಗುವ ಮುಖ್ಯ ರಸ್ತೆಯನ್ನು ತಡೆದು ಪ್ರತಿಭಟನೆ ನಡೆಸಲಾಯಿತು. ಸ್ಥಳಕ್ಕೆ ಅಧಿಕಾರಿಗಳು ಬಂದು ಸಮಸ್ಯೆ ಬಗೆಹರಿಸುವ ತನಕ ರಸ್ತೆ ತೆರವು ಮಾಡುವುದಿಲ್ಲ ಎಂದು ಪಟ್ಟುಹಿಡಿದರು. ಪೊಲೀಸರು ಪ್ರತಿಭಟನಾಕಾರರ ಮನವೊಲಿಸಲು ಪ್ರಯತ್ನಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ.

ಪ್ರತಿಭಟನಾ ಸ್ಥಳಕ್ಕೆ ಬಂದ ಎಪಿಎಂಸಿ ಕಾರ್ಯದರ್ಶಿ ದೊರೆಸ್ವಾಮಿ ಅವರಿಗೆ ಪ್ರತಿಭಟನಾಕಾರರು ರಸ್ತೆ ಪಕ್ಕದಲ್ಲಿರುವ ಕಸದ ಸಮಸ್ಯೆ, ಶೌಚಾಲಯಗಳ ದುಸ್ಥಿತಿ, ಟ್ರಾಫಿಕ್ ಸಮಸ್ಯೆ, ಕಸದಿಂದ ಜನರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಿದರು. ಜೊತೆಗೆ ಸ್ಥಳಕ್ಕೆ ಕರೆದುಕೊಂಡು ಹೋಗಿ ಪರಿಸ್ಥಿತಿಯನ್ನು ಮನವರಿಕೆ ಮಾಡಿದರು. ಎಪಿಎಂಸಿಯವರು ಗ್ರಾಮ ಪಂಚಾಯಿತಿಗೆ ತೆರಿಗೆ ಕಟ್ಟುವ ವಿಚಾರ ನ್ಯಾಯಾಲಯದಲ್ಲಿದೆ. ನ್ಯಾಯಾಲಯದ ಆದೇಶವನ್ನು ಆಧರಿಸಿ ಮುಂದುವರಿಯಲಾಗುವುದು. ರಸ್ತೆಯಲ್ಲಿ ಸುರಿಯುತ್ತಿರುವ ಕಸ ತೆರವುಗೊಳಿಸಲಾಗುವುದು. ಕಸ ಸುರಿಯದಂತೆ ಎಚ್ಚರಿಕೆ ವಹಿಸಲಾಗುವುದು ಎಂದು ದೊರೆಸ್ವಾಮಿ ಭರವಸೆ ನೀಡಿದರು.

ಹುಸ್ಕೂರು ಗ್ರಾಮಪಂಚಾಯಿತಿ ಅಧ್ಯಕ್ಷ ಡಾ.ಬಿ.ರಮೇಶ್ ‘ಸಮಸ್ಯೆಗಳನ್ನು ಶಾಸಕ ಎಸ್.ಆರ್. ವಿಶ್ವನಾಥ್ ಸಮ್ಮುಖದಲ್ಲಿ ಬಗೆಹರಿಸುವುದಾಗಿ ತಿಳಿಸಿದ್ದಾರೆ. ಬಗೆಹರಿಯದಿದ್ದರೆ ಉಗ್ರ ಪ್ರತಿಭಟನೆ ಮಾಡಲಾಗುವುದು’ ಎಂದು ತಿಳಿಸಿದರು.

ವರ್ತಕ ಗೋವಿಂದ, ಹುಸ್ಕೂರು ಗ್ರಾಮ ಪಂಚಾಯಿತಿ ಪಿಡಿಒ ರಾಜೇಶ್, ಮಾದನಾಯಕನಹಳ್ಳಿ ಇನ್‌ಸ್ಪೆಕ್ಟರ್ ಮುರುಳಿಧರ್, ಎಂಪಿಎಂಸಿ ಅಧಿಕಾರಿ ಸುಮಾ ಉಪಸ್ಥಿತರಿದ್ದರು.



ಎಪಿಎಂಸಿಯ ಕಸವನ್ನು ರಸ್ತೆಯಲ್ಲಿ ಹಾಕಿರುವುದರ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು

ಭಯಪಡುವ ಅಗತ್ಯ ಇಲ್ಲ ಐಸಿಎಂಆರ್

ನವದೆಹಲಿ (ಪಿಟಿಐ): ದೇಶದ ಕೆಲವು ಭಾಗಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಯ (ಐಸಿಎಂಆರ್) ಮಹಾ ನಿರ್ದೇಶಕ ಡಾ. ರಾಜೀವ್ ಬಹಲ್, 'ಸೋಂಕಿನ ತೀವ್ರತೆಯು ಸದ್ಯ ಅಲ್ಪ ಪ್ರಮಾಣದಲ್ಲಿದೆ ಮತ್ತು ಭಯಪಡುವ ಅಗತ್ಯವಿಲ್ಲ' ಎಂದು ತಿಳಿಸಿದ್ದಾರೆ.

ಹೊಸ ಕೋವಿಡ್ ರೂಪಾಂತರಿಗಳನ್ನು ಗುರುತಿಸಿರುವ ಬಗ್ಗೆ ಮಾತನಾಡಿದ ಅವರು, ' ಪಶ್ಚಿಮ ಮತ್ತು ದಕ್ಷಿಣ ಭಾಗದಲ್ಲಿ ಮಾದರಿಗಳ ರೂಪಾಂತರಿ ಅನುಕ್ರಮದಲ್ಲಿ (ಜಿನೋಮ್ ಸೀಕ್ವೆನ್ಸಿಂಗ್) ಹೊಸ ಉಪತಳಿಗಳು ಪತ್ತೆಯಾಗಿವೆ. ಅವುಗಳನ್ನು ಎಲ್‌ಎಫ್.7, ಎಕ್ಸ್‌ಎಫ್‌ಜಿ, ಜೆಎನ್.1 ಮತ್ತು ಎನ್‌ಬಿ 1.8.1 ಎಂದು ಗುರುತಿಸಲಾಗಿದೆ. ಅವು ಒಮಿಕ್ರಾನ್ ಉಪ ತಳಿಗಳಾಗಿದ್ದು, ಮಾರಣಾಂತಿಕವಲ್ಲ ಎಂದು ಗೊತ್ತಾಗಿದೆ' ಎಂದಿದ್ದಾರೆ.

ಮೊದಲ ಮೂರು ರೂಪಾಂತರಿಗಳು ವ್ಯಾಪಕವಾಗಿವೆ. ಮತ್ತಷ್ಟು ಪ್ರದೇಶಗಳ ಮಾದರಿಗಳನ್ನು ಸೀಕ್ವೆನ್ಸ್ ಮಾಡಲಾಗುತ್ತಿದೆ. ಇನ್ನೂ ರೂಪಾಂತರಿಗಳು ಇವೆಯೇ ಎಂಬುದು ಎರಡು–ಮೂರು ದಿನಗಳಲ್ಲಿ ಗೊತ್ತಾಗಲಿದೆ ಎಂದು ಹೇಳಿದ್ದಾರೆ.

ಕೋವಿಡ್: ವಿಮಾನ ನಿಲ್ದಾಣಗಳಲ್ಲಿ ಕಣ್ಗಾವಲು, ರಾಜ್ಯಕ್ಕೆ ಬರುವ ಪ್ರಯಾಣಿಕರ ತಪಾಸಣೆ

ಗರ್ಭಿಣಿಯರಿಗೆ ಮಾಸ್ಕ್ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ವೃದ್ಧರು, ಗರ್ಭಿಣಿಯರು, ಹೃದಯ ಸಂಬಂಧಿ ಕಾಯಿಲೆ ಹಾಗೂ ಶ್ವಾಸಕೋಶ ಸಮಸ್ಯೆ ಇರುವ ನಾಗರಿಕರು ಮುಂಜಾಗ್ರತಾ ಕ್ರಮವಾಗಿ ಮಾಸ್ಕ್ ಧರಿಸುವಂತೆ ಸರ್ಕಾರ ಸೂಚಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ವಿವಿಧ ಇಲಾಖೆಗಳ ಸಚಿವರು, ಅಧಿಕಾರಿಗಳ ಸಭೆಯಲ್ಲಿ ಸಾರ್ವಜನಿಕರಿಗೆ ಆರೋಗ್ಯ ಮಾರ್ಗಸೂಚಿ ಬಿಡುಗಡೆ ಮಾಡಲು ನಿರ್ಧರಿಸಲಾಯಿತು.

ಸದ್ಯಕ್ಕೆ ಆತಂಕಪಡುವ ಪರಿಸ್ಥಿತಿ ರಾಜ್ಯದಲ್ಲಿ ಇಲ್ಲ. ಆದರೆ, ಮುಂದೆ ಸಂಭವಿಸಬಹುದಾದ ಪರಿಸ್ಥಿತಿಯನ್ನು ಅವಲೋಕಿಸಿ ಅಗತ್ಯವಾದ ಕ್ರಮ ಕೈಗೊಳ್ಳಲು ಆಡಳಿತವನ್ನು ಸಜ್ಜುಗೊಳಿಸಬೇಕು. ವಿಮಾನ ನಿಲ್ದಾಣದಿಂದ ಹೊರ ಬರುವ ಪ್ರಯಾಣಿಕರ ಮೇಲೆ ಕಣ್ಗಾವಲು ಇಡಬೇಕು. ರಾಜ್ಯ ಪ್ರವೇಶಿಸುವವರ ಆರೋಗ್ಯ ತಪಾಸಣೆಗಾಗಿ ಪ್ರತ್ಯೇಕ ಘಟಕಗಳನ್ನು ತೆರೆಯಬೇಕು. ವೆಂಟಿಲೇಟರ್, ಆಮ್ಲಜನಕ, ಔಷಧ ಸೇರಿದಂತೆ ಅಗತ್ಯ ಪರಿಕರಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳಬೇಕು ಎಂದು ಸಿದ್ದರಾಮಯ್ಯ ನಿರ್ದೇಶನ ನೀಡಿದ್ದಾರೆ.

ಸಾರ್ವಜನಿಕರಿಗೆ ನೆರವಾಗಲು ಕೋವಿಡ್ ಸಹಾಯವಾಣಿ ತೆರೆಯಬೇಕು. ಪ್ರತಿ ವಾರ ಅಥವಾ ಮೂರು ದಿನಕ್ಕೆ ಒಮ್ಮೆ ಪರಿಸ್ಥಿತಿಯ ಪರಿಶೀಲನೆ ನಡೆಸಬೇಕು. ಜನರ ಆರೋಗ್ಯದ ಮೇಲೆ ತೀವ್ರ ನಿಗಾ ಇಡಬೇಕು. ಸಮಸ್ಯೆ ಇರುವ ಗರ್ಭಿಣಿಯರನ್ನು ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ವರ್ಗಾಯಿಸಬಾರದು. ಎಲ್ಲಾ ಆಸ್ಪತ್ರೆಗಳಲ್ಲೂ ಅಗತ್ಯ ವ್ಯವಸ್ಥೆ ಮಾಡಿಕೊಂಡಿರಬೇಕು ಎಂದು ಸೂಚಿಸಿದರು.

ಸೋಂಕು ಪತ್ತೆ

ಶಿವಮೊಗ್ಗ: ನಗರದಲ್ಲಿ ಸೋಮವಾರ 75 ವರ್ಷ ವಯಸ್ಸಿನ ವೃದ್ಧರೊಬ್ಬರಲ್ಲಿ ಕೋವಿಡ್-19 ಸೋಂಕು ದೃಢಪಟ್ಟಿದೆ. ಮತ್ತೊಂದು ಶಂಕಿತ ಕೋವಿಡ್ ಪ್ರಕರಣದಲ್ಲಿ 2 ತಿಂಗಳ ಮಗುವಿನ ಸ್ಯಾಂಪಲ್‌ನ್ನು ಪರೀಕ್ಷೆಗಾಗಿ ಸಿಮ್ಸ್‌ನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ತಿಳಿದುಬಂದಿದೆ.

'ಇಬ್ಬರೂ ಅಪಾಯದಿಂದ ಪಾರಾಗಿದ್ದಾರೆ. ಸೋಂಕು ದೃಢಪಟ್ಟಿರುವ ವೃದ್ಧ ಹಾವೇರಿ ತಾಲ್ಲೂಕಿನವರು. ಮಗುವಿನ ಪರೀಕ್ಷಾ ವರದಿಯ ಫಲಿತಾಂಶ ಬುಧವಾರ ಅಧಿಕೃತಗೊಳ್ಳಲಿದೆ' ಎಂದು ಡಿಎಚ್‌ಒ ಡಾ.ನಟರಾಜ್ ಪ್ರತಿಕ್ರಿಯಿಸಿದರು.

ಮುಖ್ಯಾಂಶಗಳು

- ಕೋವಿಡ್ ಚಿಕಿತ್ಸೆಗೆ ಜಿಲ್ಲಾ ಆಸ್ಪತ್ರೆಗಳು ಸಜ್ಜು
- ಆರೋಗ್ಯ ಇಲಾಖೆ ಸಿಬ್ಬಂದಿಗೆ ರಜೆ ಇಲ್ಲ
- ಕೇಂದ್ರ ಸ್ಥಾನ ಬಿಟ್ಟು ತೆರಳದಂತೆ ಸೂಚನೆ

ಅಂಕಿ ಅಂಶ

37 ರಾಜ್ಯದಲ್ಲಿ ಸೋಮವಾರ ದೃಢಪಟ್ಟ ಪ್ರಕರಣಗಳು

4 ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಗೊಂಡವರು

80 ಒಟ್ಟು ಸಕ್ರಿಯ ಪ್ರಕರಣಗಳು

ರಾಜ್ಯ	ಪತ್ತೆಯಾದ ಪ್ರಕರಣಗಳು
ಕರ್ನಾಟಕ	62
ಕೇರಳ	95
ತಮಿಳು ನಾಡು	66
ಮಹಾರಾಷ್ಟ್ರ	56

ಶೀತ, ಜ್ವರ: ಶಾಲೆಗೆ ಬೇಡ ಮಕ್ಕಳು

ಮಕ್ಕಳಿಗೆ ಶೀತ, ಜ್ವರ, ಕೆಮ್ಮು ಮೊದಲಾದ ಲಕ್ಷಣಗಳು ಕಂಡು ಬಂದರೆ ಶಾಲೆಗೆ ಕಳಿಸಬಾರದು ಎಂದು ಸಂದೇಶ ನೀಡಬೇಕು. ಮಕ್ಕಳು, ಪೋಷಕರಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

ಶಾಲಾ ಕಾಲೇಜು ಮಂಡಳಿಗಳು ಮಕ್ಕಳ ಆರೋಗ್ಯದ ಮೇಲೆ ನಿಗಾ ವಹಿಸಬೇಕು. ಸಮಸ್ಯೆ ಕಂಡುಬಂದ ತಕ್ಷಣ ಪೋಷಕರಿಗೆ ಮಾಹಿತಿ ನೀಡಬೇಕು ಎಂದರು.

ಬಾಣಂತಿಯರು ಹಾಗೂ ಮಕ್ಕಳ ಆರೋಗ್ಯ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದು ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

5 ಸಾವಿರ ಆರ್‌ಟಿಪಿಸಿಆರ್ ಕಿಟ್

ಕೋವಿಡ್ ಪರೀಕ್ಷಾ ಕಿಟ್‌ಗಳನ್ನು ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಿಗೆ ವಿತರಿಸಲಾಗಿದೆ. 5 ಸಾವಿರ ಆರ್‌ಟಿಪಿಸಿಆರ್ ಕಿಟ್‌ಗಳನ್ನು ಖರೀದಿ ಮಾಡಲಾಗಿದ್ದು, ಮಂಗಳವಾರ (ಮೇ 27) ಸಂಜೆ ಒಳಗೆ ಆಸ್ಪತ್ರೆಗಳಿಗೆ ತಲುಪಲಿವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕೋವಿಡ್ ಒಮೈಕ್ರಾನ್ ಜೆಎನ್–1 ತಳಿಯಾಗಿದ್ದು, ಸೌಮ್ಯ ಲಕ್ಷಣ ಹೊಂದಿದೆ. ಉಸಿರಾಟ, ಮತ್ತು ಹೃದಯ ಕಾಯಿಲೆ ಇರುವವರಿಗೆ ವಿಆರ್‌ಡಿಎಲ್ ಟೆಸ್ಟಿಂಗ್ ಕೇಂದ್ರಗಳಲ್ಲಿ ಪರೀಕ್ಷೆ ಮಾಡಲಾಗುತ್ತಿದೆ. ಮುಂಜಾಗ್ರತಾ ಕ್ರಮವಾಗಿ ರೆಮ್ಡಿಸಿವಿರ್ ಇಂಜೆಕ್ಷನ್ ಖರೀದಿಸಲು ಸೂಚಿಸಲಾಗಿದೆ ಎಂದು ವಿವರಿಸಿದರು.

ಆದಾಯ ಮೀರಿ ಆಸ್ತಿ ಗಳಿಕೆ ಆರೋಪ ಬಿಇಎಂಎಲ್ ಮುಖ್ಯಸ್ಥ ಖುಲಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್‌ನ (ಬಿಇಎಂಎಲ್) ಮಾಜಿ ಮುಖ್ಯಸ್ಥ ಹಾಗೂ ವ್ಯವಸ್ಥಾಪಕ ನಿರ್ದೇಶಕ ವಿ.ಆರ್.ಎಸ್ ನಟರಾಜನ್ ಅವರನ್ನು ಹೈಕೋರ್ಟ್, ಆದಾಯ ಮೀರಿದ ಆಸ್ತಿ ಗಳಿಸಿದ ಆರೋಪಕ್ಕೆದಿಂದ ಖುಲಾಸೆಗೊಳಿಸಿದೆ.

ಈ ಸಂಬಂಧ ಚೆನ್ನೈನ ವಿ.ಆರ್.ಎಸ್.ನಟರಾಜನ್ ಸಲ್ಲಿಸಿದ್ದ ಕ್ರಿಮಿನಲ್ ಮರುಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಅರ್ಜಿದಾರರ ಕುಟುಂಬದ ಸದಸ್ಯರ ಸ್ವತಂತ್ರ ಆದಾಯ ಮೂಲವನ್ನೂ ಪರಿಗಣಿಸಬೇಕಿತ್ತು. ಆದರೆ, ಸಿಬಿಐ ಅದನ್ನು ಪರಿಗಣಿಸಿಲ್ಲ ಮತ್ತು ಚುರುಕಿನಿಂದ ತನಿಖೆ ನಡೆಸಿಲ್ಲ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಅರ್ಜಿದಾರರನ್ನು ಆರೋಪ ಮುಕ್ತಗೊಳಿಸಿದೆ.

ಪ್ರಕರಣವೇನು?: 'ನಟರಾಜನ್ ಅವರು 2002ರ ಡಿಸೆಂಬರ್ 1ರಿಂದ 2012ರ ಏಪ್ರಿಲ್ 19ರವರೆಗೆ ತಮ್ಮ ಆದಾಯ ಮೂಲಕ್ಕೂ ಹೆಚ್ಚಾಗಿ ಸಂಪಾದನೆ ಮಾಡಿದ್ದಾರೆ' ಎಂದು ದೂರಲಾಗಿತ್ತು. ಇದನ್ನು ಆಧರಿಸಿ ಸಿಬಿಐ ಶೋಧ ಮತ್ತು ಜಪ್ತಿ ನಡೆಸಿ ಎಫ್‌ಐಆರ್ ದಾಖಲಿಸಿತ್ತು. ಅಂತೆಯೇ, ತನಿಖೆ ನಡೆಸಿ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಕಲಂ 13(2)ರ ಜೊತೆಗೆ 13(1)(ಇ) ಅಡಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಆರೋಪದಿಂದ ಖುಲಾಸೆಗೊಳಿಸುವಂತೆ ಕೋರಿ ನಟರಾಜನ್ ಸಲ್ಲಿಸಿದ್ದ ಅರ್ಜಿಯನ್ನು ಸಿಬಿಐ ವಿಶೇಷ ನ್ಯಾಯಾಲಯ ತಿರಸ್ಕರಿಸಿತ್ತು.

ಸಿಎಟಿ ತಡೆ: ಐಪಿಎಸ್ ಅಧಿಕಾರಿ, ತರಬೇತಿ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆ ಆದೇಶಿಸಿ, ರಾಜ್ಯ ಸರ್ಕಾರ ನೀಡಿದ್ದ ನೋಟಿಸ್‌ಗೆ ಕೇಂದ್ರೀಯ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಮಧ್ಯಂತರ ತಡೆ ನೀಡಿದೆ.

ನೋಟಿಸ್ ಪ್ರಶ್ನಿಸಿ ಅಲೋಕ್ ಕುಮಾರ್ ಸಲ್ಲಿಸಿದ್ದ ಮೂಲ ಅರ್ಜಿಯನ್ನು ರಜಾಕಾಲದ ಪೀಠದಲ್ಲಿದ್ದ ಸಿಎಟಿ ಸದಸ್ಯ ನ್ಯಾಯಮೂರ್ತಿ ಶ್ರೀವಾಸ್ತವ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದ್ದಾರೆ. ಪ್ರತಿವಾದಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ಪೀಠವು, ವಿಚಾರಣೆಯನ್ನು ಜೂನ್ 10ಕ್ಕೆ ಮುಂದೂಡಿದೆ.

ಅಖಿಲ ಭಾರತ ಸೇವೆಗಳ ನಿಯಮ–1969ರ (ಶಿಸ್ತು ಹಾಗೂ ಮೇಲ್ಮನವಿ) ಅಡಿಯಲ್ಲಿ 2025ರ ಮೇ 9ರಂದು ನೀಡಲಾಗಿರುವ ನೋಟಿಸ್ ಪ್ರಶ್ನಿಸಿ ಅಲೋಕ್ ಕುಮಾರ್ ಈ ಅರ್ಜಿ ಸಲ್ಲಿಸಿದ್ದಾರೆ.

ಸುಪ್ರೀಂ ಕೋರ್ಟ್‌ಗೆ ಮರು ಪರಿಶೀಲನಾ ಅರ್ಜಿ ಸಲ್ಲಿಸಿದ ರಾಜ್ಯ ಸರ್ಕಾರ

ರಾಜವಂಶಸ್ಥರಿಗೆ ಟಿಡಿಆರ್: ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಅರಮನೆ ಮೈದಾನದ 15 ಎಕರೆ ಸ್ವಾಧೀನಕ್ಕೆ ಸಂಬಂಧಿಸಿದಂತೆ ಮೈಸೂರು ರಾಜವಂಶಸ್ಥರಿಗೆ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕುಗಳ (ಟಿಡಿಆರ್) ಪ್ರಮಾಣಪತ್ರಗಳನ್ನು ನೀಡುವುದನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಯನ್ನು ಮಂಗಳವಾರ ವಿಚಾರಣೆಗೆ ಪಟ್ಟಿ ಮಾಡಲು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿತು.

ಆರಂಭದಲ್ಲಿ, ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹಾಗೂ ನ್ಯಾಯಮೂರ್ತಿ ಅಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು ರಾಜ್ಯ ಸರ್ಕಾರದ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರನ್ನು 'ಮತ್ತೊಂದು ಪೀಠವು ನೀಡಿರುವ ತೀರ್ಪನ್ನು ನಾವು ಮರು ಪರಿಶೀಲನೆ ನಡೆಸಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿತು.

ರಾಜವಂಶಸ್ಥರಿಗೆ ₹3400 ಕೋಟಿ ಟಿಡಿಆರ್ ನೀಡಬೇಕು ಎಂದು ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಹಾಗೂ ಅರವಿಂದ ಕುಮಾರ್ ಪೀಠವು ಮೇ 22ರಂದು ತೀರ್ಪು ನೀಡಿತ್ತು.

'ಬೆಂಗಳೂರು ಅರಮನೆ (ಸ್ವಾಧೀನ ಹಾಗೂ ವರ್ಗಾವಣೆ) ಕಾಯ್ದೆಯಡಿ ಅರಮನೆ ಜಾಗವನ್ನು 1996ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಯಿತು. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಗೆ 2004ರಲ್ಲಿ ತಿದ್ದುಪಡಿ ತಂದು ಟಿಡಿಆರ್ ಪರಿಚಯಿಸಲಾಯಿತು. ಹೀಗಾಗಿ, ಮೊದಲೇ ಸ್ವಾಧೀನಪಡಿಸಿಕೊಂಡ ಭೂಮಿಗೆ ಟಿಡಿಆರ್ ಅನ್ವಯ ಆಗುವುದಿಲ್ಲ' ಎಂದು ಸಿಬಲ್ ವಾದಿಸಿದರು.

'ಟಿಡಿಆರ್ ನಿಯಮ ಜಾರಿಗೆ ಬರುವ ಮೊದಲೇ 15 ಎಕರೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಮೂಲ ಕಾಯ್ದೆಯಡಿ ಭೂ ಸಂತ್ರಸ್ತರಿಗೆ ಪರಿಹಾರವನ್ನು ಇತ್ಯರ್ಥಪಡಿಸಲಾಗಿದೆ' ಎಂದರು.

'15 ಎಕರೆಯನ್ನು 1996ರ ಕಾನೂನಿನಡಿ ಸ್ವಾಧೀನಪಡಿಸಿಕೊಂಡು ₹11 ಕೋಟಿ ಪರಿಹಾರ ನಿಗದಿಪಡಿಸಲಾಗಿತ್ತು. ಆ ಸಮಯದಲ್ಲಿ ಟಿಡಿಆರ್ ಪರಿಕಲ್ಪನೆಯೇ ಇರಲಿಲ್ಲ. ಟಿಡಿಆರ್ ಅನ್ನು ಅನುಮತಿಸುವ ಸೆಕ್ಷನ್ 14 ಬಿ ಅನ್ನು 2004ರಲ್ಲಿ ಮಾತ್ರ ಪರಿಚಯಿಸಲಾಯಿತು. ಭೂಮಾಲೀಕರು ಸ್ವಯಂಪ್ರೇರಣೆಯಿಂದ ತಮ್ಮ ಜಮೀನು ಬಿಟ್ಟುಕೊಟ್ಟರೆ ಟಿಡಿಆರ್ ನೀಡಬಹುದು' ಎಂದು ಅವರು ಸ್ಪಷ್ಟಪಡಿಸಿದರು.

1996ರ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ರಾಜಮನೆತನವು 1997ರಲ್ಲಿ ನ್ಯಾಯಾಲಯದ ಮೆಟ್ಟಿಲೇರಿತ್ತು. ಈ ಅರ್ಜಿಯ ವಿಚಾರಣೆ ಇನ್ನೂ ಮುಗಿದಿಲ್ಲ.

'ದ್ವಿಸದಸ್ಯ ಪೀಠವು ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ತೀರ್ಪು ನೀಡಿದೆ. ಆದರೆ, ಸೆಕ್ಷನ್ 14 ಬಿ ಅಡಿಯಲ್ಲಿ ತಾವು ಎತ್ತಿರುವ ಕಾನೂನು ಆಕ್ಷೇಪಣೆಗಳಿಗೆ ತೀರ್ಪಿನಲ್ಲಿ ಉತ್ತರ ಸಿಕ್ಕಿಲ್ಲ' ಎಂದು ಸಿಬಲ್ ವಾದಿಸಿದರು. 'ನೀವು ಅಂತಿಮ ತೀರ್ಪನ್ನು ತಿದ್ದುಪಡಿ ಮಾಡಲು ಅಥವಾ ನ್ಯಾಯಾಂಗ ನಿಂದನೆ ಪ್ರಕ್ರಿಯೆಯ ಮೂಲಕ ಹೊಸ ಹಕ್ಕುಗಳನ್ನು ಪರಿಚಯಿಸಲು ಸಾಧ್ಯವಿಲ್ಲ' ಎಂದು ಅವರು ಹೇಳಿದರು.

ಮುಖ್ಯಾಂಶಗಳು

- ಬೆಂಗಳೂರು ಅರಮನೆ ಮೈದಾನದ 15 ಎಕರೆ ಸ್ವಾಧೀನ
- ₹3400 ಕೋಟಿ ಟಿಡಿಆರ್ ಮೊತ್ತ



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ವಸತಿ ಶಾಲೆಗಳ ನೌಕರರ ಸಂಘದ ಸದಸ್ಯರು ಸೋಮವಾರ ಧರಣಿ ಸತ್ಯಾಗ್ರಹ ನಡೆಸಿದರು ಪ್ರಜಾವಾಣಿ ಚಿತ್ರ

ಎನ್. ರವಿಕುಮಾರ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಕಲಬುರಗಿ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಪರಿಶಿಷ್ಟ ಜಾತಿಯವರಿಗೆ ಸಾರ್ವಜನಿಕವಾಗಿ ಬೆದರಿಕೆ ಹಾಕಿ, ಜಾತಿ ನಿಂದನೆ ಮಾಡಿದ ಆರೋಪದಡಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ವಿರುದ್ಧ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿದೆ.

ದತ್ತಾತ್ರೇಯ ಇಕ್ಕಳಕಿ ಅವರು ನೀಡಿದ ದೂರಿನ ಅನ್ವಯ ರವಿಕುಮಾರ್ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಸಿ–ಎಸ್‌ಟಿ) ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ನಗರದಲ್ಲಿ ಈಚೆಗೆ ಬಿಜೆಪಿಯ ಪ್ರತಿಭಟನೆ ನಡೆಯಿತು. ರವಿಕುಮಾರ್ ಅವರು ತಮ್ಮ ಭಾಷಣದಲ್ಲಿ 'ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು ಪಾಕಿಸ್ತಾನದವರೋ ಅಥವಾ ಭಾರತದವರೋ ಎಂಬುದು ಖಚಿತವಾಗಿಲ್ಲ. ಶಹಾಬಾದ್ ಡಿವೈಎಸ್‌ಪಿ ಶಂಕರಗೌಡ ಪಾಟೀಲ, ಸಿಪಿಐಗಳಾದ ಚಂದ್ರಶೇಖರ ತಿಗಡಿ ಮತ್ತು ನಟರಾಜ ಲಾಡೆ ಅವರು ಕರ್ತವ್ಯ ನಿರ್ವಹಿಸಲು ಅಸಮರ್ಥರಾಗಿದ್ದಾರೆ' ಎಂದು ಹೇಳಿಕೆ ಕೊಟ್ಟಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

'ನಿರಂಕುಶ ಪ್ರಭುತ್ವ ಹಿಮ್ಮೆಟ್ಟಿಸುವೆವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಲೆಲ್ಲಾ ಕಾಂಗ್ರೆಸ್ ಪಾಳೆಗಾರಿಕೆ ಮಾಡುತ್ತದೆ. ಕಳೆದ ಎರಡು ವರ್ಷಗಳಲ್ಲಿ ನಿರಂಕುಶ ಪ್ರಭುತ್ವ ಸಾಧಿಸುವ ಪ್ರಯತ್ನ ನಡೆಸಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.



ವಿಜಯೇಂದ್ರ

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ನೀಡಿರುವ ಅವರು, ಸರಣಿ ಭ್ರಷ್ಟಾಚಾರ, ಅಭಿವೃದ್ಧಿ ಶೂನ್ಯ ಆಡಳಿತ ಪ್ರಶ್ನಿಸಿ ಹೋರಾಟ ನಡೆಸುತ್ತಿರುವ ವಿರೋಧ ಪಕ್ಷಗಳನ್ನು ಪೊಲೀಸ್ ವ್ಯವಸ್ಥೆ ದುರ್ಬಳಕೆ ಮಾಡಿಕೊಂಡು ಬೆದರಿಸಲಾಗುತ್ತಿದೆ. ಎರಡು ವರ್ಷಗಳ ಸಾಧನೆಯ ಹೆಸರಿನಲ್ಲಿ ಸರ್ಕಾರ ದುಂದುವೆಚ್ಚದ ಸಾಧನ ಸಮಾವೇಶ ಮಾಡಿದೆ. ಇಂತಹ ಜನವಿರೋಧಿ ನಡೆಯನ್ನು ಪ್ರಶ್ನಿಸಿ, ಭಾರತೀಯ ಜನತಾ ಪಕ್ಷ ಮಾಧ್ಯಮಗಳಿಗೆ ನೀಡಿದ ಜಾಹೀರಾತಿನಿಂದ ಮುಖ್ಯಮಂತ್ರಿ, ಸಚಿವರು ವಿಚಲಿತಗೊಂಡಿದ್ದಾರೆ. ಮಾನನಷ್ಟ ಮೊಕದ್ದಮೆ ಹೂಡಲು ಹೊರಟಿದ್ದಾರೆ ಎಂದು ದೂರಿದ್ದಾರೆ.

ಮಾನನಷ್ಟ ಮೊಕದ್ದಮೆ ಹೂಡಲು ಸರ್ಕಾರದ ವ್ಯವಸ್ಥೆ, ಅಧಿಕಾರಿಗಳನ್ನು ನಿಯೋಜಿಸುವ ಮೂಲಕ ಪ್ರಥಮ ಬಾರಿಗೆ ಕರ್ನಾಟಕದಲ್ಲಿ ವಿರೋಧ ಪಕ್ಷ ಹಾಗೂ ಮಾಧ್ಯಮಗಳನ್ನು ಬೆದರಿಸುವ ಕರಾಳ ಅಧಿಸೂಚನೆ ಹೊರಡಿಸಲಾಗಿದೆ. ಬಿಜೆಪಿ ಜತೆಗೇ ಮಾಧ್ಯಮಗಳ ವಿರುದ್ಧವೂ ಸೇಡು ತೀರಿಸಿಕೊಳ್ಳಲು ಹೊರಟಿದ್ದಾರೆ. ಜಾಹೀರಾತಿಗೆ ಇಷ್ಟೊಂದು ಹೆದರಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರದ ನಡೆ ಪಲಾಯನವಾದ ಹಾಗೂ 'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡಂತೆ' ಎಂಬುದನ್ನು ಪ್ರತಿಬಿಂಬಿಸುತ್ತಿದೆ. ಕಾಂಗ್ರೆಸ್ ಸರ್ಕಾರದ ಯಾವುದೇ ಬೆದರಿಕೆಗೂ ಬಿಜೆಪಿ ಬಗ್ಗದು ಎಂದು ಹೇಳಿದ್ದಾರೆ.

ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯ 2ನೇ ಅಧ್ಯಾಯ ಆರಂಭವಾಗಿದೆ. ಹಿಮ್ಮೆಟ್ಟಿಸುವ ಶಕ್ತಿ ಪ್ರಜಾಪ್ರಭುತ್ವಕ್ಕೆ, ಕರ್ನಾಟಕದ ಜನರು, ವಿರೋಧ ಪಕ್ಷಗಳು ಹಾಗೂ ಮಾಧ್ಯಮಗಳಿಗೆ ಇದೆ ಎಂದಿದ್ದಾರೆ.


'ಬದ್ಧತೆ ಇಲ್ಲ': 'ಕೇಂದ್ರ ಸರ್ಕಾರ ನಡೆಸಿದ ನೀತಿ ಆಯೋಗದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸದೇ ನಿರ್ಲಕ್ಷ್ಯ ತಾಳಿರುವುದನ್ನು ನೋಡಿದರೆ ರಾಜ್ಯದ ಅಭಿವೃದ್ಧಿ ಕುರಿತು ಅವರಿಗೆ ಬದ್ಧತೆ ಇಲ್ಲದಿರುವುದು ಸ್ಪಷ್ಟವಾಗುತ್ತದೆ' ಎಂದು ವಿಧಾನ ಪರಿಷತ್ ವಿರೋಧಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಟೀಕಿಸಿದ್ದಾರೆ.

'ನೀತಿ ಆಯೋಗದ ಸಭೆಯು ರಾಜ್ಯದ ಅಭಿವೃದ್ಧಿಗೆ ಅತಿ ನಿರ್ಣಾಯಕ. ಅಲ್ಲಿ ರಾಜ್ಯ ಅಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ವಿಷಯ ಚರ್ಚೆಯಾಗುತ್ತದೆ. ಆದರೆ, ಮುಖ್ಯಮಂತ್ರಿಯವರು ಯಾವುದೇ ಗಂಭೀರ ಕಾರಣವಿಲ್ಲದೇ ಆ ಸಭೆಗೆ ಗೈರಾಗಿದ್ದಾರೆ' ಎಂದು ಅವರು ಟೀಕಿಸಿದ್ದಾರೆ.

'ಮೊಕದ್ದಮೆ ನಾಟಕ ಬಿಡಿ'

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಮಾನನಷ್ಟ ಮೊಕದ್ದಮೆಯ ನಾಟಕ ಬಿಡಬೇಕು ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ದೂರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಮಾನನಷ್ಟ ಮೊಕದ್ದಮೆ ಹೂಡಲು ಸರ್ಕಾರಕ್ಕೆ ನೈತಿಕತೆ ಇಲ್ಲ. ಐದೂ ಗ್ಯಾರಂಟಿಗಳು ಅರ್ಧದಷ್ಟು ಜನರಿಗೆ ಮುಟ್ಟಿಲ್ಲ. ಯಾವುದೇ ಸಾಧನೆ ಮಾಡದೆ ಎರಡು ವರ್ಷ ಪೂರೈಸಿದ್ದಾರೆ ಎಂದು ಟೀಕಿಸಿದರು.



ಛಲವಾದಿ

'ಸ್ವಚ್ಛ ವಾಹಿನಿ' ನಿರ್ವಹಣೆಗೆ ಪ್ರತ್ಯೇಕ ಅಧಿಕಾರಿ: ಖರ್ಗೆ

ಬೆಂಗಳೂರು: 'ಗ್ರಾಮ ಪಂಚಾಯಿತಿಗಳಲ್ಲಿ ಆರಂಭಿಸಿರುವ 'ಸ್ವಚ್ಛ ವಾಹಿನಿ' ಗ್ರಾಮೀಣ ನೈರ್ಮಲ್ಯ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಚಾಲಕಿಯರ ವೇತನ, ಸುಸಜ್ಜಿತ ಸ್ಥಿತಿಯಲ್ಲಿ ವಾಹನಗಳ ನಿರ್ವಹಣೆ, ಇಂಧನ ಮತ್ತಿತರ ಅವಶ್ಯಕತೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಪ್ರತ್ಯೇಕ ಅಧಿಕಾರಿಯನ್ನು ನೇಮಿಸಲಾಗುವುದು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

'ಸ್ವಚ್ಛ ವಾಹಿನಿ'ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರ ಬೇಡಿಕೆಗಳು, ಸಮಸ್ಯೆಗಳು ಮತ್ತು ಕೈಗೊಳ್ಳಬಹುದಾದ ಪರಿಹಾರ ಕ್ರಮಗಳ ಕುರಿತು ಅಧಿಕಾರಿಗಳ ಜೊತೆ ಸೋಮವಾರ ಅವರು ಚರ್ಚೆ ನಡೆಸಿದರು. ರಾಜ್ಯದಲ್ಲಿ 3,469 ಮಹಿಳಾ ಚಾಲಕಿಯರು ತ್ಯಾಜ್ಯ ನಿರ್ವಹಣೆಯಲ್ಲಿ ನಿರತರಾಗಿದ್ದಾರೆ.

ಪಂಚಾಯತ್ ರಾಜ್ ಇಲಾಖೆಯ ಆಯುಕ್ತೆ ಡಾ. ಅರುಂಧತಿ ಚಂದ್ರಶೇಖರ್ ಮತ್ತು ಇತರ ಅಧಿಕಾರಿಗಳು ಸಭೆಯಲ್ಲಿದ್ದರು.

ವಸತಿ ಶಾಲೆ ನೌಕರರ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗದು ರಹಿತ ಚಿಕಿತ್ಸೆಗಾಗಿ ಜ್ಯೋತಿ ಸಂಜೀವಿನಿ ಯೋಜನೆ ವ್ಯಾಪ್ತಿಗೆ ತಮ್ಮನ್ನು ಸೇರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಸತಿ ಶಾಲೆಗಳ ನೌಕರರ ಸಂಘದ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ ಧರಣಿ ಸತ್ಯಾಗ್ರಹ ಆರಂಭಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ಅಧೀನದ ಕ್ರೈಸ್ ವಸತಿ ಶಾಲೆಗಳ ಕಾಯಂ ಶಿಕ್ಷಕರು, ನೌಕರರು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ವಸತಿ ಶಿಕ್ಷಣ ನಿರ್ದೇಶನಾಲಯ ರಚನೆ ಅಥವಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ವಸತಿ ಶಾಲೆಗಳನ್ನು ಸಿಬ್ಬಂದಿಯೊಂದಿಗೆ ಸಂಬಂಧಿಸಿದ ಇಲಾಖೆಗಳ ವಶಕ್ಕೆ ನೀಡಬೇಕು, ಮರಣ ಮತ್ತು ನಿವೃತ್ತಿ ಉಪದಾನ ಸೌಲಭ್ಯ ಒದಗಿಸಬೇಕು, ಎಂದು ವಸತಿ ಶಾಲೆಗಳ ನೌಕರರ ಸಂಘದ ಉಪಾಧ್ಯಕ್ಷೆ ಲಕ್ಷ್ಮಿ ಶೆಟ್ಟಿ ಒತ್ತಾಯಿಸಿದರು.

ಬುಧವಾರದವರೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಸತ್ಯಾಗ್ರಹ ನಡೆಯಲಿದೆ. ಮೇ 29 ರಂದು ವಸತಿ ಶಾಲೆಯಲ್ಲಿ ಕಪ್ಪು ಪಟ್ಟಿ ಧರಿಸಿ ಕರ್ತವ್ಯ, 30ರಂದು ತರಗತಿ ಬಹಿಷ್ಕಾರ, 31ರಂದು ಪಾದಯಾತ್ರೆ ನಡೆಸಿ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸುವುದು, ಜೂನ್ 1ರಂದು ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸಲಾಗುವುದು ಎಂದು ಹೇಳಿದರು.

ಸಂಘದ ಅಧ್ಯಕ್ಷ ಪಿ.ಎನ್. ರವಿಚಂದ್ರ, ಉಪಾಧ್ಯಕ್ಷ ಎಸ್. ಗಿರೀಶ್, ಪ್ರಧಾನ ಕಾರ್ಯದರ್ಶಿ ಪಿ.ಕೆ. ನಟರಾಜ್ ಧರಣಿಯ ನೇತೃತ್ವ ವಹಿಸಿದ್ದರು.

ವಿಎಚ್‌ಪಿ, ಬಜರಂಗ ದಳ ವಿರುದ್ಧ ಎಫ್‌ಐಆರ್

ಮಂಗಳೂರು: ಹಿಂದುತ್ವವಾದಿ ಕಾರ್ಯಕರ್ತ, ರೌಡಿಶೀಟರ್ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಬೇಕು ಎಂದು ಆಗ್ರಹಿಸಿ ಬಜಪೆಯಲ್ಲಿ ಭಾನುವಾರ ಪೊಲೀಸ್ ಇಲಾಖೆಯಿಂದ ಅನುಮತಿ ಪಡೆಯದೆಯೇ 'ಬಜಪೆ ಚಲೋ' ಪ್ರತಿಭಟನೆ ನಡೆಸಿದ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮತ್ತು ಬಜರಂಗದಳದ ಮುಖಂಡರ ಹಾಗೂ ಇದರಲ್ಲಿ ಭಾಗವಹಿಸಿದವರ ಮೇಲೆ ಬಜಪೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಪ್ರತಿಭಟನೆಯಲ್ಲಿ ಭಾಷಣಕಾರರೊಬ್ಬರು ಸುಹಾಸ್ ಶೆಟ್ಟಿ ಹತ್ಯೆ ವಿಚಾರವನ್ನು ಪ್ರಸ್ತಾಪಿಸಿ, ಎರಡು ಧರ್ಮಗಳ ನಡುವೆ ದ್ವೇಷ ಹುಟ್ಟಿಸುವ ಮಾತುಗಳನ್ನಾಡಿದ್ದಾರೆ. ಈ ಮೂಲಕ ಸಾರ್ವಜನಿಕ ಶಾಂತಿ ಭಂಗಗೊಳಿಸಲು ಯತ್ನಿಸಿದ್ದಾರೆ' ಎಂದು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ.

'ಬಜಪೆ ಚಲೋ ಪ್ರತಿಭಟನೆ ಹಮ್ಮಿಕೊಳ್ಳುವುದಕ್ಕೆ ಪೊಲೀಸ್ ಇಲಾಖೆ ಅನುಮತಿ ನೀಡಿರಲಿಲ್ಲ. ಆದರೂ ಭಾನುವಾರ ಮಧ್ಯಾಹ್ನ 3ರಿಂದ 5ರ ನಡುವೆ ಬಜಪೆ ಬಸ್ ನಿಲ್ದಾಣದ ಬಳಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಈ ಪಟ್ಟಣವನ್ನು ಪ್ರವೇಶಿಸುವ ಹಾಗೂ ಅಲ್ಲಿಂದ ನಿರ್ಗಮಿಸುವ ಮಾರ್ಗಗಳನ್ನು ಸಂಪೂರ್ಣವಾಗಿ ಮುಚ್ಚುವ ಮೂಲಕ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟುಮಾಡಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 14ನೆಯ ಘಟಿಕೋತ್ಸವ

ಪುಟ್ಟರಾಜ, ಸಾಗರಗೆ 6 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ರಾಯಚೂರು: ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವದಲ್ಲಿ ರಾಯಚೂರಿನ ಕೃಷಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಪುಟ್ಟರಾಜ ಪೊಲೀಸ್ ಪಾಟೀಲ ಹಾಗೂ ಯಾದಗಿರಿ ಜಿಲ್ಲೆಯ ಭೀಮರಾಯನಗುಡಿಯ ಕೃಷಿ ಕಾಲೇಜಿನ ವಿದ್ಯಾರ್ಥಿ ಸಾಗರ ಅವರು ತಲಾ ಆರು ಚಿನ್ನದ ಪದಕ ಪಡೆದರು.

ರಾಯಚೂರಿನ ಕೃಷಿ ಕಾಲೇಜಿನ ಬಿ.ಎಸ್‌ಸಿ ವಿದ್ಯಾರ್ಥಿನಿ ಕೊಪ್ಪಳ ಜಿಲ್ಲೆಯ ಕುದುರೆಮೋತಿಯ ಗಾಯತ್ರಿ ನಾಲ್ಕು ಚಿನ್ನ ಬಾಚಿಕೊಂಡರು.

ಕೃಷಿ ಸ್ನಾತಕೋತ್ತರ ವಿಭಾಗದಲ್ಲಿ ಅಭಿಲಾಷ ಭರತೇಶ್ ಯಲಗುದ್ರಿ ಮೂರು ಚಿನ್ನದ ಪದಕ ಪಡೆದರು. ಪಿಎಚ್.ಡಿ ವಿಭಾಗದಲ್ಲಿ ಕೃಷಿ ಕೀಟಶಾಸ್ತ್ರದಲ್ಲಿ ಜಿ. ಶ್ಯಾಮ್ ಸುಪ್ರೀತ್ ಅವರು ಎರಡು ಚಿನ್ನದ ಪದಕ, ಫಾರ್ಮ್ ಮಷನರಿ ಹಾಗೂ ಪವರ್ ಎಂಜಿನಿಯರಿಂಗ್ ವಿಭಾಗದಲ್ಲಿ ಕಾವ್ಯಾ ಎರಡು ಚಿನ್ನದ ಪದಕ ಸ್ವೀಕರಿಸಿದರು.

ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ಉತ್ಕೃಷ್ಟ ಸಾಧನೆ ಮಾಡಿದ ಕೊಪ್ಪಳ ತಾಲ್ಲೂಕಿನ ಕುಷ್ಟಗಿಯ ಕೆ.ಗೋನಾಳ ಗ್ರಾಮದ ಪ್ರಗತಿಪರ ರೈತರ ದೇವೇಂದ್ರಪ್ಪ ಬಳೂಟಗಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

14ನೇ ಘಟಿಕೋತ್ಸವದಲ್ಲಿ 352 ವಿದ್ಯಾರ್ಥಿಗಳಿಗೆ ಸ್ನಾತಕ ಪದವಿ, 136 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ ಹಾಗೂ 39 ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಹವಾಮಾನ ವೈಪರೀತ್ಯದ ಕಾರಣ ಸೋಮವಾರ ಬಳ್ಳಾರಿಯ ಜಿಂದಾಲ್ ವಿಮಾನ ನಿಲ್ದಾಣದಿಂದ ಹೆಲಿ ಕಾಪ್ಟರ್‌ನಲ್ಲಿ ರಾಯಚೂರಿಗೆ ಬರಲು ಸಾಧ್ಯವಾಗದ ಕಾರಣ, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದರು.

ನವದೆಹಲಿಯ ವಿಶ್ವವಿದ್ಯಾಲಯಗಳ ಒಕ್ಕೂಟಕದ ಮಹಾ ಕಾರ್ಯದರ್ಶಿ ಪಂಕಜಾ ಮಿತ್ತಲ್ ಘಟಿಕೋತ್ಸವ ಭಾಷಣ ಮಾಡಿದರು. ವಿಶ್ವವಿದ್ಯಾಲಯದ ಸಹ ಕುಲಾಧಿಪತಿಯೂ ಆದ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಕುಲಪತಿ ಡಾ.ಎಂ.ಹನುಮಂತಪ್ಪ, ಕುಲಸಚಿವ ದುರ್ಗೇಶ, ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರು, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಉಪಸ್ಥಿತರಿದ್ದರು.

ಚಿಕ್ಕ ಹೋಟೆಲ್ ನಡೆಸುವ ಮಹಿಳೆ ಪುತ್ರಿಗೆ ನಾಲ್ಕು ಚಿನ್ನ

ಚಿಕ್ಕ ಹೋಟೆಲ್ ನಡೆಸುತ್ತಾ ಮಗಳನ್ನು ಓದಿಸಿದ್ದ ತಾಯಿಗೆ ಮಗಳು ನಾಲ್ಕು ಚಿನ್ನದ ಪದಕಗಳನ್ನು ಉಡುಗೊರೆಯಾಗಿ ನೀಡಿದ್ದಾರೆ.

ರಾಯಚೂರು ಕೃಷಿ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡ ಕೊಪ್ಪಳ ಜಿಲ್ಲೆಯ ಕುದರಿಮೋತಿ ಗ್ರಾಮದ ವಿದ್ಯಾರ್ಥಿನಿ ಗಾಯತ್ರಿ ಹೆಮ್ಮೆಯ ನಗೆ ಬೀರಿದರು.

'ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಿ ಜನರ ಸೇವೆಯಲ್ಲಿ ತೊಡಗಬೇಕು ಎನ್ನುವುದು ನನ್ನ ಕನಸಾಗಿದೆ. ನಮ್ಮ ತಂದೆ–ತಾಯಿಗೆ ಇಬ್ಬರು ಮಕ್ಕಳು. ತಂದೆ ತೀರಿಕೊಂಡಿದ್ದಾರೆ. ತಾಯಿ ಚಿಕ್ಕ ಹೋಟೆಲ್ ಇಟ್ಟುಕೊಂಡು ಕೆಲಸ ಮಾಡಿ ನನಗೆ ಶಿಕ್ಷಣ ಕೊಡಿಸಿದ್ದಾರೆ. ನನ್ನ ಕುಟುಂಬದಲ್ಲಿ ಪದವಿ ಪಡೆದಿದ್ದು ನಾನು ಒಬ್ಬಳೇ. ನನ್ನ ಬಹುತೇಕ ಶಿಕ್ಷಣ ಗಂಗಾವತಿಯಲ್ಲಿ ಮುಗಿದಿದೆ' ಎಂದು ಗಾಯತ್ರಿ ತಿಳಿಸಿದರು.

'ಬಡತನದಲ್ಲಿ ಬೆಳೆದ ನನಗೆ ಆರ್ಥಿಕ ಸಂಕಷ್ಟದ ಅರಿವಿದೆ. ಬಡ ಮಹಿಳೆಯರಿಗೂ ನೆರವಾಗಬೇಕು ಎನ್ನುವುದು ನನ್ನ ಆಶಯ. ಐಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುವ ಗುರಿ ಇಟ್ಟುಕೊಂಡಿರುವೆ. ಜೆಆರ್‌ಎಫ್ ಸ್ಕಾಲರ್‌ಶಿಪ್ ಬರುತ್ತಿರುವ ಕಾರಣ ಶಿಕ್ಷಣ ಮುಂದುವರಿಸಲು ಸಾಧ್ಯವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸುವೆ' ಎಂದು ತಿಳಿಸಿದರು.



ರಾಯಚೂರಿನ ಕೃಷಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಪುಟ್ಟರಾಜ ಪೊಲೀಸ್ ಪಾಟೀಲ, ಭೀಮರಾಯನಗುಡಿಯ ಕೃಷಿ ಕಾಲೇಜಿನ ವಿದ್ಯಾರ್ಥಿ ಸಾಗರ ತಲಾ ಆರು ಚಿನ್ನದ ಪದಕ ಹಾಗೂ ರಾಯಚೂರು ಕೃಷಿ ಕಾಲೇಜಿನ ಬಿ.ಎಸ್‌ಸಿ ವಿದ್ಯಾರ್ಥಿನಿ ಗಾಯತ್ರಿ 4 ಚಿನ್ನದ ಪದಕ ಪಡೆದರು

ಕ್ಷೇಮ ಕುಶಲ

ಆಟಿಸಂ ಸಮಸ್ಯೆಗೆ ಸಮಯವೇ ಮದ್ದು



ಡಾ. ಕುಶ್ವಂತ್ ಕೋಳಿಬೈಲು

ಕೆಲವು ರೋಗಗಳನ್ನು ಸುಲಭವಾಗಿ ಪತ್ತೆ ಹಚ್ಚಬಹುದು ಮತ್ತು ರೋಗ ಪತ್ತೆಯಾದ ಬಳಿಕ ಔಷಧಗಳಿಂದ ಬಹಳ ಸುಲಭವಾಗಿ ಗುಣಪಡಿಸಬಹುದು ಕೂಡ. ರೋಗಾಣುಗಳಿಂದ ಉಂಟಾಗುವ ಸಾಂಕ್ರಾಮಿಕ ರೋಗಗಳು ಈ ಪಟ್ಟಿಯಲ್ಲಿ ಬರುತ್ತವೆ. ನಿಗದಿತ ರಕ್ತಪರೀಕ್ಷೆಗಳಿಂದ ರೋಗದ ದೃಢೀಕರಣವಾದ ನಂತರ ಅವುಗಳನ್ನು ಕೆಲವೇ ಸಮಯದಲ್ಲಿ ಗುಣಪಡಿಸಲಾಗುತ್ತದೆ. ರಕ್ತದೊತ್ತಡ, ಮಧುಮೇಹ, ಕ್ಷಯ, ಏಡ್ಸ್ ಮುಂತಾದ ರೋಗಗಳನ್ನು ಪತ್ತೆ ಹಚ್ಚಿ ರೋಗದ ಇರುವಿಕೆಯನ್ನು ರುಜುವಾತು ಪಡಿಸಲು ಸಮಯ ಬೇಕಾಗುತ್ತದೆ ಮತ್ತು ಅವುಗಳನ್ನು ಸುಲಭವಾಗಿ ಗುಣಪಡಿಸಲಾಗುವುದಿಲ್ಲ. ಕೆಲವು ರೋಗಗಳನ್ನು ಪತ್ತೆ ಹಚ್ಚುವುದು ಬಹಳ ಕ್ಲಿಷ್ಟಕರವಾಗಿರುತ್ತದೆ ಮತ್ತು ಅವುಗಳ ಚಿಕಿತ್ಸೆ ಕೂಡ ಬಹಳ ಸವಾಲಿನದ್ದಾಗಿರುತ್ತದೆ. ಮಕ್ಕಳಲ್ಲಿ ಕಂಡುಬರುವ 'ಆಟಿಸಂ' ಈ ಗುಂಪಿಗೆ ಬರುತ್ತದೆ. ಭಾರತದಲ್ಲಿ ಪ್ರತಿ ಅರವತ್ತೈದು ಮಕ್ಕಳ ಪೈಕಿ ಒಂದು ಮಗುವಿನಲ್ಲಿ ಕಾಣಿಸಬಹುದಾದ ಆಟಿಸಂ ರೋಗವನ್ನು ಪತ್ತೆ ಹಚ್ಚುವಲ್ಲಿ ತಡವಾಗುವ ಕಾರಣ ಚಿಕಿತ್ಸೆಯಲ್ಲಿಯೂ ವಿಳಂಬವಾಗುತ್ತದೆ. ನಮ್ಮ ದೇಶದಲ್ಲಿ ಸುಮಾರು ಇಪ್ಪತ್ತು ಲಕ್ಷ ಮಕ್ಕಳು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ.

ಭಾಗ 1



ಬೆಳೆಯುವ ಮಗುವಿನ ದೈಹಿಕ ಬೆಳವಣಿಗೆಯಲ್ಲಿ ಕುಂಠಿತವಾಗಿ ಅದು ವಯಸ್ಸಿಗೆ ಸಮರ್ಪಕವಾದ ಎತ್ತರ, ದಪ್ಪವನ್ನು ಹೊಂದದಿದ್ದರೆ ಅದನ್ನು ಹೆತ್ತವರು ಮತ್ತು ವೈದ್ಯರು ಶೀಘ್ರವಾಗಿ ಪತ್ತೆಹಚ್ಚಬಲ್ಲರು. ಮಗುವು ಅಂಬೆಗಾಲಿಡಲು ಅಥವಾ ನಡೆಯಲು ತಡಮಾಡಿದರೂ ವೈದ್ಯರು ಅದನ್ನು ಗಮನಿಸಬಲ್ಲರು. ಮಗು ಮಾತನಾಡಲು ತಡಮಾಡಿದರೂ ಅದನ್ನು ಮನೆಯವರು ಗಮನಿಸಬಲ್ಲರು. ಆಟಿಸಂ ಕಾಯಿಲೆಯು ಮಗುವಿನ ಸಾಮಾಜಿಕ ಸಂವಹನ ಮತ್ತು ಸಂವಾದವನ್ನು ಪ್ರಭಾವಿಸುವುದರಿಂದ ಅದನ್ನು ಪತ್ತೆಹಚ್ಚಲು ತಡವಾಗುತ್ತದೆ. ಏಕೆಂದರೆ ವಯಸ್ಕರಲ್ಲಿಯೂ ಸಾಮಾಜಿಕ ಸಂವಹನ ಮತ್ತು ಸಂವಾದಕಲೆ ಒಬ್ಬೊಬ್ಬರಲ್ಲೂ ವಿಭಿನ್ನವಾಗಿರುತ್ತದೆ.

ನಾವು ಜನರ ಸಾಮಾಜಿಕ ಸಂವಹನ ಮತ್ತು ಸಂವಾದದಲ್ಲಿರುವ ವ್ಯತ್ಯಾಸಗಳಿಂದ ಜನರನ್ನು ಅಂತರ್ಮುಖಿಗಳು ಮತ್ತು ಬಹಿರ್ಮುಖಿಗಳೆಂದು ಅಳೆಯುತ್ತೇವೆ. ಮನುಷ್ಯ ತನ್ನ ಪರಿಸರದೊಡನೆ ವ್ಯವಹರಿಸುತ್ತ ಹೋದಂತೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾನೆ. ಬೆಳೆಯುತ್ತಿರುವ ಮಗು ಕೂಡ ತನ್ನ ಸಾಮಾಜಿಕ ಸಂವಹನ ಮತ್ತು ಸಂವಾದಕಲೆಯನ್ನು ತನ್ನದೇ ರೀತಿಯಲ್ಲಿ ರೂಪಿಸಿಕೊಳ್ಳುತ್ತಿರುತ್ತದೆ. ವೈದ್ಯರ ಬಳಿಗೆ ಮಗು ಬಂದಾಗ ವೈದ್ಯರು ಅಪರಿಚಿತರಾಗಿರುವ ಕಾರಣ ಮಗು ಹೆಚ್ಚು ತೆರೆದುಕೊಳ್ಳುವುದಿಲ್ಲ. ಒಂದು ಮಗು ಅದರ ನೈಸರ್ಗಿಕ ಪರಿಸರವಾದ ಮನೆಯಲ್ಲಿ ಒಡನಾಡುವಂತೆ ವೈದ್ಯರ ಬಳಿ ಒಡನಾಡದ ಕಾರಣ ಆಟಿಸಂ ಕಾಯಿಲೆಯನ್ನು ಪತ್ತೆಹಚ್ಚುವುದು ವೈದ್ಯರಿಗೂ ಸವಾಲಿನ ಕೆಲಸ. ಒಂದೇ ವಯಸ್ಸಿನ ಮಕ್ಕಳ ನಡವಳಿಕೆಗಳು ಕೂಡ ಅವರ ಮನಃಸ್ಥಿತಿಗೆ ಅನುಗುಣವಾಗಿ ವಿಭಿನ್ನವಾಗಿರುತ್ತದೆ. ಹೆಣ್ಣುಮಕ್ಕಳು ಸಂವಾದದ ಕಲೆಯಲ್ಲಿ ಗಂಡುಮಕ್ಕಳಿಗಿಂತ ಹೆಚ್ಚು ಚುರುಕಾಗಿರುತ್ತಾರೆ. ಅವಿಭಕ್ತ ಕುಟುಂಬದಲ್ಲಿ ಬೆಳೆಯುತ್ತಿರುವ ಮಕ್ಕಳು ಅಥವಾ ಪ್ಲೇಹೋಮ್ ಸೇರಿಕೊಂಡಿರುವ ಮಕ್ಕಳು ತಮ್ಮ ಸಾಮಾಜಿಕ ಸಂವಹನವನ್ನು ಹೆಚ್ಚು ಅಭಿವೃದ್ಧಿಪಡಿಸಿಕೊಂಡಿರುತ್ತಾರೆ.

ಆರೋಗ್ಯವಾಗಿ ಬೆಳೆಯುತ್ತಿರುವ ಮಗುವು ತನ್ನ ಸುತ್ತಮುತ್ತಲಿನ ಪರಿಸರವನ್ನು ಕುತೂಹಲದಿಂದ ಗಮನಿಸುತ್ತದೆ. ಶಬ್ದಗಳನ್ನು ಆಲಿಸುತ್ತದೆ ಮತ್ತು ಅದೇ ಶಬ್ದಗಳನ್ನು ಅನುಕರಿಸಲು ಪ್ರಯತ್ನಿಸುತ್ತದೆ. ಆಕಾಶದಲ್ಲಿ ಹಾರುತ್ತಿರುವ ಪಕ್ಷಿಯನ್ನು ನೋಡಿದರೆ ಅದರತ್ತ ಬೊಟ್ಟು ಮಾಡುತ್ತದೆ. ಆದರೆ ಆಟಿಸಂ ಸಮಸ್ಯೆಯಿಂದ ಬಳಲುವ ಮಕ್ಕಳು ಸುತ್ತಮುತ್ತಲಿನ ಪರಿಸರದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಬೇರೆ ಮಕ್ಕಳ ಜೊತೆಗೆ ಒಡನಾಡುವುದಿಲ್ಲ. ಹೆತ್ತವರ ಮಾತುಗಳಿಗೆ ಮತ್ತು ನಡವಳಿಕೆಗಳಿಗೆ ಸ್ಪಂದಿಸುವುದಿಲ್ಲ. ತಮ್ಮನ್ನು ಕಾಡುತ್ತಿರುವ ಒತ್ತಡಗಳಿಂದಾಗಿ ಇಂಥ ಮಕ್ಕಳು ಕೆಲವೊಮ್ಮೆ ವಿಚಿತ್ರವಾಗಿ ವರ್ತಿಸುತ್ತಾರೆ.

ಆಟಿಸಂ ಕಾಯಿಲೆಯ ಚಿಕಿತ್ಸೆ ಯಶಸ್ವಿಯಾಗಬೇಕಿದ್ದರೆ ಮಗುವಿನ ಸಮಸ್ಯೆಗಳನ್ನು ಚಿಕ್ಕ ವಯಸ್ಸಿನಲ್ಲಿ ಪತ್ತೆಹಚ್ಚಬೇಕಾದ್ದು ಅನಿವಾರ್ಯ. ಹೆತ್ತವರು ಮಗುವಿನ ಬೆಳವಣಿಗೆಯನ್ನು ಗಮನಿಸಿ ವೈದ್ಯರ ಬಳಿಗೆ ಕರೆತಂದರೆ, ಆಗ ಆಟಿಸಂ ಕಾಯಿಲೆಗೆ ಚಿಕಿತ್ಸೆಯನ್ನು ತಡಮಾಡದೆ ಶುರುಮಾಡಬಹುದು. ಕಾಯಿಲೆಯ ತೀವ್ರತೆಯ ಆಧಾರದ ಮೇಲೆ ಚಿಕಿತ್ಸೆಯು ಅವಲಂಬಿತವಾಗಿರುತ್ತದೆ.

ಮಗುವಿಗೆ ಆಟಿಸಂ ಕಾಯಿಲೆಯ ಪತ್ತೆಯಾದ ನಂತರ ಹೆತ್ತವರನ್ನು ಇಂತಹ ವಿಶೇಷ ಮಗುವಿನ ಜೊತೆಗೆ ಒಡನಾಡುವುದರ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡಬೇಕಾಗುತ್ತದೆ. ಮಗುವಿನ ಸೂಕ್ತ ಬೆಳವಣಿಗೆಗಾಗಿ ಹಲವರು ತಜ್ಞರ ಜೊತೆಗೆ ಹೆತ್ತವರು ಸಂವಹನ ನಡೆಸಿ ಚಿಕಿತ್ಸೆಯ ದಾರಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಸಂವಹನಚಿಕಿತ್ಸಕರು, ಫಿಸಿಯೋಥೆರಪಿಸ್ಟ್‌ಗಳು, ಮಕ್ಕಳತಜ್ಞರು ಸೇರಿಕೊಂಡು ಆಟಿಸಂ ಮಕ್ಕಳ ಜೊತೆಗೆ ಶ್ರಮಿಸಬೇಕಾಗುತ್ತದೆ. ಇಂತಹ ಸೌಲಭ್ಯಗಳು ನಗರಗಳಲ್ಲಿ ಮಾತ್ರ ದೊರಕುವುದರಿಂದ ಗ್ರಾಮೀಣ ಭಾಗದಲ್ಲಿರುವ ಆಟಿಸಂ ಮಕ್ಕಳಿಗೆ ಭಾರತದಲ್ಲಿ ಸೂಕ್ತ ಚಿಕಿತ್ಸೆ ದೊರಕುವುದು ಕಷ್ಟವಾಗುತ್ತದೆ. ❖



ಟೀಕೆ ಜೋಕೆ!

ರಘು ವಿ.

'ಟೀಕೆಗಳು ನಮಗೆ ಒಪ್ಪಿಗೆಯಾಗದಿರಬಹುದು. ಆದರೆ ಅವು ಬಹಳ ಅವಶ್ಯಕ. ಏಕೆಂದರೆ ದೇಹದಲ್ಲಿನ ನೋವು ಹೇಗೆ ದೇಹದ ಆರೋಗ್ಯ ರಕ್ಷಣೆಯತ್ತ ಗಮನವನ್ನು ಸೆಳೆಯುತ್ತದೋ ಹಾಗೆ ಟೀಕೆ ಅನಾರೋಗ್ಯಕಾರಿ ಅಂಶಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ' – ಎಂದು ಹೇಳಿದ್ದಾನೆ, ಚರ್ಚಿಲ್.

ಮಾನವಸಂಬಂಧದ ಸೂಕ್ಷ್ಮತೆಯಲ್ಲಿ ಸಂವಹನದ, ಅಂದರೆ ನಮ್ಮ ನಡುವಿನ ಮಾತುಕತೆಯ ಮೊನಚು ಸಂಬಂಧವನ್ನು ಕೆಡಿಸಿಬಿಡಬಲ್ಲದು. ಮಾತನಾಡುವ ಭರದಲ್ಲಿ ನಮ್ಮ ಅಭಿಪ್ರಾಯಗಳನ್ನು ತಿಳಿಸುವ ಆವೇಗದಲ್ಲಿ, ವಿಮರ್ಶೆ ಮಾಡುವ ನೆಪದಲ್ಲಿ ಕಟುವಾದ ಟೀಕೆಗಳನ್ನು ಮಾಡಿದಾಗ ಎದುರುಗಿನವರ ಮನಸ್ಸು ಮುರಿದುಬೀಳುತ್ತದೆ. ಪರಸ್ಪರ ವಿಚಾರವಿಮರ್ಶೆ ಮಾಡುವಾಗ ಸಮತೋಲನದಿಂದ ಮಾಡಬೇಕು. ನಾವೆಲ್ಲರೂ ನಮ್ಮ ಬದುಕಿನಲ್ಲಿ ಬಂದಿಲ್ಲೊಂದು ಹಂತದಲ್ಲಿ ಅಥವಾ ಸಂದರ್ಭದಲ್ಲಿ ಟೀಕೆಗಳನ್ನು ಎದುರಿಸಿಯೇ ಇರುತ್ತೇವೆ. ಟೀಕೆಗಳು ನಮಗೆ ಸಹಕಾರಿಯಾಗುತ್ತವೆ. ಅತಿಯಾದರೆ ಅಮೃತವೂ ವಿಷ – ಎಂಬಂತೆ ಹರಿತವಾದ ಟೀಕೆ ಬದುಕನ್ನೇ ಹಾಳುಗೆಡವಬಲ್ಲದು, ಸಂಸ್ಥೆಗಳನ್ನು ಮುಳುಗಿಸಬಲ್ಲದು. 'ಪರಸ್ಪರ ಟೀಕೆಯೆ ಎಲ್ಲ ಅವಘಡಕ್ಕೆ ಕಾರಣ. ಸಂಘಟನೆಗಳನ್ನು ಕೂಡ ಮುರಿದಿಕ್ಕಲು ಅದೇ ಮೂಲ' ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು.

ಅತಿಯಾದ ಟೀಕೆ ಎಂದರೇನು? ವ್ಯಕ್ತಿಯ ಪ್ರತಿಯೊಂದು ನಡೆಯಲ್ಲಿಯೂ ತಪ್ಪುಗಳನ್ನು ಕಂಡುಹಿಡಿದು ಅವರು ಮಾಡಿದ ಎಲ್ಲವನ್ನು ಸರಿಪಡಿಸುವ ಕ್ರಮ ಕೈಗೊಳ್ಳುವುದು ಮತ್ತು ಅನವಶ್ಯಕ ವಾಗ್ದಂಡನೆಯನ್ನು ನಡೆಸುವುದು. ಈ ಬಗೆಯ ಟೀಕೆಯಿಂದ ಉಂಟಾಗುವ ದುಷ್ಪರಿಣಾಮಗಳೆಂದರೆ: ಮೊದಲನೆಯದಾಗಿ, ಆತ್ಮವಿಶ್ವಾಸದ ನಾಶ; ವ್ಯಕ್ತಿಯ ಸ್ವಗೌರವವನ್ನು ಕುಗ್ಗಿಸಿ ಆತ್ಮವಿಶ್ವಾಸವನ್ನು ನಾಶಪಡಿಸುತ್ತದೆ. ಎರಡನೆಯದಾಗಿ, ಆತಂಕ ಮತ್ತು ಒತ್ತಡವನ್ನು ಉಂಟುಮಾಡುತ್ತದೆ; ಅತಿಯಾದ ಟೀಕೆಗಳು, ಕಟಕಿಗಳು ವ್ಯಕ್ತಿಯನ್ನು ಆತಂಕ ಮತ್ತು ಒತ್ತಡಕ್ಕೆ ಗುರಿಪಡಿಸಿ ಪ್ರತಿಯೊಂದು ಹೆಜ್ಜೆಯನ್ನು ಅವರು ಅತಿ ಎಚ್ಚರದಿಂದ ಇಡುವಂತಾಗುತ್ತದೆ. ಮೂರನೆಯದಾಗಿ, ಅವರು ಸೋಲಿನ ಭಯ ಹೊಂದುತ್ತಾರೆ; ಯಾವ ಕಾರ್ಯದಲ್ಲಿ ತೊಡಗಲೂ ಹಿಂಜರಿಯುತ್ತಾರೆ. ನಾಲ್ಕನೆಯದಾಗಿ, ಅತಿಯಾದ ಟೀಕೆಗೆ ಒಳಗಾದವರಲ್ಲಿ ರಕ್ಷಣಾತ್ಮಕ ಮನೋಭಾವ ಹೆಚ್ಚಿ ಅವರು ಯಾವುದೇ ಬಗೆಯ ವಿಮರ್ಶೆಯನ್ನು ತಮ್ಮ ಮೇಲಾಗುವ ಅಕ್ರಮಣದಂತೆ ಭಾವಿಸುವ ಹಂತಕ್ಕೆ ಮುಟ್ಟುತ್ತಾರೆ. ಇವೆಲ್ಲದರಿಂದ ಸಂಬಂಧಗಳು ಹಾಳಾಗುತ್ತವೆ. ಇಂತಹ ಟೀಕಾಕಾರರನ್ನು ಅವರು ದೂರ ಮಾಡುತ್ತಾರೆ. ಇದು ಟೀಕೆಯನ್ನು ಎದುರಿಸಿದವರ ಮೇಲಾಗುವ ಪರಿಣಾಮ.

ಆದರೆ ಈ ಬಗೆಯ ಟೀಕೆಯನ್ನು ಯಾರಾದರೂ ಏಕಾದರೂ ಮಾಡುತ್ತಾರೆ ಎಂಬುದನ್ನೂ ಗಮನಿಸಿದಾಗ ಈ ಕೆಳಗಿನ ಕಾರಣಗಳನ್ನು ಪಟ್ಟಿ ಮಾಡಬಹುದು. ಅಂತಃಕರಣದ ಕೊರತೆ ಮತ್ತು ಭಯ ಈ ಬಗೆಯ ನಡವಳಿಕೆಗೆ ಕಾರಣ. ತಾವೇ ಅಭದ್ರತೆಯಂತೆ ತೊಳಲುತ್ತಿರುವುದರಿಂದ ಬೇರೆಯವರನ್ನು ಟೀಕಿಸಿ ತಾವು ಅವರಿಗಿಂತ ಹೆಚ್ಚಿನವರೆಂದು ತೋರಿಸಿಕೊಳ್ಳುವುದು ಇಂತಹವರ ಸ್ವಭಾವ. ಜೊತೆಗೆ ಬೇರೆಯವರ ಬಗ್ಗೆ ತಮ್ಮ ಮಾತುಗಳು ಎಷ್ಟರ ಮಟ್ಟಿಗೆ ಹಾನಿಕಾರಕವೆಂದು ಅವರು ಊಹಿಸಿಕೊಳ್ಳಲಾರರು. ಇತರರು ತಮ್ಮನ್ನು ಟೀಕಿಸುವ ಮೊದಲೇ ತಾವೇ ಅವರನ್ನು ಟೀಕಿಸಿ ಆ ಭಯದಿಂದ ಮುಕ್ತರಾಗುವುದು ಇಂಥವರ ಉದ್ದೇಶ.

ಹಾಗಾದರೆ ಅತಿಯಾದ ಟೀಕೆಯಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳುವುದು ಹೇಗೆ ಎಂಬುದನ್ನು ಗಮನಿಸೋಣ. ಮೊದಲನೆಯದಾಗಿ, ಶಾಂತಿಯಿಂದ ಇರುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ತಕ್ಷಣದ ಪ್ರತಿಕ್ರಿಯೆ ನೀಡದೆ ಒಂದು ದೀರ್ಘ ಉಸಿರನ್ನು ಎಳೆದುಕೊಂಡು ಪ್ರತಿಕ್ರಿಯೆಗೆ ಮುನ್ನ ಆಳವಾಗಿ ಆಲೋಚಿಸಬೇಕು. ಎರಡನೆಯದಾಗಿ, ನಮ್ಮನ್ನು ಟೀಕಿಸುವವರ ಮಾತಿನಿಂದ ನಮಗಾಗುತ್ತಿರುವ ತೊಂದರೆಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟು ವೈಯಕ್ತಿಕ ನಿಂದನೆಯನ್ನು ಕೈಬಿಡುವಂತೆ ಸೂಚಿಸಬೇಕು. ನಮ್ಮ ಬಗ್ಗೆ ನಾವೇ ಅರಿವಿನ ಆರೈಕೆ ಮಾಡಿಕೊಂಡು ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳಬೇಕು. ಯಾವ ಚಟುವಟಿಕೆಯಿಂದ ನಮ್ಮ ಬಗ್ಗೆ ನಮಗೆ ಒಳ್ಳೆ ಅಭಿಪ್ರಾಯ ಮತ್ತು ವಿಶ್ವಾಸ ಮೂಡುತ್ತದೊ ಅಂತಹ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು. ಕೊನೆಯದಾಗಿ, ಸ್ನೇಹಿತರೊಂದಿಗೆ ಮಾತನಾಡಿ ನಮ್ಮ ನೋವನ್ನು ಅವರೊಂದಿಗೆ ಹಂಚಿಕೊಂಡು ಬೇಕಾದ ಒತ್ತಾಸೆ ಮತ್ತು ಸಲಹೆಯನ್ನು ಪಡೆದುಕೊಳ್ಳಬೇಕು.

ಮಾತನಾಡುವ ಮುನ್ನ ಮಾತಿನ ಹಿಂದಿರುವ ಆವೇಗವನ್ನು ಗುರುತಿಸಿಕೊಳ್ಳುವುದು, ಅಂದರೆ ಅನವಶ್ಯಕವಾಗಿ ದನಿ ಎತ್ತರಿಸುವುದಾಗಲೀ ಅಥವಾ ಕಟುಪದಗಳನ್ನು ಪ್ರಯೋಗಿಸುವುದಾಗಲಿ ಮಾಡಬಾರದು. ರೂಮಿ, 'ಪದಗಳನ್ನು ಎತ್ತರಿಸು, ನಿನ್ನ ದನಿಯನ್ನಲ್ಲ. ಹೂವುಗಳನ್ನು ಅರಳಿಸುವುದು ಮಳೆಯೇ ಹೊರತು ಗುಡುಗಲ್ಲ' ಎಂದು ಹೇಳಿದ್ದಾನೆ. ಸಕಾರಾತ್ಮಕ ಟೀಕೆಯಿಂದ ಅಥವಾ ಸಮತೋಲನದ ವಿಮರ್ಶೆಯಿಂದ ನಾವು ಆರೋಗ್ಯಕರ ಮತ್ತು ಪ್ರೋತ್ಸಾಹದಾಯಕ ವಾತಾವರಣವನ್ನು ಸೃಷ್ಟಿಸಿಕೊಳ್ಳಬಹುದು. ಇಷ್ಟೆಲ್ಲ ವಿಚಾರಗಳು ತಿಳಿದಿದ್ದರೂ ಟೀಕೆಯ ಎದುರು ನಾವು ಕೆಲವೊಮ್ಮೆ ಅಸಹಾಯಕತೆಯನ್ನು ಅನುಭವಿಸುವ ಪ್ರಸಂಗ ಬಂದಾಗ ಕಗ್ಗದ ಈ ಪದ್ಯವನ್ನು ನೆನಪು ಮಾಡಿಕೊಳ್ಳಬೇಕು: 'ಕಳವಳವ ನೀಗಿಬಿಡು; ತಳಮಳವ ದೂರವಿಡು, ಕಳೆ; ತಳ್ಳು ಗಲಭೆ ಗಾಬರಿಯ ಮನದಿಂದ, ಅಲೆದಾಡುತಿರೆ ದೀಪ ಕಣ್ಗೆ ಗುರಿ ತಪ್ಪುವುದು, ತಿಳಿತಿಳಿವು ಶಾಂತಿಯಲಿ – ಮಂಕುತಿಮ್ಮ.'

ವಿಚಲಿತರಾಗದೆ ನಮ್ಮ ತಪ್ಪುಗಳನ್ನು ತಿದ್ದಿಕೊಂಡು, ವಿಮರ್ಶೆ ಸರಿ ಇದ್ದರೆ ಅದನ್ನು ಪಾಲಿಸಿ ಜೀವನದಲ್ಲಿ ಮುಂದಡಿ ಇಡುತ್ತ ಮತ್ತೊಬ್ಬರ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ಬಹಳ ಸೌಜನ್ಯದಿಂದ ತಿಳಿಸುತ್ತ ಮುಂದುವರಿಯುವುದೇ ಸಹಬಾಳ್ವೆಯ ಸೂತ್ರ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಬಹುಪದೋಕ್ತಿಗಳು

ಅಭ್ಯಾಸ 2.2

(v) -1/4, 1/4

ಪರಿಹಾರ:– ಶೂನ್ಯತೆಗಳ ಮೊತ್ತ $= \alpha + \beta = -1/4$

ಶೂನ್ಯತೆಗಳ ಗುಣಲಬ್ಧ $= \alpha\beta = ¼$

∴ α ಮತ್ತು β ಗಳು P(x) ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ P(x)ಅನ್ನು ಹೀಗೆ ಬರೆಯಬಹುದು

ಶೂನ್ಯತೆಗಳ ಮೊತ್ತ $= \alpha+\beta = -1/4$

ಶೂನ್ಯತೆಗಳ ಗುಣಲಬ್ಧ $= \alpha\beta = ¼$

∴ α ಮತ್ತು βಗಳು P(x) ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ P(x)ಅನ್ನು ಹೀಗೆ ಬರೆಯಬಹುದು

$$x^2-(\alpha+\beta)x+\alpha\beta = 0$$
$$x^2-(-1/4)x+(1/4) = 0$$
$$4x^2+x+1 = 0$$

ಹೀಗಾಗಿ, $4x^2+x+1$ ಇದು ವರ್ಗ ಬಹುಪದೋಕ್ತಿಯಾಗಿದೆ .

(vi) 4, 1

ಪರಿಹಾರ:–

ಶೂನ್ಯತೆಗಳ ಮೊತ್ತ $= \alpha+\beta = 4$

ಶೂನ್ಯತೆಗಳ ಗುಣಲಬ್ಧ $= \alpha\beta = 1$

∴ α ಮತ್ತು βಗಳು P(x) ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ P(x)ಅನ್ನು ಹೀಗೆ ಬರೆಯಬಹುದು

$$x^2-(\alpha+\beta)x+\alpha\beta = 0$$
$$x^2-4x+1 = 0$$

ಹೀಗಾಗಿ x^2-4x+1 ಇದು ವರ್ಗ ಬಹುಪದೋಕ್ತಿಯಾಗಿದೆ

****

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಒಂದು ಚರಾಕ್ಷರವಿರುವ ರೇಖಾತ್ಮಕ ಸಮೀಕರಣ :–

ಕೇವಲ ಒಂದೇ ಒಂದು ಚರಾಕ್ಷರವಿರುವ ಸಮೀಕರಣವನ್ನು ಒಂದು ಚರಾಕ್ಷರವಿರುವ ರೇಖಾತ್ಮಕ ಸಮೀಕರಣ ಎನ್ನುತ್ತಾರೆ, ಅಂದರೆ ಅವುಗಳಲ್ಲಿನ ಚರಾಕ್ಷರದ ಅತ್ಯಂತ ಹೆಚ್ಚಿನ ಘಾತ 1 ಆಗಿರುವುದು ಇದು **ax + b = 0** ಎಂಬ ರೂಪದಲ್ಲಿರುತ್ತದೆ, ಇಲ್ಲಿ **a** ಮತ್ತು **b** ವಾಸ್ತವ ಸಂಖ್ಯೆಗಳು ಮತ್ತು **a # 0.**

ಉದಾ:– **3x = 6; 4x + 10 = 0**

ಒಂದು ಚರಾಕ್ಷರವಿರುವ ರೇಖಾತ್ಮಕ ಸಮೀಕರಣ :–

$ax + by + c = 0$ ರೂಪದಲ್ಲಿ ಬರೆಯಬಹುದಾದ *a, b* ಮತ್ತು *C* ವಾಸ್ತವ ಸಂಖ್ಯೆಗಳಾಗಿರುವ *a* ಮತ್ತು *b* ಎರಡೂ ಸೊನ್ನೆ ಅಲ್ಲದಿರುವ ಯಾವುದೇ ಸಮೀಕರಣವನ್ನು ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣ ಎನ್ನುತ್ತೇವೆ,

x ಮತ್ತು *y*ಎಂಬ ಎರಡು (ಗೊತ್ತಿಲ್ಲದ) ಚರಾಕ್ಷರಗಳಿರುವ ಒಂದು ರೇಖಾತ್ಮಕ ಸಮೀಕರಣವು ಸಾಮಾನ್ಯವಾಗಿ ಕೆಳಗಿನ ರೂಪದಲ್ಲಿ ಪ್ರತಿನಿಧಿಸಲಾಗುತ್ತದೆ.

1) $ax + by + c = 0$ $a \neq 0, b \neq 0$; a, b ಮತ್ತು c ವಾಸ್ತವ ಸ್ಥಿರಾಂಕಗಾಳಾಗಿವೆ

ii) $ax + by - d$; $a \neq 0, b \neq 0$, a, b ಮತ್ತು d ವಾಸ್ತವ ಸ್ಥಿರಾಂಕಗಾಳಾಗಿವೆ

ಉದಾ:– $4x - y + 8 = 0$ ಮತ್ತು $9x + y = 4$ ಎರಡು ಚರಾಕ್ಷರ *x* ಮತ್ತು **y** ಇರುವ ರೇಖಾತ್ಮಕ ಸಮೀಕರಣಗಳಾಗಿವೆ

ಗಮನಿಸಿ:–

(*) ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣವು ಅಪರಿಮಿತ ಪರಿಹಾರಗಳನ್ನು ಹೊಂದಿರುತ್ತದೆ.

(*) ಎರಡು ಚರಾಕ್ಷರಗಳಿರುವ ಪ್ರತಿಯೊಂದು ರೇಖಾತ್ಮಕ ಸಮೀಕರಣದ ನಕ್ಷೆಯು ಸರಳರೇಖೆಯಾಗಿದೆ.

(*) ಎರಡು ಚರಾಕ್ಷರಗಳಿರುವ ಒಂದು ರೇಖಾತ್ಮಕ ಸಮೀಕರಣ $ax+by+c=0$ಯ ಪ್ರತಿಯೊಂದು ಪರಿಹಾರ (*x*, *y*)ಯ ಸಮೀಕರಣವನ್ನು ಪ್ರತಿನಿಧಿಸುವ ರೇಖೆಯ ಮೇಲಿನ ಒಂದು ಬಿಂದುವಿಗೆ ಅನುರೂಪವಾಗಿದೆ ಮತ್ತು ಇದರ ವಿಲೋಮವು ಸರಿಯಾಗಿದೆ (*Vice Versa*)

(*) ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣದ ನಕ್ಷೆಯ ಮೇಲಿನ ಪ್ರತಿಯೊಂದು ಬಿಂದುವು ರೇಖಾತ್ಮಕ ಸಮೀಕರಣಕ್ಕೆ ಪರಿಹಾರವಾಗಿದೆ. ಹಾಗೆಯೇ ರೇಖಾತ್ಮಕ ಸಮೀಕರಣದ ಪ್ರತಿಯೊಂದು ಪರಿಹಾರವು ಅದರ ರೇಖಾತ್ಮಕ ಸಮೀಕರಣದ ನಕ್ಷೆಯ ಮೇಲಿನ ಒಂದು ಬಿಂದುವಾಗಿದೆ.

(*) ಪರಿಹಾರ ಇಲ್ಲದೇ ಇರುವ ಒಂದು ಜೊತೆ ರೇಖಾತ್ಮಕ ಸಮೀಕರಣಗಳನ್ನು ರೇಖಾತ್ಮಕ ಸಮೀಕರಣಗಳ ಅಸ್ಥಿರ ಜೋಡಿ ಎನ್ನುತ್ತೇವೆ, ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳು ಒಂದು ಪರಿಹಾರವನ್ನು ಹೊಂದಿದ್ದರೆ. ಅವುಗಳನ್ನು ರೇಖಾತ್ಮಕ ಸಮೀಕರಣಗಳ ಜೋಡಿ ಎನ್ನುತ್ತಾರೆ. ಒಂದು ಜೊತೆ ರೇಖಾತ್ಮಕ ಸಮೀಕರಣಗಳು ಸಮಾವಾಗಿದ್ದರೆ. ಅವುಗಳಿಗೆ ಅಪರಿಮಿತ ಸಂಖ್ಯೆಯ ವಿಭಿನ್ನ ಸಾಮಾನ್ಯ ಪರಿಹಾರಗಳಿರುತ್ತವೆ, ಇಂತಹ ಜೋಡಿಯ ಎರಡು ಚರಾಕ್ಷಗಳಿರುವ ರೇಖಾತ್ಮಕ ಸಮೀಕರಣಗಳ ಅವಲಂಬಿತ ಜೋಡಿ ಎನ್ನುತ್ತೇವೆ. ರೇಖಾತ್ಮಕ ಸಮೀಕರಣ ಅವಲಂಬಿತ ಜೋಡಿಯು ಯಾವಾಗಲೂ ಸ್ಥಿರವಾಗಿರುತ್ತದೆ.

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ಒಟ್ಟಿಗೆ ತೆಗೆದುಕೊಂಡು ಎರಡು ಸರಳ ರೇಖೆಗಳ ಮೂಲಕ ಪ್ರತಿನಿಧಿಸಲಾಗುವುದು.

* ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳನ್ನು ಪ್ರತಿನಿಧಿಸುವ ರೇಖೆಗಳ ವರ್ತನೆ ಮತ್ತು ಪರಿಹಾರಗಳ ಇರುವಿಕೆಯನ್ನು ಈ ಮುಂದಿನಂತೆ ಸಾರಾಂಶೀಕರಿಸಬಹುದು

1) ಎರಡು ಸರಳರೇಖೆಗಳು ಒಂದು ಬಿಂದುವಿನಲ್ಲಿ ಛೇದಿಸಬಹುದು, ಇಂತಹ ಪ್ರಕರಣದಲ್ಲಿ ಸಮೀಕರಣಗಳ ಜೋಡಿಗೆ ಅನನ್ಯ ಪರಿಹಾರವಿರುತ್ತದೆ (ಸಮೀಕರಣಗಳ ಸ್ಥಿರ ಜೋಡಿ)

2) ರೇಖೆಗಳು ಸಮಾಂತರವಾಗಿರಬಹುದು ಇಂತಹ ಪ್ರಕರಣದಲ್ಲಿ ಸಮೀಕರಣಗಳಿಗೆ ಪರಿಹಾರವಿಲ್ಲ (ಸಮೀಕರಣಗಳ ಸ್ಥಿರ ಜೋಡಿ)

3) ರೇಖೆಗಳು ಐಕ್ಯಗೊಳ್ಳಬಹುದು ಇಂತಹ ಪ್ರಕರಣದಲ್ಲಿ ಸಮೀಕರಣಗಳಿಗೆ ಅಪರಿಮಿತ ಸಂಖೆಯ ಪರಿಹಾರಗಳಿರುತ್ತವೆ.

(ಸಮೀಕರಣಗಳ ಅವಲಂಬಿತ (ಸ್ಥಿರ) ಜೋಡಿ)

ಸಮಸ್ಯೆ ಮತ್ತು ಪರಿಹಾರ

$$x + 3y = 6 \qquad (1)$$

ಮತ್ತು
$$2x - 3y = 12 \qquad (2)$$

ಈ ಸಮೀಕರಣಗಳು ಸ್ಥಿರವೇ ಎಂಬುದನ್ನು ನಕ್ಷೆಯ ಮೂಲಕ ಪರೀಕ್ಷಿಸಿ, ಹೌದು ಎನ್ನುವುದಾದರೆ ನಕ್ಷಾ ಕ್ರಮದಿಂದ ಬಿಡಿಸಿ.

ಪರಿಹಾರ:– ಸಮೀಕರಣ (1) ಮತ್ತು 2ರ ನಕ್ಷೆ ರಚಿಸಲು ಕೆಳಗಿನ ಕೋಷ್ಟಕದಲ್ಲಿರುವಂತೆ ಎರಡೆರಡು ಪರಿಹಾರವನ್ನು ಕಂಡು ಹಿಡಿದುಕೊಳ್ಳಬೇಕು *(ಮುಂದುವರಿಯುವುದು)*

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC- MATHS

DETERMINANTS

2. To find the value of the determinant of a second order matrix

Soln :– Consider a matrix $A=\begin{pmatrix} x_1 & y_1 \\ x_2 & y_2 \end{pmatrix}$

whose order is 2 x 2.

Then $|A| = \begin{vmatrix} x_1 & y_1 \\ x_2 & y_2 \end{vmatrix} = x_1y_2 - x_2y_1$

3. If $A=\begin{bmatrix} a & 0 & 0 \\ 0 & b & 0 \\ 0 & 0 & c \end{bmatrix}$ and if $|A| \neq 0$; what is the value of A^{-1}?

Soln :– Given that, $A=\begin{bmatrix} a & 0 & 0 \\ 0 & b & 0 \\ 0 & 0 & c \end{bmatrix}$

and $|A| \neq 0$; then the value of

$$A^{-1} = \begin{bmatrix} 1/a & 0 & 0 \\ 0 & 1/b & 0 \\ 0 & 0 & 1/c \end{bmatrix}$$

4. How do you find the value of the determinant of a third order matrix?

Soln :– Consider matrix $A=\begin{pmatrix} x_1 & y_1 & z_1 \\ x_2 & y_2 & z_2 \\ x_3 & y_3 & z_3 \end{pmatrix}$

whose order is 3 x 3.

Then $|A| = \begin{vmatrix} x_1 & y_1 & z_1 \\ x_2 & y_2 & z_2 \\ x_3 & y_3 & z_3 \end{vmatrix}$

$$= x_1\begin{vmatrix} y_2 & z_2 \\ y_3 & z_3 \end{vmatrix} - y_1\begin{vmatrix} x_2 & z_2 \\ x_3 & z_3 \end{vmatrix} + z_1\begin{vmatrix} x_2 & y_2 \\ x_3 & y_3 \end{vmatrix}$$
$$= x_1(y_2z_3 - y_3z_2) - y_1(x_2z_3 - x_3z_2) + z_1(x_2y_3 - x_3y_2)$$

5. Show that if in a determinant all the elements of any row or column are zeros then the value of the determinant is zero.

Soln :– To show that – If in a determinant all the elements of any row (or column) are zeros then the value of the determinant is zero.

Proof :– Let $\Delta = \begin{bmatrix} 0 & 0 & 0 \\ b_1 & b_2 & b_3 \\ c_1 & c_2 & c_3 \end{bmatrix}$

$$\Delta = 0(b_2c_3 - c_2b_3) - 0(b_1c_3 - b_3c_1) + 0(b_1c_2 - b_2c_1)$$
$= 0$, hence proved.

6. Show that if all the elements on one side of the principal diagonal of a determinant are zeros, then the value of the determinant is the product of the elements of the principal diagonal.

Soln :– To show that – If all the elements on one side of the principal diagonal of a determinant are zeros, then the value of the determinant is the product of the elements of the principal diagonal.

Proof :– Let $\Delta = \begin{bmatrix} a_1 & a_2 & a_3 \\ 0 & b_2 & b_3 \\ 0 & 0 & c_3 \end{bmatrix}$

$$\Delta = a_1(b_2c_3 - 0.b_3) - a_2(0.c_3 - b_3.0) + a_3(0 - b_20)$$
$$= a_1 b_2 c_3$$
= product of the elements on the principal diagonal.

7. Prove that $\begin{bmatrix} a & b & c \\ b & c & a \\ c & a & b \end{bmatrix} = -(a^3+b^3+c^3-3abc)$

Soln :– Consider $\begin{bmatrix} a & b & c \\ b & c & a \\ c & a & b \end{bmatrix}$

$$\Delta = a(bc-a^2) - b(b^2-ca) + c(ab-c^2)$$
$$= abc - a^3 - b^3 + abc + abc - c^3$$
$= -(a^3+b^3+c^3-3abc)$ hence proved.

8. Solve for x, $\begin{vmatrix} 2 & 3 & 4 \\ -4 & x & -8 \\ 5 & 6 & 7 \end{vmatrix} = 0$

Soln :– Consider Δ of $\begin{vmatrix} 2 & 3 & 4 \\ -4 & x & -8 \\ 5 & 6 & 7 \end{vmatrix}$

$$\Rightarrow 2(7x+48) - 3(-28+40) + 4(-24-5x) = 0$$
$$\Rightarrow 14x + 96 - 36 - 96 - 20x = 0$$
$$\Rightarrow -6x - 36 = 0$$
$$-6x = 36$$
$$x = \frac{36}{-6} = -6$$

9. Write a brief note on the multiplication of the determinants.

Ans :– The multiplication of determinants is as that of multiplication of matrices itself.

Eg :– $\begin{vmatrix} a_1 & b_1 \\ a_2 & b_2 \end{vmatrix} \times \begin{vmatrix} \alpha_1 & \beta_1 \\ \alpha_2 & \beta_2 \end{vmatrix}$

$$= \begin{vmatrix} a_1\alpha_1 + b_1\alpha_2 & a_1\beta_1 + b_1\beta_2 \\ a_2\alpha_1 + b_2\alpha_2 & a_2\beta_1 + b_2\beta_2 \end{vmatrix}$$

(row – column multiplication)

It is also equal to $\begin{vmatrix} a_1\alpha_1 + b_1\beta_1 & a_2\alpha_2 + b_1\beta_2 \\ a_2\alpha_1 + b_2\beta_1 & a_2\alpha_2 + b_2\beta_2 \end{vmatrix}$

(row – row multiplication)

(Contd..........)

ಮಣಿಪುರ: ರ್‍ಯಾಲಿಗೆ ಭದ್ರತಾ ಪಡೆಗಳ ತಡೆ

ಇಂಫಾಲ್ (ಪಿಟಿಐ): ಸರ್ಕಾರಿ ಬಸ್‌ನಿಂದ ರಾಜ್ಯದ ಹೆಸರು ತೆಗೆದು ಹಾಕಿದ್ದು ವಿರೋಧಿಸಿ ವಿದ್ಯಾರ್ಥಿಗಳು ಮತ್ತು ಮಹಿಳೆಯರು ಆಯೋಜಿಸಿದ್ದ ರ್‍ಯಾಲಿಯನ್ನು ರಾಜ್ಯಪಾಲರು ಮಣಿಪುರಕ್ಕೆ ಆಗಮಿಸಿದ ಕಾರಣ ಭದ್ರತಾ ಸಿಬ್ಬಂದಿ ತಡೆದರು. ಈ ವೇಳೆ ಅಶ್ರುವಾಯು ಪ್ರಯೋಗ ನಡೆಯಿತು.

ಕ್ವಾಕೆತೆಲ್‌ನಲ್ಲಿ ಜಮಾಯಿಸಿದ್ದ ಪ್ರತಿಭಟನಕಾರರು ರಾಜಭವನದ-ವರೆಗೆ 3 ಕಿ.ಮೀ. ರ್‍ಯಾಲಿ ನಡೆಸಲು ನಿರ್ಧರಿಸಿದ್ದರು. ಆದರೆ, ಅವರು ಅಲ್ಲಿಂದ ಮುಂದುವರಿಯುವಂತೆ ತಡೆಯಲಾಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ವಿದ್ಯಾರ್ಥಿಗಳು ಮತ್ತು ಮಹಿಳೆಯರ ಗುಂಪು ರಾಜಭವನದಿಂದ 200 ಮೀಟರ್ ದೂರದಲ್ಲಿರುವ ಇಂಫಾಲ್ ವಿಮಾನನಿಲ್ದಾಣದಿಂದ ಕೈಸಂಪತ್‌ವರೆಗೆ 6 ಕಿ.ಮೀ ಉದ್ದದ ಮಾನವ ಸರಪಳಿಯನ್ನು ರಚಿಸಿದ್ದರು' ಎಂದು ತಿಳಿಸಿದ್ದಾರೆ.

ಮಣಿಪುರದ ಗುರುತನ್ನು ಅಳಿಸುವವರು ಮತ್ತು ರಾಜ್ಯಪಾಲರು ಜನರ ಬಳಿ ಕ್ಷಮೆಯಾಚಿಸಬೇಕೆಂದು ಬರೆದಿರುವ ಫಲಕಗಳನ್ನು ಪ್ರತಿಭಟನಕಾರರು ಪ್ರದರ್ಶಿಸಿದರು.

ಕ್ವಾಕೆತೆಲ್‌ನಲ್ಲಿ ಪ್ರತಿಭಟನಕಾರರು ರಾಜ್ಯಪಾಲರ ಪ್ರತಿಕೃತಿಯನ್ನು ದಹಿಸಲು ಯತ್ನಿಸಿದರು. ಈ ವೇಳೆ ಭದ್ರತಾ ಸಿಬ್ಬಂದಿ ಮತ್ತು ಪ್ರತಿಭಟನಾಕಾರರ ನಡುವೆ ಘರ್ಷಣೆ ನಡೆಯಿತು.

ಮಣಿಪುರ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರು ಸೋಮವಾರ ದೆಹಲಿಯಿಂದ ಮಣಿಪುರಕ್ಕೆ ಆಗಮಿಸಿದರು. ರಾಜ್ಯದಲ್ಲಿ ಪ್ರತಿಭಟನೆ ನಡೆಯುತ್ತಿರುವುದರಿಂದ ಅವರನ್ನು ವಿಮಾನ ನಿಲ್ದಾಣದಿಂದ ರಾಜಭವನಕ್ಕೆ ಹೆಲಿಕಾಪ್ಟರ್ ಮೂಲಕ ಕರೆತರಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಮಗು ಸಾವು; ಶವವಿಟ್ಟು ಪ್ರತಿಭಟನೆ

ಒಂದನೇ ಪುಟದಿಂದ...

ಸಾರ್ವಜನಿಕರ ಪ್ರತಿಭಟನೆ: 'ಘಟನೆಗೆ ಸಂಚಾರ ಪೊಲೀಸರೇ ಕಾರಣ' ಎಂದು ಆರೋಪಿಸಿ, ಪೋಷಕರು ಮತ್ತು ಸಾರ್ವಜನಿಕರು ಮಿಮ್ಸ್ ಆಸ್ಪತ್ರೆ ಎದುರು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಮೃತದೇಹದೊಂದಿಗೆ ಪ್ರತಿಭಟನೆ ನಡೆಸಿದರು. ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಮೃತದೇಹ ಒಪ್ಪಿಸಲಾಯಿತು. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಗು ಸಾವಿಗೆ ಸಂಬಂಧಿಸಿ ಸ್ವಯಂಪ್ರೇರಿತ ದೂರು ದಾಖಲಿಸಿದೆ. ಪೊಲೀಸರು ತಪಾಸಣೆ ಮಾಡುವಾಗ ವಾಹನ ಸವಾರರ ಹಿತರಕ್ಷಣೆ ಬಗ್ಗೆ ಗಮನ ಹರಿಸಬೇಕು
ಶಿವಲಿಂಗಸ್ವಾಮಿ ಕೆ.ಟಿ., ಸದಸ್ಯ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ವಾಹನ ಸವಾರರಿಗೆ ಭಯ ಹುಟ್ಟಿಸುವಂತೆ ತಪಾಸಣೆ ಮಾಡುವುದನ್ನು ವಿರೋಧಿಸಿ ಸ್ವಲ್ಪ ಎಚ್ಚರ ವಹಿಸಿದ್ದರೆ ಮಗು ಉಳಿಯುತ್ತಿತ್ತು
ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ



ಬೆಂಗಳೂರು–ಮೈಸೂರು ಹೆದ್ದಾರಿ ಬಳಿ ಮೃತ ಮಗುವಿನೊಂದಿಗೆ ಕುಟುಂಬಸ್ಥರು, ವಿವಿಧ ಸಂಘಟನೆ ಮುಖಂಡರು ಪ್ರತಿಭಟನೆ ನಡೆಸಿದರು

ನಕ್ಸಲ್ ಮನೀಶ್ ಯಾದವ್ ಹತ

ಲಾತೇಹಾರ್ (ಜಾರ್ಖಂಡ್) (ಪಿಟಿಐ): ಭದ್ರತಾ ಪಡೆಗಳು–ನಕ್ಸಲರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ನಕ್ಸಲ್ ಮನೀಶ್ ಯಾದವ್ ಮೃತಪಟ್ಟಿದ್ದಾರೆ. 'ಆತನ ತಲೆಗೆ ₹5 ಲಕ್ಷ ಬಹುಮಾನ ಘೋಷಿಸಲಾಗಿತ್ತು, ಕಾರ್ಯಾಚರಣೆ ವೇಳೆ ಮತ್ತೊಬ್ಬ ನಕ್ಸಲ್‌ನನ್ನು ಬಂಧಿಸಲಾಗಿದೆ.

'ಭಾನುವಾರ ರಾತ್ರಿ ಮಹುಆಡಾಂಡ್ ಪೊಲೀಸ್ ಠಾಣಾ ವ್ಯಾಪ್ತಿಯ ದೌನಾ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ಹಾಗೂ ನಕ್ಸಲರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಮನೀಶ್ ಯಾದವ್ ಮೃತಪಟ್ಟಿದ್ದಾನೆ. ಮತ್ತೊಬ್ಬ ನಕ್ಸಲ್ ಕುಂದನ್ ಖೇರವಾರ್‌ನನ್ನು ಬಂಧಿಸಲಾಗಿದೆ' ಎಂದು ಪಲಾಮು ಡಿಐಜಿ ವೈ.ಎಸ್.ರಮೇಶ್ ತಿಳಿಸಿದ್ದಾರೆ.ಕುಂದನ್ ತಲೆಗೆ ₹10 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಹೇಳಲಾಗಿದೆ. ಆದರೆ ಇದನ್ನು ಡಿಐಜಿ ಖಚಿತಪಡಿಸಿಲ್ಲ. ನಕ್ಸಲ್ ನಿಗ್ರಹ ಕಾರ್ಯಾಚರಣೆ ಯಲ್ಲಿ ಜೆಜೆಎಂಪಿ ಮುಖ್ಯಸ್ಥ ಪಪ್ಪು ಲೋಹ್ರಾ ಮೃತಪಟ್ಟ ಎರಡು ದಿನಗಳ ಅಂತರದಲ್ಲಿಯೇ ಈ ಕಾರ್ಯಾಚರಣೆ ನಡೆದಿದೆ.

ಅಧಿಕಾರಿ ತಲೆಮೇಲೆ ಹೂಕುಂಡವಿಟ್ಟ ನಿತೀಶ್

ಪಟ್ನಾ(ಪಿಟಿಐ): ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸೋಮವಾರ ಕಾರ್ಯಕ್ರಮವೊಂದರಲ್ಲಿ ತಮಗೆ ಉಡುಗೊರೆಯಾಗಿ ನೀಡಿದ ಚಿಕ್ಕ ಹೂಕುಂಡವನ್ನು ಹಿರಿಯ ಐಎಎಸ್ ಅಧಿಕಾರಿಯೊಬ್ಬರ ತಲೆಯ ಮೇಲೆ ಇಟ್ಟಿರುವ ಘಟನೆ ನಡೆದಿದೆ. ಅವರ ಈ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ವಿಪಕ್ಷ ಆರ್‌ಜೆಡಿಯು, 'ಇದು ಅವರ ಮಾನಸಿಕ ಸ್ಥಿತಿಯನ್ನು ತೋರ್ಪಡಿಸುತ್ತದೆ' ಎಂದು ಹರಿಹಾಯ್ದಿದೆ.

ಪಟ್ನಾದ ಎಲ್.ಎನ್. ಮಿಶ್ರಾ ಇನ್‌ಸ್ಟಿಟ್ಯೂಟ್‌ನಲ್ಲಿ ಈ ಘಟನೆ ನಡೆದಿದೆ. ಅಲ್ಲಿ ನಿತೀಶ್ ಅವರು ಸುಮಾರು ₹10 ಕೋಟಿ ಮೊತ್ತದ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಹೊಸದಾಗಿ ನೇಮಕಗೊಂಡ 20 ಬೋಧಕರಿಗೆ ನೇಮಕಾತಿ ಪತ್ರಗಳನ್ನು ವಿತರಿಸಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಶಿಕ್ಷಣ) ಎಸ್. ಸಿದ್ಧಾರ್ಥ್ ಅವರಿಗೆ ನಿತೀಶ್ ಕುಮಾರ್ ಅವರಿಗೆ ಚಿಕ್ಕ ಹೂವಿನ ಕುಂಡವನ್ನು ಉಡುಗೊರೆಯಾಗಿ ನೀಡಿದರು. ಸ್ವೀಕರಿಸಿದ ಕೂಡಲೇ ನಿತೀಶ್ ಅವರು ಅದನ್ನು ಅಧಿಕಾರಿಯ ತಲೆಯ ಮೇಲೆ ಇರಿಸಿದರು. ಆಗ, ಅಲ್ಲಿದ್ದ ಬಹುತೇಕರು ಈ ಪ್ರಸಂಗ ನಗು ತಂದಿತು. ಸಿದ್ಧಾರ್ಥ್ ಅವರು ತಕ್ಷಣ ಹೂಕುಂಡ ತೆಗೆದುಹಾಕಿ, ನಿರ್ಗಮಿಸಿದರು.



ಸುಭಾಷಿತ

ಜನ ನಿಮ್ಮ ಗುರಿಯನ್ನು ನೋಡಿ ನಗಬೇಕು. ಇಲ್ಲದಿದ್ದರೆ ನಿಮ್ಮ ಗುರಿ ತೀರಾ ಸಣ್ಣದು ಎಂದು ಅರ್ಥಮಾಡಿಕೊಳ್ಳಿ.
-ಅಜೀಂ ಪ್ರೇಮ್‌ಜಿ

ಜಿಲ್ಲಾ ಆಸ್ಪತ್ರೆಗಳಲ್ಲಿ ಕಿಮೋಥೆರಪಿ ಕೇಂದ್ರ ಚಿಕಿತ್ಸೆಯ ವಿಕೇಂದ್ರೀಕರಣ ಸ್ವಾಗತಾರ್ಹ

ಹದಿನಾರು ಜಿಲ್ಲಾ ಆಸ್ಪತ್ರೆಗಳಲ್ಲಿ 'ಡೇ ಕೇರ್ ಕಿಮೋಥೆರಪಿ' ಚಿಕಿತ್ಸಾ ಕೇಂದ್ರಗಳನ್ನು ಆರಂಭಿಸುವ ಮೂಲಕ, ಕ್ಯಾನ್ಸರ್ ಚಿಕಿತ್ಸೆಯನ್ನು ವಿಕೇಂದ್ರೀಕರಣಗೊಳಿಸುವ ದಿಸೆಯಲ್ಲಿ ರಾಜ್ಯ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಇದು ತನ್ನ ಐದು 'ಗ್ಯಾರಂಟಿ'ಗಳ ಗೊಂಚಲಿಗೆ 'ಆರೋಗ್ಯಭಾಗ್ಯ'ವನ್ನೂ ಸೇರಿಸಬೇಕು ಎನ್ನುವ ಜನಸಾಮಾನ್ಯರ ಅಪೇಕ್ಷೆಗೆ ಕಿರು ಸ್ಪಂದನೆಯ ರೂಪದಲ್ಲಿ ಕ್ಯಾನ್ಸರ್ ಚಿಕಿತ್ಸೆ ವಿಕೇಂದ್ರೀಕರಣವನ್ನು ನೋಡಬಹುದಾಗಿದೆ. ಆರ್ಥಿಕವಾಗಿ ದುರ್ಬಲರಾದ ಬಹುತೇಕರು ಕ್ಯಾನ್ಸರ್ ಚಿಕಿತ್ಸೆಗಾಗಿ ಬೆಂಗಳೂರಿನ 'ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ'ಯನ್ನು ಅವಲಂಬಿಸಿದ್ದಾರೆ. ಕಿಮೋಥೆರಪಿ ಚಿಕಿತ್ಸೆಯನ್ನು ಜಿಲ್ಲಾ ಕೇಂದ್ರಗಳಲ್ಲಿ ದೊರಕಿಸುವ ಸರ್ಕಾರದ ಕ್ರಮದಿಂದಾಗಿ, ಕಿದ್ವಾಯಿ ಸಂಸ್ಥೆಯ ಮೇಲಿನ ಅಪಾರವಾದ ಒತ್ತಡ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗಲಿದೆ ಹಾಗೂ ಕ್ಯಾನ್ಸರ್ ರೋಗಿಗಳು ಚಿಕಿತ್ಸೆಗಾಗಿ ಬಹುದೂರ ಪ್ರಯಾಣಿಸುವುದು ತಪ್ಪಲಿದೆ. ಮೈಸೂರಿನಲ್ಲಿ 20 ಹಾಸಿಗೆಗಳ ಕೇಂದ್ರ ಹಾಗೂ ಉಳಿದ 15 ಜಿಲ್ಲೆಗಳಲ್ಲಿ 10 ಹಾಸಿಗೆಗಳ ಕಿಮೋಥೆರಪಿ ಚಿಕಿತ್ಸಾ ಕೇಂದ್ರಗಳನ್ನು ಆರಂಭಿಸುವುದಾಗಿ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿತ್ತು. ಆ ಘೋಷಣೆ ಈಗ ಕಾರ್ಯರೂಪಕ್ಕೆ ಬಂದಿದೆ. ಮೈಸೂರು, ವಿಜಯಪುರ, ಉಡುಪಿ, ಬಳ್ಳಾರಿ, ಧಾರವಾಡ, ಚಿತ್ರದುರ್ಗ, ವಿಜಯನಗರ, ಹಾವೇರಿ, ಬೆಂಗಳೂರು ಗ್ರಾಮಾಂತರ, ರಾಮನಗರ, ಬೆಂಗಳೂರು ನಗರ, ದಕ್ಷಿಣ ಕನ್ನಡ, ದಾವಣಗೆರೆ, ಕೋಲಾರ ಮತ್ತು ಬಾಗಲಕೋಟೆಯಲ್ಲಿ ಕಿಮೋಥೆರಪಿ ಕೇಂದ್ರಗಳು ಆರಂಭಗೊಂಡಿವೆ. 'ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್'ನಲ್ಲಿ (ಎಸ್‌ಎಎಸ್‌ಟಿ) ನೋಂದಣಿ ಆಗಿರುವ ತೃತೀಯ ಹಂತದ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಪ್ರಾರಂಭಿಕ ಚಿಕಿತ್ಸೆ ಪಡೆದ ನಂತರದಲ್ಲಿ, ಜಿಲ್ಲಾ ಆಸ್ಪತ್ರೆಗಳಲ್ಲಿನ 'ಡೇ ಕೇರ್ ಕಿಮೋಥೆರಪಿ ಕೇಂದ್ರ'ಗಳಲ್ಲಿ ಕಿಮೋಥೆರಪಿ ಚಿಕಿತ್ಸೆಯನ್ನು ಪಡೆಯಬಹುದಾಗಿದೆ. ಚಿಕಿತ್ಸೆಗೆ ಅಗತ್ಯವಿರುವ ಔಷಧಗಳನ್ನು ಆಸ್ಪತ್ರೆಯೇ ಒದಗಿಸಲಿದ್ದು, ರೋಗಿಗಳಿಗೆ ಸಮಾಲೋಚನೆಯ ಸೌಲಭ್ಯವೂ ದೊರೆಯಲಿದೆ.



ಕ್ಯಾನ್ಸರ್ ರೋಗಿಗಳಿಗೆ ಸಮೀಪದಲ್ಲೇ ಚಿಕಿತ್ಸೆ ದೊರೆಯುವಂತೆ ಮಾಡುವ ಈ ಯೋಜನೆಯು ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಣೆಯಾಗಲಿ

ಕ್ಯಾನ್ಸರ್ ದೃಢಪಟ್ಟೊಡನೆ ಕೆಲವರು ಬದುಕುವ ಭರವಸೆಯನ್ನೇ ಕಳೆದುಕೊಳ್ಳುವುದಿದೆ. ರೋಗದಿಂದ ಹೊರಬರುವುದರ ಜೊತೆಗೆ ಚಿಕಿತ್ಸೆ ಪಡೆಯಲು ಕೂಡ ಹೋರಾಟ ನಡೆಸಬೇಕಾದ ಸ್ಥಿತಿ ಜನ ಸಾಮಾನ್ಯರದ್ದು. ಪ್ರತಿವರ್ಷ ರಾಜ್ಯದಲ್ಲಿ ಕ್ಯಾನ್ಸರ್‌ನ ಸುಮಾರು 70 ಸಾವಿರ ಹೊಸ ಪ್ರಕರಣಗಳು ವರದಿಯಾಗುತ್ತಿವೆ. ಬೆಂಗಳೂರು, ಹುಬ್ಬಳ್ಳಿ, ಕಲಬುರಗಿ, ಬೆಳಗಾವಿ ಮತ್ತು ಮೈಸೂರು ನಗರಗಳಲ್ಲಿ ಕಿಮೋಥೆರಪಿ ಸೇವೆ ಪಡೆಯಲು ಶೇ 60ರಷ್ಟು ರೋಗಿಗಳು 100 ಕಿ.ಮೀ.ಗೂ ಹೆಚ್ಚು ದೂರ ಪ್ರಯಾಣಿಸುತ್ತಾರೆ. ಮತ್ತೆ ಮತ್ತೆ ಮಾಡಬೇಕಾದ ಈ ದೀರ್ಘ ಪ್ರಯಾಣ ದೈಹಿಕವಾಗಿ, ಮಾನಸಿಕವಾಗಿ ಮಾತ್ರವಲ್ಲದೆ ಆರ್ಥಿಕವಾಗಿಯೂ ರೋಗಿಗಳನ್ನು ಬಾಧಿಸುವಂತಹದ್ದು. ಈ ಸಂಕಷ್ಟ ಕ್ಯಾನ್ಸರ್ ಚಿಕಿತ್ಸೆಯ ವಿಕೇಂದ್ರೀಕರಣದಿಂದ ಕಡಿಮೆಯಾಗಲಿದೆ. ಸದ್ಯ ಹದಿನಾರು ಜಿಲ್ಲೆಗಳಿಗೆ ಸೀಮಿತವಾಗಿರುವ ಯೋಜನೆ ಮುಂದಿನ ಹಂತದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಣೆ ಆಗಬೇಕಾಗಿದೆ. ಮತ್ತೆ ಮತ್ತೆ ಪ್ರಯಾಣ ಮಾಡಬೇಕಾದ ವೆಚ್ಚವನ್ನು ಭರಿಸಲಾಗದ ರೋಗಿಗಳು ಚಿಕಿತ್ಸೆಯನ್ನೇ ಕೈಬಿಡುವ ಸಾಧ್ಯತೆ ಇಲ್ಲದಿಲ್ಲ. ಇಂಥ ಅಸಹಾಯಕ ರೋಗಿಗಳಿಗೆ ಸಮೀಪದಲ್ಲೇ ಚಿಕಿತ್ಸೆ ದೊರೆಯುವಂತೆ ಮಾಡುವ ಸರ್ಕಾರದ ಕ್ರಮದಿಂದ ಅನುಕೂಲವಾಗಲಿದೆ. ಕ್ಯಾನ್ಸರ್ ಆರೈಕೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಣ ಅಸಮಾನತೆಯೂ ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಲಿದೆ. ಈ ಅಸಮಾನತೆಯನ್ನು ಮತ್ತಷ್ಟು ತಗ್ಗಿಸುವ ದಿಸೆಯಲ್ಲಿ ಕಿದ್ವಾಯಿ ಆಸ್ಪತ್ರೆಯ ಶಾಖೆಗಳನ್ನು ರಾಜ್ಯದ ನಾಲ್ಕೈದು ಕಡೆಗಳಲ್ಲಾದರೂ ಆರಂಭಿಸಬೇಕಾಗಿದೆ. ಕ್ಯಾನ್ಸರ್ ಚಿಕಿತ್ಸೆಯ ಆಸ್ಪತ್ರೆಗಳು ಮಾತ್ರವಲ್ಲ, 'ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ' ಹಾಗೂ 'ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ'ಯ (ನಿಮ್ಹಾನ್ಸ್) ಶಾಖೆಗಳನ್ನೂ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಪ್ರಾರಂಭಿಸಬೇಕಾಗಿದೆ. ಇದರಿಂದಾಗಿ, ಪ್ರಮುಖ ಆರೋಗ್ಯ ಸಮಸ್ಯೆಗಳ ಚಿಕಿತ್ಸೆಯ ವಿಕೇಂದ್ರೀಕರಣ ಸಾಧ್ಯವಾಗಲಿದೆ. ಅನುಭವಿ ಹಾಗೂ ಪರಿಣತ ವೈದ್ಯರ ಲಭ್ಯತೆ ಸೇರಿದಂತೆ ಗುಣಮಟ್ಟದ ಸೇವೆಯನ್ನು ನೀಡುವಲ್ಲಿ ಸರ್ಕಾರಿ ಆಸ್ಪತ್ರೆಗಳು ಬದ್ಧವಾಗಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಈ ಬದ್ಧತೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ, ಗ್ರಾಮೀಣರಿಗೆ ಹಾಗೂ ಜನಸಾಮಾನ್ಯರಿಗೆ ಆರೋಗ್ಯದ ಖಾತರಿ ಒದಗಿಸುವ ದಿಸೆಯಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ. ವೈದ್ಯರ ಕೊರತೆ, ಔಷಧಗಳ ಅಲಭ್ಯತೆಯೊಂದಿಗೆ ಭ್ರಷ್ಟಾಚಾರದ ಕಾರಣದಿಂದಲೂ ಸರ್ಕಾರಿ ಆಸ್ಪತ್ರೆಗಳು ರೋಗಿಗಳ ಪಾಲಿಗೆ ದುಃಸ್ವಪ್ನವಾಗಿವೆ. ಜನಸಾಮಾನ್ಯರಿಗೆ ಸೇವೆ ಸಲ್ಲಿಸಲು ದೊರಕಿರುವ ಅಪೂರ್ವ ಅವಕಾಶದ ರೂಪದಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ಮಾನವೀಯವಾಗಿ ರೂಪಿಸುವ ಹೊಣೆಗಾರಿಕೆಯಲ್ಲಿ ಸರ್ಕಾರ ಯಾವುದೇ ರಾಜಿ ಮಾಡಿಕೊಳ್ಳಬಾರದು.

ದಿನದ ಟ್ವೀಟ್


ಸಾಮೂಹಿಕ ವೈಫಲ್ಯದ ಫಲ



ಭಾರತದಲ್ಲಿ ಪ್ರಮುಖ ನಗರಗಳ ಮೂಲಸೌಕರ್ಯ ವ್ಯವಸ್ಥೆ ಶಿಥಿಲವಾಗಿರುವುದಕ್ಕೆ ತಾವು ಇಷ್ಟಪಡದ ಪಕ್ಷಗಳು ಕಾರಣ ಎಂದು ಬಿಜೆಪಿ, ಕಾಂಗ್ರೆಸ್ ಅಥವಾ ಪ್ರಾದೇಶಿಕ ಪಕ್ಷದ ಬೆಂಬಲಿಗರು ಅಂದುಕೊಂಡರೆ, ತಮ್ಮನ್ನು ತಾವು ಮೂರ್ಖರನ್ನಾಗಿಸಿಕೊಂಡಂತೆಯೇ ಸರಿ. ದೇಶದಲ್ಲಿ ಮೂಲಸೌಕರ್ಯ ವ್ಯವಸ್ಥೆಯ ಕುಸಿತಕ್ಕೆ, ಇದುವರೆಗೆ ಅಧಿಕಾರವನ್ನು ಅನುಭವಿಸಿರುವ ಎಲ್ಲಾ ಪಕ್ಷಗಳ ಸಾಮೂಹಿಕ ವೈಫಲ್ಯವೇ ಕಾರಣ...

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

ಕಿಡಿನುಡಿ



ಬಿಜೆಪಿಯ 18 ಶಾಸಕರ ಅಮಾನತು ಆದೇಶವನ್ನು ವಾಪಸ್ ಪಡೆಯಲು ತೀರ್ಮಾನಿಸಿರುವುದು ಸಂವಿಧಾನ ವಿರೋಧಿ ನಡೆ. ಸ್ಪೀಕರ್, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ವಿರೋಧ ಪಕ್ಷದ ನಾಯಕರು ಸುಪ್ರೀಂ ಅಲ್ಲ, ಸದನದ ಭಾಗವಷ್ಟೇ. ಸದನದಲ್ಲಿ ಕೈಗೊಂಡ ತೀರ್ಮಾನವನ್ನು ಅಲ್ಲಿಯೇ ವಾಪಸ್ ಪಡೆಯಬೇಕಿತ್ತು. ಯಾಕಿಷ್ಟು ತುರ್ತಾಗಿ ನಿರ್ಧಾರ ಕೈಗೊಂಡರು? ಈಗ ಸದನ ನಡೆಯುತ್ತಿದೆಯೇ? ಅಮಾನತುಗೊಂಡ ಶಾಸಕರ ಭತ್ಯೆಗೆ ತೊಂದರೆ ಆಗಿದ್ದು ಬಿಟ್ಟರೆ ಮತ್ತೇನೂ ಆಗಿರಲಿಲ್ಲ.

ಆಯನೂರು ಮಂಜುನಾಥ್, ಕೆಪಿಸಿಸಿ ವಕ್ತಾರ

25 ವರ್ಷಗಳ ಹಿಂದೆ

ಶನಿವಾರ, 27-5-2000

• ಧಾನ್ಯ ಉತ್ಪಾದನೆ ಇಳಿಮುಖ ಮುಖ್ಯಮಂತ್ರಿ ಕೃಷ್ಣ ಆತಂಕ

ಬೆಂಗಳೂರು, ಮೇ 26– ರಾಜ್ಯದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದಕ್ಕೆ ಆತಂಕ ವ್ಯಕ್ತಪಡಿಸಿದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು, ಉತ್ಪಾದನೆ ಹೆಚ್ಚಿಸಲು ಸಮರೋಪಾದಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಇಲ್ಲಿ ಕರೆ ನೀಡಿದರು.

ನಬಾರ್ಡ್‌ನ ವಿಕಾಸ ವಾಲೆಂಟರಿ ವಾಹಿನಿಯ ರಾಜ್ಯ ಮಟ್ಟದ ಪ್ರಗತಿ ಪರಿಶೀಲನೆ ಮತ್ತು ಅಭಿವೃದ್ಧಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಆಹಾರ ಉತ್ಪಾದನೆಯಲ್ಲಿ ರಾಜ್ಯದ ಪ್ರಗತಿ ಕಳೆದೆರಡು ವರ್ಷಗಳಿಂದ ಕುಂಠಿತಗೊಂಡಿದೆ. ಇದು ಆತಂಕಕಾರಿ ಬೆಳವಣಿಗೆ ಎಂದರು.

ಆಹಾರಧಾನ್ಯಗಳ ಉತ್ಪಾದನೆ ಜಾಸ್ತಿ ಆಗಬೇಕಾದರೆ ಉತ್ಪಾದಕತೆಯನ್ನು ಹೆಚ್ಚಿಸಬೇಕು. ರೈತರಿಗೆ ಸಕಾಲಕ್ಕೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಒದಗಿಸಿ ಆಧುನಿಕ ಹಾಗೂ ವೈಜ್ಞಾನಿಕ ಬೇಸಾಯ ಪದ್ಧತಿಗಳ ಪರಿಚಯ ಮಾಡಿಕೊಟ್ಟರೆ ಉತ್ಪಾದನೆ ಖಂಡಿತವಾಗಿ ಹೆಚ್ಚಾಗುತ್ತದೆ. ಈ ಕೆಲಸವನ್ನು ಕೃಷಿ ತಜ್ಞರು, ಅಧಿಕಾರಿಗಳು, ನಬಾರ್ಡ್‌ನಂತಹ ಹಣಕಾಸು ಸಂಸ್ಥೆಗಳು ಮಾಡಬೇಕಾಗಿದೆ ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಮಂಗಳವಾರ, 27-5-1975

• ಅರಸು– ಪಾಟೀಲ ಮುಸುಕಿನ ಗುದ್ದಾಟ

ಬೆಂಗಳೂರು, ಮೇ 26– ಕರ್ನಾಟಕದಲ್ಲಿ ಮುಖ್ಯಮಂತ್ರಿ ದೇವರಾಜ ಅರಸು ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಎಚ್.ಪಾಟೀಲರ ನಡುವಣ ವಿರಸ ಈಗ ಜಗಜ್ಜಾಹೀರಾದ ಸಂಗತಿಯಾಗಿದೆ. ಆದರೆ ಅವರು ನೀಡುವ ಹೇಳಿಕೆಗಳು ತಮ್ಮಿಬ್ಬರ ನಡುವೆ ವೈಮನಸ್ಸಿದೆ ಎಂಬ ಆಪಾದನೆಯಲ್ಲಿ ಹುರುಳಿಲ್ಲವೆಂದು ಹೇಳುವಂತೆ ತೋರುತ್ತವೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಕಾರ್ಯ ನಿರ್ವಾಹಕ ಸಮಿತಿಯನ್ನು ವಿಸರ್ಜಿಸಿ ತಮಗೆ ಒಗ್ಗುವಂಥ ಅಡ್‌ಹಾಕ್ ಸಮಿತಿಯೊಂದನ್ನು ರಚಿಸುವ ದಿಸೆಯಲ್ಲಿ ಅರಸು ಅವರು ಕಾರ್ಯನಿರತರಾಗಿದ್ದಾರೆಂದು ಕೆ.ಎಚ್.ಪಾಟೀಲರಿಗೆ ಸ್ಪಷ್ಟವಾಗಿ ಮನವರಿಕೆ ಆಗಿರುವಂತೆ ಕಂಡುಬರುತ್ತದೆ.

ಕೆ.ಎಚ್.ಪಾಟೀಲರು ಬಹಿರಂಗವಾಗಿ ಸಂಪುಟವನ್ನು ಖಂಡಿಸುವುದು ಹಾಗೂ ಪಕ್ಷದಲ್ಲಿನ ಭಿನ್ನಮತೀಯರನ್ನು ದುರುದ್ದೇಶದಿಂದ ಎತ್ತಿಕಟ್ಟುವ ಬಗ್ಗೆ ಅರಸು ಅವರಿಗೆ ಕೋಪ ಬಂದಿರುವಂತೆ ತೋರುತ್ತದೆ.

ಕಾಂಗ್ರೆಸ್ ಪಕ್ಷ ಸಂಕೀರ್ಣ ಸ್ಥಿತಿಯಿಂದ ಹೊರಬರಲು ಮಾಡಬೇಕಾದುದೇನು?

ಕೆಲವು ಹೆಜ್ಜೆ ಮುಂದೆ, ಹಲವು ಹೆಜ್ಜೆ ಹಿಂದೆ



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಕಾಂಗ್ರೆಸ್ ಪಕ್ಷವು ರಾಜಕೀಯವಾಗಿ, ಸಂಘಟನಾತ್ಮಕವಾಗಿ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಪಕ್ಷವು ನಿರ್ಣಾಯಕವಾದ ಒಂದು ಹೆಜ್ಜೆಯನ್ನು ಮುಂದಕ್ಕೆ ಇರಿಸುವಂತೆ ಕಂಡಾಗಲೆಲ್ಲ, ನಿರ್ಣಯ ಕೈಗೊಳ್ಳಲಾಗದ ಸ್ಥಿತಿಯಲ್ಲಿ, ಆಂತರಿಕ ಕಚ್ಚಾಟದಲ್ಲಿ ಸಿಲುಕುತ್ತದೆ ಹಾಗೂ ಅನಗತ್ಯ ಬಡಾಯಿಯಲ್ಲಿ ತೊಡಗಿಸಿಕೊಳ್ಳುತ್ತದೆ. ಕೇಂದ್ರದಲ್ಲಿ ಒಂದು ದಶಕಕ್ಕೂ ಹೆಚ್ಚಿನ ಅವಧಿಯಿಂದ ಪಕ್ಷವು ಅಧಿಕಾರದಿಂದ ಹೊರಗಿರುವುದು ಹಾಗೂ ರಾಜ್ಯಗಳಲ್ಲಿ ಅಧಿಕಾರವನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗಿರುವುದು ಪಕ್ಷದ ಸ್ಥಿತಿಯನ್ನು ಇನ್ನಷ್ಟು ಸಂಕೀರ್ಣವಾಗಿಸುತ್ತಿದೆ.

ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಬಿಜೆಪಿಯು ಸವಾಲಿನ ಸಂದರ್ಭಗಳನ್ನೂ ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳುವುದು ಕಾಂಗ್ರೆಸ್ಸಿನ ಸಂಕೀರ್ಣ ಸ್ಥಿತಿ ಇನ್ನಷ್ಟು ಬಿಗಡಾಯಿಸುವಂತೆ ಮಾಡುತ್ತಿದೆ. ಬಿಜೆಪಿಯ ನಾಯಕರು ಪ್ರತಿ ಅವಕಾಶವನ್ನೂ ಕಾಂಗ್ರೆಸ್ಸಿನ ಮೇಲೆ ನಿರಂತರ ದಾಳಿ ನಡೆಸುವುದಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಆದರೆ ಕಾಂಗ್ರೆಸ್ಸಿನ ನಾಯಕತ್ವವು ಈ ದಾಳಿಗಳಿಗೆ ಬಹುತೇಕ ಸಂದರ್ಭಗಳಲ್ಲಿ ಅರೆಮನಸ್ಸಿನಿಂದ ಹಾಗೂ ಸಮರ್ಪಕವಲ್ಲದ ಬಗೆಯಲ್ಲಿ ಪ್ರತಿಕ್ರಿಯೆ ನೀಡುತ್ತದೆ.

ಕಾಂಗ್ರೆಸ್ ಪಕ್ಷವು ಸತತ ಮೂರು ಲೋಕಸಭಾ ಚುನಾವಣೆಗಳಲ್ಲಿ ಸೋಲು ಕಂಡಿದೆ. 2024ರಲ್ಲಿ ಬಿಜೆಪಿ ಕೂಡ ಲೋಕಸಭೆಯಲ್ಲಿ ಕಳಪೆ ಸಾಧನೆ ತೋರಿದೆ. ಹೀಗಿದ್ದರೂ 'ಪಕ್ಷ 400ಕ್ಕೂ ಅಧಿಕ ಸ್ಥಾನಗಳನ್ನು ಗೆಲ್ಲಲಿದೆ' ಎಂದಿದ್ದ ಸಂಕಥನವನ್ನು ಅದು 'ಎನ್‌ಡಿಎ ಮೈತ್ರಿಕೂಟಕ್ಕೆ ಸ್ಪಷ್ಟ ಬಹುಮತ' ಎಂದು ಯಶಸ್ವಿಯಾಗಿ ಬದಲಾಯಿಸಿದೆ.

ಸಂಕಥನವನ್ನು ಬದಲಾಯಿಸಲು ಕಾಂಗ್ರೆಸ್ ಮಾಡಿರುವ ಪ್ರಯತ್ನಗಳು ಅಲ್ಪ. ಹರಿಯಾಣದಲ್ಲಿ ತನ್ನ ಹೆಜ್ಜೆಯ ಬಗ್ಗೆ ಪರಾಮರ್ಶೆ ನಡೆಸಿದ ಬಿಜೆಪಿಯು ಬಹಳ ಬೇಗ ಬದಲಾವಣೆ ತಂದುಕೊಂಡಿತು. ಆದರೆ ಅತಿಯಾದ ವಿಶ್ವಾಸವನ್ನು ಪ್ರದರ್ಶಿಸಿದ ಕಾಂಗ್ರೆಸ್ ಪಕ್ಷ, ಆಂತರಿಕ ಕಚ್ಚಾಟವನ್ನು ಕೊನೆಗೊಳಿಸಲು ಏನೂ ಮಾಡಲಿಲ್ಲ. ಇದರ ಪರಿಣಾಮವಾಗಿ ಪಕ್ಷವು ಸೋಲು ಕಾಣಬೇಕಾಯಿತು. ಮಹಾರಾಷ್ಟ್ರದಲ್ಲಿ ಮಹಾ ವಿಕಾಸ ಆಘಾಡಿ ಮೈತ್ರಿಕೂಟಕ್ಕೆ ನಾಯಕನೇ ಇರಲಿಲ್ಲ. ಆದರೆ ಮಹಾಯುತಿ ಮೈತ್ರಿಕೂಟದ ಕಾರ್ಯಸೂಚಿ ಏನಿರಬೇಕು ಎಂಬುದನ್ನು ನಿರ್ಧರಿಸಿದ ಬಿಜೆಪಿ, ಹೆಚ್ಚಿನ ಸ್ಥಾನಗಳಲ್ಲಿ ಸ್ಪರ್ಧಿಸಿತು. ಮತದಾರರ ಪಟ್ಟಿಯಲ್ಲಿ ಲೋಪ ಇದೆ ಎಂಬ ವಿಚಾರವನ್ನು ಕಾಂಗ್ರೆಸ್ ಪಕ್ಷವು ಫಲಿತಾಂಶ ಬಂದ ನಂತರ ಪ್ರಸ್ತಾಪಿಸಿತು. ಇದು, ಮತದಾನಕ್ಕೆ ಮೊದಲೇ ಇಂತಹ ಲೋಪಗಳನ್ನು ಪ್ರಸ್ತಾಪ ಮಾಡುವಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿನ ದೌರ್ಬಲ್ಯವನ್ನು ತೋರಿಸುತ್ತದೆ.

ಸಂಘಟನೆಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಹಾಗೂ ರಾಜಕೀಯ ಸಂಕಥನಗಳನ್ನು ತನ್ನ ಪರವಾಗಿ ತಿರುಗಿಸಲು ಆಗದೇ ಇರುವುದರ ಬಗ್ಗೆ ಕಾಂಗ್ರೆಸ್ ಗಮನ ಹರಿಸುವುದು ಒಳ್ಳೆಯ ಕೆಲಸ ಆಗಬಹುದು. ಕಾಂಗ್ರೆಸ್ ಪಕ್ಷವು ಸಂಘಟನಾತ್ಮಕವಾಗಿ ಎದುರಿಸುತ್ತಿರುವ ಸಮಸ್ಯೆಗಳು ಎದ್ದು ಕಾಣುವಂತೆ ಇವೆ. 2014ರಲ್ಲಿ ಪಕ್ಷ ಅನುಭವಿಸಿದ ಭಾರಿ ಸೋಲು ಹಾಗೂ 2019ರಲ್ಲಿ ಕಂಡ ಸಣ್ಣ ಪ್ರಮಾಣದ ಚೇತರಿಕೆಯು ಪಕ್ಷವು ಸ್ಪಷ್ಟವಾದ ದಿಕ್ಕಿನಲ್ಲಿ ಸಾಗುತ್ತಿಲ್ಲ ಎಂಬುದನ್ನು ತೋರಿಸುವಂತೆ ಇದ್ದವು. 2024ರಲ್ಲಿ ಬಿಜೆಪಿಯು ಕಡಿಮೆ ಸ್ಥಾನಗಳನ್ನು ಪಡೆದಾಗಲೂ, ಮೂರಂಕಿ ಸ್ಥಾನ ಪಡೆಯಲು ಕಾಂಗ್ರೆಸ್ಸಿಗೆ ಆಗಿಲ್ಲದಿರುವುದು ತಳಮಟ್ಟದಲ್ಲಿ ಸಂಘಟನೆಯು ಪರಿಣಾಮಕಾರಿ ಆಗಿಲ್ಲದಿರುವುದನ್ನು ತೋರಿಸುತ್ತಿದೆ.

ರಾಷ್ಟ್ರಮಟ್ಟದಲ್ಲಿ ಪಕ್ಷದ ಅಧ್ಯಕ್ಷ ಸ್ಥಾನವನ್ನು ಸೋನಿಯಾ ಗಾಂಧಿ ಅವರು ರಾಹುಲ್ ಗಾಂಧಿ ಅವರಿಗೆ ವರ್ಗಾಯಿಸಿದ ನಂತರವೂ ಸಂಘಟನೆಗೆ ಹೆಚ್ಚಿನ ಬಲ ಸಿಗಲಿಲ್ಲ. 2019ರ ಸೋಲಿನ ನಂತರ ರಾಹುಲ್ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಆಗ ಪಕ್ಷದ ಸಂಘಟನೆಯಲ್ಲಿ ಸುಧಾರಣೆ ತರುವ ಬಗ್ಗೆ ಮರು ಅವಲೋಕನ ನಡೆಸುವ ಯತ್ನ ನಡೆಯಿತು. ಆದರೆ ಅನಗತ್ಯ ವಿಳಂಬ ಹಾಗೂ ಕೆಲವು ಸಂದರ್ಭಗಳಲ್ಲಿ ತೀರ್ಮಾನಗಳನ್ನೇ ತೆಗೆದುಕೊಳ್ಳದೆ, ಪಕ್ಷವು ಗಾಂಧಿ ಕುಟುಂಬದ ಹೊರಗಿನ ನಾಯಕರೊಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು.


ಮಲ್ಲಿಕಾರ್ಜುನ ಖರ್ಗೆ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡುವಲ್ಲಿ ರಾಜಕೀಯ ನೆಲೆಯಲ್ಲಿ ಒಂದಿಷ್ಟು ನಾಟಕೀಯತೆಗಳೂ ಇದ್ದವು. ಆರಂಭದಲ್ಲಿ, ಖರ್ಗೆ ಅವರು ನಿರ್ಣಯಗಳನ್ನು ಕೈಗೊಳ್ಳುವಾಗ ಸರ್ವಸಮ್ಮತಿಯ ವಿಧಾನವನ್ನು ಜಾರಿಗೆ ತರುತ್ತಿರುವಂತೆ ಕಂಡಿತು. ನಿರ್ಣಯಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಗಾಂಧಿ ಕುಟುಂಬದ ಸದಸ್ಯರ ಉಪಸ್ಥಿತಿಯು ತೀವ್ರ ಚರ್ಚೆಗಳಿಗೆ ಕಾರಣವಾಯಿತು. ಪಕ್ಷದಲ್ಲಿ ರಾಹುಲ್ ಅವರ ಪಾತ್ರ ಏನು ಎಂಬ ಬಗ್ಗೆ ಸ್ಪಷ್ಟತೆಯ ಕೊರತೆ ಕಾಣುತ್ತಿತ್ತು. 'ಭಾರತ್ ಜೋಡೊ' ಯಾತ್ರೆ ಮತ್ತು 'ನ್ಯಾಯ ಯಾತ್ರೆ'ಯ ಯಶಸ್ಸು ರಾಹುಲ್ ಅವರ ರಾಜಕೀಯ ಬಂಡವಾಳವನ್ನು ಹೆಚ್ಚು ಮಾಡಿತಾದರೂ, ಪಕ್ಷದ ವಿಚಾರಗಳಲ್ಲಿ ರಾಹುಲ್ ಅವರು ನಿರಂತರವಾಗಿ ತೊಡಗಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಪ್ರಶ್ನೆಗಳು ಉಳಿದವು.

2024ರ ಲೋಕಸಭಾ ಚುನಾವಣೆಯ ನಂತರ ರಾಹುಲ್ ಗಾಂಧಿ ಅವರು ಲೋಕಸಭೆಯ ವಿರೋಧ ಪಕ್ಷದ ನಾಯಕ ಆಗುವುದರೊಂದಿಗೆ, ಅವರು ತೆರವು ಮಾಡಿದ ವಯನಾಡ್ ಕ್ಷೇತ್ರವನ್ನು ಸಹೋದರಿ ಪ್ರಿಯಾಂಕಾ ಅವರು ಗೆಲ್ಲುವುದರೊಂದಿಗೆ ಪಕ್ಷದ ರಾಜಕೀಯ ಕೇಂದ್ರಸ್ಥಾನಕ್ಕೆ ಗಾಂಧಿ ಕುಟುಂಬವು ಬಹಳ ಸ್ಪಷ್ಟವಾಗಿ ಮರಳಿ ಬಂದಂತೆ ಆಯಿತು. ದಶಕಕ್ಕೂ ಹೆಚ್ಚಿನ ಅವಧಿಯಿಂದ ವಿರೋಧ ಪಕ್ಷವಾಗಿದ್ದರೂ ಪಕ್ಷದ ಸಂಘಟನೆಗೆ ಉತ್ಸಾಹ ತುಂಬುವಲ್ಲಿ ಹೆಚ್ಚಿನ ಕೆಲಸ ಆಗಲಿಲ್ಲ. ಪಕ್ಷವು ಕೈಗೊಂಡ ತೀರ್ಮಾನಗಳ ಬಗ್ಗೆ ಬಂಡಾಯವು ಬಹಿರಂಗವಾಗಿ ವ್ಯಕ್ತವಾಗುವುದು ಸಹಜವಾಯಿತು. ಹಿಮಂತ ಬಿಸ್ವ ಶರ್ಮಾ ಪ್ರಕರಣ, ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ಗುಲಾಂ ನಬಿ ಆಜಾದ್ ಅವರು ಪಕ್ಷ ತೊರೆದಿದ್ದು, ಅಶೋಕ್ ಗೆಹ್ಲೋಟ್ ಬಂಡಾಯ ಎದ್ದಿದ್ದು, ತೀರಾ ಈಚೆಗೆ ಶಶಿ ತರೂರ್ ತಳೆದ ನಿಲುವು ತೋರಿಸುತ್ತಿರುವುದು ಇದನ್ನೇ.

ಇನ್ನೊಂದೆಡೆ, ಪಕ್ಷದ ರಾಜ್ಯ ಘಟಕಗಳಲ್ಲಿ ಆಂತರಿಕ ಕಚ್ಚಾಟ ಸಹಜವಾಯಿತು. ಪಕ್ಷವು ಅಧಿಕಾರದಲ್ಲಿ ಇರುವ ರಾಜ್ಯದಲ್ಲಿಯೂ ಮುಖಂಡರ ನಡುವೆ ಒಗ್ಗಟ್ಟು ಕಾಪಾಡಿಕೊಳ್ಳುವುದು ಕಷ್ಟವಾಗುತ್ತಿದೆ. ಆಗೊಮ್ಮೆ ಈಗೊಮ್ಮೆ ಎಂಬಂತೆ ಪಕ್ಷವು ಕೆಲವು ಮಹತ್ವದ ಹೆಜ್ಜೆಗಳನ್ನು ಇರಿಸುತ್ತದೆಯಾದರೂ, ನಂತರ ಅದು ಮೌನವಾಗಿಬಿಡುತ್ತದೆ. ಬಿಜೆಪಿಯು ಸಂಕಥನದ ಕೇಂದ್ರಸ್ಥಾನಕ್ಕೆ ಬಂದು ಕುಳಿತುಕೊಳ್ಳುತ್ತದೆ. 'ಆಪರೇಷನ್ ಸಿಂಧೂರ' ಕುರಿತ ಭಾರತದ ನಿಲುವಿನ ಬಗ್ಗೆ ಮಾಹಿತಿ ಒದಗಿಸಲು ವಿದೇಶಗಳಿಗೆ ಸಂಸದರ ನಿಯೋಗ ಕಳುಹಿಸಿದ್ದು ಹಾಗೂ ಜಾತಿ ಜನಗಣತಿಗೆ ಸಂಬಂಧಿಸಿದ ಬೆಳವಣಿಗೆಗಳು ಈ ಮಾತಿಗೆ ತೀರಾ ಈಚಿನ ನಿದರ್ಶನ.

2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ 'ಇಂಡಿಯಾ' ಮೈತ್ರಿಕೂಟ ಸೃಷ್ಟಿಸಿದ್ದ ಸಂಚಲನವನ್ನು ಇನ್ನಷ್ಟು ಮುಂದಕ್ಕೆ ಒಯ್ಯುವಲ್ಲಿನ ವೈಫಲ್ಯವು ಮೈತ್ರಿಕೂಟಕ್ಕೆ ಮುಂದಾಳತ್ವ ನೀಡುವಲ್ಲಿ ಕಾಂಗ್ರೆಸ್ಸಿಗೆ ಸಾಧ್ಯವಾಗದೇ ಇರುವುದನ್ನು ಹಾಗೂ ವಿರೋಧ ಪಕ್ಷಗಳ ಕಾರ್ಯಸೂಚಿ ಏನಿರಬೇಕು ಎಂಬುದನ್ನು ತೀರ್ಮಾನಿಸಲು ಆಗದೇ ಇರುವುದನ್ನು ತೋರಿಸುತ್ತಿರುವ ಇನ್ನೊಂದು ನಿದರ್ಶನ. 'ಇಂಡಿಯಾ' ಮೈತ್ರಿಕೂಟವು ಎಷ್ಟರಮಟ್ಟಿಗೆ ಪ್ರಸ್ತುತ ಎಂಬ ಪ್ರಶ್ನೆಯನ್ನು ಮೈತ್ರಿಕೂಟದ ಪಾಲುದಾರ ಪಕ್ಷಗಳಷ್ಟೇ ಅಲ್ಲದೆ, ಕಾಂಗ್ರೆಸ್ಸಿನ ಕೆಲವು ಮುಖಂಡರು ಕೂಡ ಕೇಳುತ್ತಿರುವುದು ಪರಿಸ್ಥಿತಿಯ ಪ್ರತಿಬಿಂಬದಂತೆ ಇದೆ. ಇದರಿಂದಾಗಿ ವಿರೋಧ ಪಕ್ಷಗಳ ನಡುವೆ ಕಾಂಗ್ರೆಸ್ಸನ್ನು ಏಕಾಂಗಿಯಾಗಿಸುವ ಪ್ರಯತ್ನವನ್ನು ಮುಂದುವರಿಸುವುದು, ಆ ಪಕ್ಷದ ಮೇಲೆ ನಿರಂತರವಾಗಿ ವಾಗ್ದಾಳಿ ನಡೆಸುವುದು ಬಿಜೆಪಿಗೆ ಸುಲಭವಾಗಿದೆ.

ಮುಂದಿನ ನಡೆ ಏನು ಎಂಬ ಬಗ್ಗೆ ಕಾಂಗ್ರೆಸ್ಸಿನಲ್ಲಿ ಸ್ಪಷ್ಟತೆ ಇಲ್ಲ. ಕಾಂಗ್ರೆಸ್ ಪಕ್ಷವು ಸಂಘಟನಾತ್ಮಕವಾಗಿ ದುರ್ಬಲವಾಗಿರುವುದನ್ನು ವಿರೋಧಿ ಬಿಜೆಪಿಯು ಚೆನ್ನಾಗಿ ಬಳಕೆ ಮಾಡಿಕೊಳ್ಳುತ್ತಿದೆ. ಬಿಜೆಪಿಯ ಪ್ರಧಾನ ವಿರೋಧ ಪಕ್ಷ ಎನ್ನುವ ಪಾತ್ರವನ್ನು ಕಾಂಗ್ರೆಸ್ ಪಕ್ಷವು ಇತರ ಪಕ್ಷಗಳಿಗೆ ಬಹಳ ಬೇಗನೆ ಬಿಟ್ಟುಕೊಡುತ್ತಿದೆ. ವಿರೋಧ ಪಕ್ಷಗಳ ನಡುವೆ ತನಗೆ ಪ್ರಾಧಾನ್ಯ ಇರಬೇಕು ಎಂಬ ಸಂದೇಶವನ್ನು ಗಟ್ಟಿಯಾಗಿ ರವಾನಿಸುವ ಇರಾದೆ ಕಾಂಗ್ರೆಸ್ಸಿನ ನಾಯಕತ್ವಕ್ಕೆ ಇದೆ ಎಂದಾದರೆ, ದಿಕ್ಕುಗಾಣದೆ ಸಾಗುವ ಸ್ಥಿತಿಯಿಂದ ಪಕ್ಷವನ್ನು ಹೊರತರಬೇಕಿದೆ.



ಚುರುಮುರಿ



ಕ್ರೇಟರ್ ಬೆಂಗಳೂರು

• ಡಿ.ಎಸ್.ಲಿಂಗರಾಜು

ತುರೇಮಣೆ ಮೊಮ್ಮಗ 'ರೈನ್ ರೈನ್ ಕಂ ಹಿಯರ್' ಅಂತ ಹಾಡಿಕ್ಯತ್ತಾ ಕೂತುದ್ದ. 'ಅಲ್ಲ ಕಲಾ ಮಗ, ರೈನ್ ರೈನ್ ಗೋ ಅವೇ ಅಂತ ಅಲ್ವೇನ್ಲಾ?' ಅಂತ ತಿದ್ದಿದೆ.

'ಮಾಮ, ಕೆರೆ ಒಳಗಿತ್ತಲ್ಲ ನಮ್ಮ ಫ್ಲಾಟು ನೀರಲ್ಲಿ ಮುಣುಗೋಗ್ಯದೆ. ಅದುಕ್ಕೆ ಇಲ್ಲಿಗೆ ಬಂದುದವಿ. ಜೋರು ಮಳೆ ಹೂದ್ರೆ ಸ್ಕೂಲಿಗೆ ರಜಾ ಸಿಕ್ತದಲ್ಲಾ ಅದುಕ್ಕೇ ರೈನ್ ರೈನ್ ಕಂ ಹಿಯರ್ ಅಂತ ಹೇಳ್ತುದನಿ' ಅಂತಂದ.

'ಮಳೆ ಬಂದ್ರೆ ವಾಟರ್ ಬೆಂಗಳೂರು ಆಯ್ತದಲ್ಲಾ ಅದಕ್ಕೇನು ಮಾಡಮು. ನಿನ್ನ ಐಡಿಯ ಹೇಳು' ಅಂತ ಪ್ರೋತ್ಸಾಹಿಸಿದೆ.

'ಚಿನ್ನಸ್ವಾಮಿ ಸ್ಟೇಡಿಯಮ್ಮಲ್ಲಿ ಮಳೆ ಬಂದ್ರೂ ಆಟ ನಿಲ್ಲದಂಗೆ ಸಬ್-ಏರ್ ಡ್ರೈನೇಜ್ ಸಿಸ್ಟಂ ಮಾಡ್ಯವುರಲ್ಲ, ಹಂಗೆ ಬಿದ್ದ ನೀರು ರೋಡಲ್ಲೇ ಇಂಗಿ ಹೋಗಂಗೆ ಮಾಡಬಕು' ಹುಡುಗ ರಾಜಕಾರಣಿ ಥರಾ ಮಾತಾಡಿದ.

'ಅಲ್ಲ ಸಾ, ಚಂದ್ರಲೋಕದ ಕ್ರೇಟರ್ ಇದ್ದಂಗವೆ ಬೆಂಗಳೂರು ಗುಂಡಿಗಳು. ಜನದ ಸೇವೆ ಮಾಡಕ್ಕೆ ಅಂತ್ಲೇ ಬಿಬಿಎಂಪಿಗೆ ವಕ್ಕರಿಸಿಕ್ಯಂದಿರೋ ಅಧಿಕಾರಿಗಳಿಗೆ ಗುಂಡಿಗಳಿಲ್ಲದಿದ್ರ ಹೊಟ್ಟೆಪಾಡು ಯಂಗೆ ಆತದೆ? ಸಬ್-ಏರ್ ಸಿಸ್ಟಂ ಹಾಕಿ ರೋಡಿಗೆ ಅಲಂಕಾರ ಮಾಡಿಕ್ಯಂದು ಕೂಕಣಕೆ ಇದೇನು ಮೇಕಪ್ ಕೆಟ್ಟೋತ್ತಾ?' ತುರೇಮಣೆಗೆ ಕೇಳಿದೆ.

'ರೋಡಿಗೆ ಸಬ್-ಏರ್ ಹಾಕದು ಕ್ರೇಟರ್ ಬೆಂಗಳೂರಿಗೆ ಮೇಕಪ್ ಫೌಂಡೇಶನ್ ಕನೋ. ಕಸ ತಗುದು ಕ್ಲೆನ್ಸಿಂಗ್, ನೀರು ಒಣಗಿಸಿ ಮಾಯಿಶ್ಚರೈಸ್ ಮಾಡಿ, ಗುಂಡಿಗೆಲ್ಲಾ ಪ್ರೈಮರ್ ಹಾಕಿ, ಕುಮಾರಣ್ಣ ಅಂದಂಗೆ ರೋಡಿಗೆಲ್ಲಾ ತಗಡು ಹಾಸಿದ ಮ್ಯಾಲೆ ಮೇಕಪ್ ಪೂರ್ತಿಯಾಗಿ ಬೆಂಗಳೂರು ಸಿಂಗಪುರ ಆತದೆ. ಆಮೇಲೆ ರೋಡೆಲ್ಲಾ ತಮನ್ನಾನ ಕೆನ್ನೆ ಇದ್ದಂಗೆ ನೈಸಾಗಿರತವೆ' ಯಂಟಪ್ಪಣ್ಣ ಖುಷಿಯಾಯ್ತು.

'ಅಣ್ಣೆ, ರೋಡಲ್ಲೋಗುವಾಗ 'ಸ್ಕೂಟಿಯ ಮೇಲೇ ಕುಂಟ ಕಿರುನಗೆ, ರೋಡು ತುಂಬಾ ಗುಂಡಿ ಸಂಪಿಗೆ, ಏನು ಕಸಿವಿಸಿ, ಏರಿ ಮೈಬಿಸಿ, ಈ ಬಗೆ ಹೊಸ ಬಗೆ' ಅಂತ ಹಾಡಕ್ಕಾಗಕುಲ್ವಲ್ಲಾ' ಎಂದು ಕೊರಗಿದೆ.

ಸಂಗತ

ಜನಮನ ಗೆಲ್ಲಲು ಜ್ಞಾನಮಾರ್ಗ

ಸರ್ಕಾರಿ ನೌಕರರು ಜನರ ಸಂಕಷ್ಟಗಳಿಗೆ ತೆರೆದುಕೊಳ್ಳುವಲ್ಲಿ ಸಾಹಿತ್ಯವು ಬೆಳಕಿಂಡಿಯಂತೆ ಕಾರ್ಯನಿರ್ವಹಿಸಬಲ್ಲದು

• ಯೋಗಾನಂದ

ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಸರ್ಕಾರಿ ನೌಕರರಿಗೆ ಸಾಹಿತ್ಯದ ಬಗ್ಗೆ ಒಲವು ಮೂಡಿಸಬೇಕು, ಈ ಮೂಲಕ ಅಲ್ಲಿನ ವಾತಾವರಣವನ್ನು ಸ್ವಲ್ಪವಾದರೂ ಸಹನೀಯವಾಗಿಸಲು ಸಾಧ್ಯ ಎಂದು ರಾಜಕುಮಾರ ಕುಲಕರ್ಣಿ ಅವರು ತಮ್ಮ ಲೇಖನದಲ್ಲಿ (ಸಂಗತ, ಮೇ 23) ಅಭಿಪ್ರಾಯಪಟ್ಟಿರುವುದು ಸಕಾಲಿಕವಾಗಿದೆ. ಸಾರ್ವಜನಿಕ ಸೇವೆಯಲ್ಲಿ ಇರುವವರು ಯಾವುದೇ ಹುದ್ದೆ ಅಥವಾ ಅಧಿಕಾರವನ್ನು ಸಮರ್ಥವಾಗಿ ನಿಭಾಯಿಸುವುದರ ಮೇಲೆ ಸಾಹಿತ್ಯ ಪ್ರಕಾರಗಳು ನಿಸ್ಸಂದೇಹವಾಗಿಯೂ ಪ್ರಭಾವ ಬೀರುತ್ತವೆ.

ಸರ್ಕಾರಿ ನೌಕರ ಬಂಧುಗಳು ಜನರ ಸಂಕಷ್ಟಗಳಿಗೆ ತೆರೆದುಕೊಳ್ಳಲು ಕವಿತೆ, ನಾಟಕ, ವಚನ, ಪ್ರಬಂಧದಂತಹವು ಬೆಳಕಿಂಡಿಗಳಾಗಬಲ್ಲವು. ಅಧಿಕಾರಿಗಳು ಮತ್ತು ಸಿಬ್ಬಂದಿ ತಾವು ಕುಳಿತ ಜಾಗದಲ್ಲೇ ಇನ್ನೊಂದು ಪ್ರಪಂಚವನ್ನು ಕಾಣಲು ಸಾಧ್ಯವಾಗುತ್ತದೆ. ನವಿರಾದ ವಿನೋದದಿಂದಲೇ ಅವರು ಸಾರ್ವಜನಿಕರ ಮನಸ್ಸನ್ನು ಗೆಲ್ಲಬಹುದು. ಶಾಲೆ, ಕಾಲೇಜಿನ ಹಂತದಲ್ಲಿ ಭಾಷೆ, ಸಾಹಿತ್ಯವನ್ನು ಪಠ್ಯಕ್ರಮದಲ್ಲಿ ಅಳವಡಿಸುವ ಉದ್ದೇಶವೂ ಅದೇ ಅಲ್ಲವೆ?


ಓದಿದ್ದು ಅಥವಾ ಬರೆದಿದ್ದು ಕಥೆಯೊ, ಕಗ್ಗವೊ, ಕವನವೊ, ಪ್ರಹಸನವೊ ಯಾವುದಾದರೂ ಸರಿ, ಭವಿಷ್ಯದಲ್ಲಿ ಕಂಡುಕೊಳ್ಳುವ ಜೀವನೋಪಾಯಕ್ಕೆ ಅದರಿಂದ ರವಷ್ಟಾದರೂ ಸ್ಫೂರ್ತಿ ದೊರೆಯಲಿ ಎಂಬ ಆಶಯ ಇರುತ್ತದೆ. ದುರ್ದೈವವಶಾತ್ ಪರೀಕ್ಷೆಗಷ್ಟೇ ಪಠ್ಯ ಎನ್ನುವಂತಹ ವಾತಾವರಣ ಈಗ ನಿರ್ಮಾಣವಾಗಿದೆ. ಹೀಗಾಗಿ, ವಿದ್ಯಾರ್ಜನೆಯು ಉದ್ಯೋಗ ಗಿಟ್ಟಿಸುವುದರಲ್ಲಿ ಅಂತ್ಯವಾಗುವುದೇ ಹೆಚ್ಚು.

ಆಡಳಿತವರ್ಗವು ಮನುಷ್ಯನ ಸಂಕೀರ್ಣ ಸ್ವಭಾವವನ್ನು ಅರಿಯದೆ ಮಹತ್ವದ ಜನಪರ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ನೌಕರರು ತಮ್ಮೆದುರು ಕುಳಿತ ಅಹವಾಲುದಾರರ ಸ್ಥಾನದಲ್ಲಿ ತಮ್ಮನ್ನು ಕಲ್ಪಿಸಿಕೊಂಡಾಗ ಮಾತ್ರ ಆ ಅಹವಾಲುದಾರರ ಸಂವೇದನೆಗಳು ಅವರಿಗೆ ಅರ್ಥವಾಗುತ್ತವೆ, ಅವರ ಮನಸ್ಸನ್ನು ಮುಟ್ಟುತ್ತವೆ. ಆಗಷ್ಟೇ ಅವರು ಅವಕ್ಕೆ ಸೂಕ್ತವಾಗಿ ಸ್ಪಂದಿಸಲು ಸಾಧ್ಯ. ಅದಿಲ್ಲದೆ 'ಹೋಗಿ ಬನ್ನಿ', 'ನಾಳೆ ಬನ್ನಿ' ಎಂದಾಗ ಮನವಿದಾರರಿಗೆ ನಿರಾಶೆ ಕಟ್ಟಿಟ್ಟಬುತ್ತಿ. 'ಇಷ್ಟು ತನ್ನಿ' ಎಂದರಂತೂ ತಮ್ಮ ಕೆಲಸ ಇತ್ಯರ್ಥವಾಗಲಿದೆ ಎಂದು ಕನಸು ಕಂಡವರ ಉತ್ಸಾಹ ಒಂದೇ ಬಾರಿಗೆ ಬತ್ತಿಯೇ ಹೋಗುತ್ತದೆ.

ಪ್ರಜೆಗಳ ರಕ್ಷಣೆ, ಪಾಲನೆ ಮತ್ತು ಯೋಗಕ್ಷೇಮ- ಇವು ಪರಿಪಕ್ವ ಆಳ್ವಿಕೆಗೆ ಅಗತ್ಯವಾದ ಮೂರು ಮುಖ್ಯ ಅಂಶಗಳು ಎಂದು ಕೌಟಿಲ್ಯ ತನ್ನ 'ಅರ್ಥಶಾಸ್ತ್ರ'ದಲ್ಲಿ ಉಲ್ಲೇಖಿಸಿದ್ದಾನೆ. ದೇಶಗಳು, ರಾಜ್ಯಗಳು ಭಿನ್ನ ಭಿನ್ನ. ಅವುಗಳ ಇತಿಹಾಸ, ಸಂಸ್ಕೃತಿ, ಅಲ್ಲಿನ ಜನರ ಆಕಾಂಕ್ಷೆಗಳೂ ಬೇರೆ ಬೇರೆಯೇ ಆಗಿರುತ್ತವೆ. ಆದರೆ ಚೆನ್ನಾಗಿ ಓದು, ಚೆನ್ನಾಗಿ ಆಳು ಎನ್ನುವಂತಹ ಹಿತನುಡಿಗಳು ಸರ್ವತ್ರ ಒಂದೇ ಆಗಿರುತ್ತವೆ. ಓದು, ಬರಹದಿಂದ ಕಲಿತ ವಿವೇಕವು ಹೊಣೆಗಾರಿಕೆಯನ್ನು ಬದ್ಧತೆಯಿಂದ ನಿರ್ವಹಿಸಲು ಪೂರಕವಾಗಿರುತ್ತದೆ. ನಿಜವಾದ ಅರ್ಥದಲ್ಲಿ ಜ್ಞಾನವೇ ಸಾಮರ್ಥ್ಯ ಮತ್ತು ಶಕ್ತಿ.

ಉನ್ನತ ಅಧಿಕಾರಿಯಾಗಲಿ ಅಥವಾ ಯಾವುದೇ ದರ್ಜೆಯ ಸಿಬ್ಬಂದಿಯಾಗಲಿ ಸಾಹಿತ್ಯದ ಓದು, ಬರಹದಲ್ಲಿ ಆಸಕ್ತರಾಗಿದ್ದರೆ ಅವರ ಶಬ್ದಸಂಪತ್ತು ವರ್ಧಿಸುತ್ತದೆ ಹಾಗೂ ವ್ಯಾಕರಣ ಶುದ್ಧವಾಗಿ ಇರುತ್ತದೆ. ಯಾರದೇ ಸಹಾಯವಿಲ್ಲದೆ ಅವರು ತಮ್ಮ ವೃತ್ತಿಗೆ ಸಂಬಂಧಿಸಿದ ಕರಡು ತಯಾರಿಸುತ್ತಾರೆ. ಆಗಿಂದಾಗ್ಗೆ ಬರುವ ಸರ್ಕಾರಿ ಆದೇಶಗಳನ್ನು ಸರಿಯಾಗಿ ವ್ಯಾಖ್ಯಾನಿಸಲು ಅವರು ಸಮರ್ಥರಾಗುತ್ತಾರೆ. ಕಠಿಣ ಸಂದರ್ಭಗಳನ್ನು ಸಂಯಮದಿಂದ ಎದುರಿಸುವುದನ್ನು ಕಲಿಯುತ್ತಾರೆ. ಏಕೆಂದರೆ ಸಂವಹನದ ಸೂಕ್ಷ್ಮಗಳು ಅವರ ಜೊತೆಗಿರುತ್ತವೆ. ಹೀಗಾಗಿ, ಓದುವ ಪ್ರಮಾಣಕ್ಕಿಂತ ಅದರ ಗುಣಮಟ್ಟ ಮುಖ್ಯವಾಗುತ್ತದೆ.

ಯಾವುದೇ ಒಂದು ಭಾಷೆಯ ಸಾಹಿತ್ಯ ಕೃತಿಗಳ ಪರಿಚಯವಿದ್ದರೂ ಅಂತಹವರಿಗೆ ಅನ್ಯಭಾಷೆಗಳು ಪರಕೀಯ ಎನ್ನಿಸುವುದಿಲ್ಲ. ಉತ್ತರ ಭಾರತದ ಕನೌಜ್ ಎಂಬ ಪ್ರಾಂತ್ಯವನ್ನು ಕ್ರಿ.ಶ. ಏಳನೇ ಶತಮಾನದ ಆರಂಭದಲ್ಲಿ ದಕ್ಷವಾಗಿ ಆಳಿದ ದೊರೆ ಹರ್ಷವರ್ಧನ. ಆತನ ಆಸ್ಥಾನದಲ್ಲಿ ಕವಿಗಳಿಗೆ ಅಗ್ರ ಸ್ಥಾನಮಾನವಿತ್ತು. ಅವನು ಸ್ವತಃ ನಾಲ್ಕು ಸಂಸ್ಕೃತ ನಾಟಕಗಳನ್ನು ರಚಿಸಿದ್ದಂತಹ ಮೇಧಾವಿಯಾಗಿದ್ದ. ಭಾರತದ ಇತಿಹಾಸದಲ್ಲಿ ಇಂತಹ ಉದಾಹರಣೆಗಳು ಹಲವಾರು ಸಿಗುತ್ತವೆ.



ಉತ್ತಮ ಗ್ರಂಥವು ಮನುಷ್ಯರನ್ನು ಒಗ್ಗೂಡಿಸುವ ಸಂಪರ್ಕ ಸೇತು. ಪುಸ್ತಕದ ಪುಟಗಳನ್ನು ತೆರೆದಂತೆ ಬಗೆ ಬಗೆಯ ಪಾತ್ರಗಳ ಮನಸ್ಸುಗಳನ್ನು ಎದುರುಗೊಳ್ಳುತ್ತೇವೆ. ಆ ಪಾತ್ರಗಳಿಗೆ ಆಗುತ್ತಾ ಹೋಗುವ ಅನುಭವಗಳು ನಮ್ಮ ಅನುಭವಗಳೇ ಆಗುತ್ತವೆ. ನಮ್ಮ ಸಹಾನುಭೂತಿ ಹಲವು ಪಟ್ಟು ವಿಸ್ತಾರಗೊಳ್ಳುತ್ತದೆ. ಸಾಹಿತ್ಯವು ನಮ್ಮ ಬದುಕನ್ನು ಮತ್ತು ನಮ್ಮ ಸುತ್ತಮುತ್ತಲಿನ ಜಗತ್ತನ್ನು ನಾವಾಗಿಯೇ ಚೆನ್ನಾಗಿ ಅರಿಯಲು ಪೂರಕವಾಗಿ ಇರುತ್ತದೆ. ಅದು ನಮ್ಮ ಅಂತರಂಗವನ್ನು ಕಲಕಿ ಪರಿಷ್ಕರಿಸುತ್ತದೆ. ಸಾಹಿತ್ಯ ಕೃತಿಗಳಲ್ಲಿನ ಜಟಿಲವಾದ ನೈತಿಕ ಸಂದಿಗ್ಧಗಳು ನಮ್ಮಲ್ಲಿ ಪ್ರಜ್ಞೆಯನ್ನು ಮೂಡಿಸಬಲ್ಲವು ಹಾಗೂ ನಮ್ಮ ಹೊಣೆಗಾರಿಕೆಯನ್ನು ಹೆಚ್ಚಿಸಬಲ್ಲವು.

ಹೀಗಾಗಿ, ಸಾಹಿತ್ಯ ಎಲ್ಲರಿಗೂ ಅವಶ್ಯ. ಎಲ್ಲರೂ ಓದುವ ಹವ್ಯಾಸ ರೂಢಿಸಿಕೊಳ್ಳುವುದು ಉತ್ತಮ. ಪ್ರತಿ ಬ್ಯಾಂಕು, ಕಚೇರಿಯಲ್ಲಿ ದಿನಪತ್ರಿಕೆಗಳನ್ನು ತರಿಸುವ ವ್ಯವಸ್ಥೆಯಿದ್ದರೆ ಅಲ್ಲೊಂದು ಪುಟ್ಟ ವಾಚನಾಲಯವೇ ಉಗಮಿಸುತ್ತದೆ. ನಿಯತಕಾಲಿಕಗಳು ಹಾಗೂ ಪುಸ್ತಕಗಳು ಅವುಗಳ ಜೊತೆಗೂಡಿದಲ್ಲಿ ಆಹ್ಲಾದಕರ ವಾತಾವರಣ ಏರ್ಪಡುತ್ತದೆ.

ವಾಚಕರ ವಾಣಿ

ಅಂಗೈ ಹುಣ್ಣಿಗೆ 'ಸ್ಕೈಡೆಕ್' ಕನ್ನಡಿ

ಕೊನೆಗೂ 250 ಮೀಟರ್ ಎತ್ತರದ 'ಸ್ಕೈಡೆಕ್' (ಬಾನಟ್ಟಣಿಗೆ) ಹೆಸರಿನ ವೀಕ್ಷಣಾ ಸ್ತಂಭವನ್ನು ಕೆಂಗೇರಿ ಆಚಿನ 'ನಾಡಪ್ರಭು ಕೆಂಪೇಗೌಡ' ಬಡಾವಣೆಯಲ್ಲಿ ನಿರ್ಮಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಪ್ರವಾಸಿಗರ ಆಕರ್ಷಣೆಗೆಂದು ದುಬೈ ಮತ್ತು ಟೊರಂಟೊದಲ್ಲಿ ಇರುವಂಥದ್ದೇ ಮಾದರಿಯ ಈ ಸ್ತಂಭವನ್ನು ಏರಿ ನಿಂತರೆ ಇಡೀ ಬೆಂಗಳೂರು ಕಾಣುತ್ತದಂತೆ. ಕಾಣುವುದೇನು? ಹೊಗೆ ಮತ್ತು ದೂಳಿನಿಂದಾಗಿ ಕಬ್ಬನ್‌ಪಾರ್ಕ್, ವಿಧಾನಸೌಧ ಎಲ್ಲವೂ ಮಬ್ಬಾಗಿ ಕಾಣುತ್ತವೆ.ಸಮೀಪದಲ್ಲಿಕರ್ರಗೆಹರಿಯುವವೃಷಭಾವತಿ,ಎರ್ರಾಬಿರ್ರಿಸಂಚಾರದಟ್ಟಣೆಯಮೈಸೂರುರಸ್ತೆಸ್ಪಷ್ಟವಾಗಿಕಾಣಬಹುದು. ದೂರದ ಮಾಗಡಿ, ರಾಮನಗರದ ಬೃಹತ್ ಬಂಡೆಗಳನ್ನು ಜಲ್ಲಿಕಲ್ಲುಗಳಿಗಾಗಿ ಪುಡಿ ಮಾಡುತ್ತಿರುವ ದೃಶ್ಯಗಳು ಕಾಣುತ್ತವೆ. ಹಸಿರು ತೋಟಗಳನ್ನು ಹೊಸಕಿ, ಕೆರೆಗಳನ್ನು ಖಾಲಿ ಮಾಡಿದ ಮರುಭೂಮಿಸದೃಶ ವಿಶ್ವೇಶ್ವರಯ್ಯ ಮತ್ತು ನಾಡಪ್ರಭು ಕೆಂಪೇಗೌಡ ಬಡಾವಣೆಗಳು ಕಾಣುತ್ತವೆ. ದುರ್ಬೀನು ಹಚ್ಚಿ ನೋಡಿದರೆ, 460 ಎಕರೆಗಳ ದಟ್ಟ ವನಸಿರಿಯ ರೋರಿಕ್ ಎಸ್ಟೇಟ್ ಕಾಣಬಹುದಿತ್ತೋ ಏನೊ; ಆದರೆ ಅದನ್ನೂ ಧ್ವಂಸ ಮಾಡಲು ಪ್ರವಾಸೋದ್ಯಮ ಇಲಾಖೆ ಕೈಹಾಕುತ್ತಿದೆ. ಅವಸರದಲ್ಲಿ ಅವಲಕ್ಷಣದ ಅಂಗೈ ತೋರಿಸುವ ಬದಲು ಬೆಂಗಳೂರಿನ ಕಳಂಕವನ್ನೆಲ್ಲ ತೊಳೆದ ನಂತರವೇ ಈ ಕೀರ್ತಿಕಳಶ ನಿರ್ಮಾಣವಾದರೆ ಒಳ್ಳೆಯದೇನೊ.

ನಾಗೇಶ ಹೆಗಡೆ, ಕೆಂಗೇರಿ

ರಾಜಕೀಯ ಹೇಳಿಕೆ: ಬೇಕು ವಿಶಾಲ ದೃಷ್ಟಿಕೋನ

'ವಲ್ಲಭಭಾಯಿ ಪಟೇಲ್ ಅಥವಾ ಅಂಬೇಡ್ಕರ್ ಅವರು ಭಾರತದ ಮೊದಲ ಪ್ರಧಾನಿ ಆಗಿದ್ದರೆ ಈ ವೇಳೆಗೆ ಭಾರತವು ಅಭಿವೃದ್ಧಿಯಲ್ಲಿ ಅಮೆರಿಕವನ್ನು ಹಿಂದೆ ಹಾಕುತ್ತಿತ್ತು' ಎಂದು ಬಿಜೆಪಿ ನಾಯಕ ಎನ್.ರವಿಕುಮಾರ್ ಇತ್ತೀಚೆಗೆ ಕಲಬುರಗಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. 'ರೆ' ಪ್ರಪಂಚದಲ್ಲಿ ಏನು ಬೇಕಾದರೂ ಆಗಬಹುದು. ಆದರೆ ವಾಸ್ತವವಾಗಿ 'ಉಕ್ಕಿನ ಮನುಷ್ಯ' ಪಟೇಲರು 1950ರಲ್ಲೇ ನಿಧನರಾದರು, ಅಂಬೇಡ್ಕರ್ 1956ರಲ್ಲಿ ನಿಧನರಾದರು. ನೆಹರೂ 1964ರವರೆಗೆ ಇದ್ದರು. ಮೂಲತಃ ಈ ಬಗೆಯ ಹೋಲಿಕೆಯೇ ತಪ್ಪು. 1947ರಲ್ಲಿ ಭಾರತಕ್ಕೆ ಆಂತರಿಕ ಅಷ್ಟೇ ಅಲ್ಲ ಬಾಹ್ಯ ಸವಾಲುಗಳೂ ಇದ್ದವು. ಗೃಹ ಸಚಿವರಾಗಿ ಪಟೇಲರು ಸಂಸ್ಥಾನಗಳನ್ನು ಭಾರತದ ಒಕ್ಕೂಟದೊಳಕ್ಕೆ ತರುವ ಅದ್ಭುತ ಕೆಲಸ ಮಾಡಿದರು. ವಿದೇಶಾಂಗ ವಿಷಯಗಳಲ್ಲಿ ನೆಹರೂ ಕೆಲವದರಲ್ಲಿ ಗೆದ್ದರು, ಇನ್ನು ಕೆಲವದರಲ್ಲಿ (ಉದಾಹರಣೆಗೆ ಚೀನಾ) ಸೋತರು. ಗಾಂಧೀಜಿಗೆ ಈ ಇಬ್ಬರ ಬಗೆಗೂ ಅಭಿಮಾನ, ವಿಶ್ವಾಸ ಇತ್ತು. ಆದರೆ ದೀರ್ಘಕಾಲದ ಸ್ಥಿರತೆಯ ದೃಷ್ಟಿಯಿಂದ (ಪಟೇಲರ ಅನಾರೋಗ್ಯದ ಬಗೆಗಿನ ಮಾಹಿತಿ ಅವರಿಗೆ ಇತ್ತೆನ್ನಲಾಗಿದೆ) ನೆಹರೂ ಅವರನ್ನು ಬೆಂಬಲಿಸಿದರು.

ಅಂಬೇಡ್ಕರ್ ಅವರ ಅಧ್ಯಯನಶೀಲತೆ, ಶ್ರಮ ಯಾರೂ ಮೆಚ್ಚಬೇಕಾದುದು. ಆದರೆ ಅವರಿಗೆ ಪದವಿ ಮುಖ್ಯವಾಗಿರಲಿಲ್ಲ. ಅವರ ಮುಖ್ಯ ಧ್ಯೇಯ ಸಾಮಾಜಿಕ ಅಸಮಾನತೆಗಳನ್ನು ತೊಡೆದು ಹಾಕುವುದಾಗಿತ್ತು. ಹೀಗಾಗಿ, ಇಂತಹ ವಿಷಯಗಳ ಬಗ್ಗೆ ವಿಶಾಲವಾದ ದೃಷ್ಟಿಕೋನದಿಂದ ಯೋಚಿಸಿ ಮಾತನಾಡುವುದು ಅಗತ್ಯ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

'ಜೀವನ ಪರೀಕ್ಷೆ'ಗಿರಲಿ ಮಹತ್ವ

'ಪರೀಕ್ಷಾ ಫಲಿತಾಂಶ: ಭವಿಷ್ಯದ ಅಳತೆಗೋಲಲ್ಲ' ಎಂಬ ರೇವಣ್ಣ ಎಂ.ಜಿ. ಅವರ ಲೇಖನ (ಸಂಗತ, ಮೇ 25) ಸಕಾಲಿಕವಾಗಿದೆ. ನಾಲ್ಕು ದಶಕಗಳ ಕಾಲ ಶಿಕ್ಷಕನಾಗಿ ಕೆಲಸ ಮಾಡಿದ ನನಗೆ, ಹೀಗೆ ಅನುತ್ತೀರ್ಣರಾದ ವಿದ್ಯಾರ್ಥಿಗಳು ಸಮಾಜಕ್ಕೆ ಸಮಸ್ಯೆಯಾಗಿದ್ದೇ ಕಾಣಲಿಲ್ಲ. ಬದಲಾಗಿ, ಉತ್ತೀರ್ಣರಾಗಿ ಹೋದವರಿಗಿಂತ ಮೊದಲು ಬದುಕಿನ ಜಾಡು ಹಿಡಿದು, ಜೀವನ ಪರೀಕ್ಷೆಯಲ್ಲಿ ಯಶಸ್ವಿಯಾದ ಅನೇಕರನ್ನು ಕಂಡಿದ್ದೇನೆ. ಮಕ್ಕಳು ಅನುತ್ತೀರ್ಣರಾಗುವುದಕ್ಕೆ ಬಡತನ, ಶಿಕ್ಷಣದ ಮಹತ್ವ ಅರಿಯದ ಪೋಷಕರು, ಅಲೆಮಾರಿ ಅಥವಾ ಅತಂತ್ರ ಕುಟುಂಬ, ಅವ್ಯವಸ್ಥಿತ ಪ್ರಾಥಮಿಕ ಶಿಕ್ಷಣ, ಅನಾರೋಗ್ಯ, ಕೆಲವು ಬಾರಿ ಶಿಕ್ಷಕರ ಒತ್ತಡ, ಸಹಪಾಠಿಗಳಿಂದ ಅವಮಾನದಂತಹ ಅಂಶಗಳು ಕಾರಣವಾಗುತ್ತವೆ. ಮತ್ತೆ ಕೆಲವು ಸಂದರ್ಭಗಳಲ್ಲಿ, ಅತಿ ಹೆಚ್ಚು ಹೋಂವರ್ಕ್ ಕೊಡುವುದು, ಇತರ ಮಕ್ಕಳ ಮುಂದೆ ಅವಮಾನ ಮಾಡುವ ಶಿಕ್ಷಕರ ಧೋರಣೆಯಿಂದಲೂ ಓದುವ ಮಕ್ಕಳು ಅಧೈರ್ಯಕ್ಕೆ ಒಳಗಾಗುವುದನ್ನು ಕಂಡಿದ್ದೇವೆ.

ಶೈಕ್ಷಣಿಕವಾಗಿ ಹಿಂದೆ ಉಳಿಯಬಾರದೆಂಬ ಕಾರಣದಿಂದ ಅಧಿಕಾರಿಗಳು ಶಾಲೆಗಳ ಮೇಲೆ ಪರೋಕ್ಷವಾಗಿ ವಿಪರೀತ ಒತ್ತಡ ಹೇರುವುದು ಸರ್ವೇ ಸಾಮಾನ್ಯ. ಜೊತೆಗೆ ತಮ್ಮ ಮಕ್ಕಳ ಪರೀಕ್ಷಾ ಫಲಿತಾಂಶವೇ ಕುಟುಂಬದ ಗೌರವ ಎನ್ನುವಂತೆ ಪೋಷಕರು ಮಕ್ಕಳ ಮೇಲೆ ಇನ್ನಿಲ್ಲದ ಒತ್ತಡ ಹೇರಿ, ಅವರು ಮಾನಸಿಕ ಆಘಾತಕ್ಕೆ ಒಳಗಾಗಲು ಕಾರಣರಾಗುತ್ತಿದ್ದಾರೆ. ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ವೃತ್ತಿಶಿಕ್ಷಣಕ್ಕೆ ಒತ್ತು ಕೊಡಬೇಕಾದ ಅಗತ್ಯವಿದೆ. ತಾವು ಬಯಸುವ ವೃತ್ತಿಪ್ರಾವೀಣ್ಯ ಪಡೆಯಲು ದಾರಿ ಮಾಡಿಕೊಡಬೇಕು. ನಮ್ಮ ಸಮಾಜದಲ್ಲಿ ವೈವಿಧ್ಯಮಯ ಕಾರ್ಯ ಚಟುವಟಿಕೆಗಳು ನಡೆಯುತ್ತವೆ. ಅದಕ್ಕೆ ತಕ್ಕ ಜನ ಬೇಕೇ ಬೇಕು. ಅದೆಲ್ಲದಕ್ಕೂ ಬೋರ್ಡ್ ಪರೀಕ್ಷೆಯೇ ಕಡ್ಡಾಯ ಎನ್ನುವ ಮನಃಸ್ಥಿತಿಯಿಂದ ನಾವು ಹೊರಬರಬೇಕಾಗಿದೆ.

ತಿರುಪತಿ ನಾಯಕ್, ಕಲಬುರಗಿ

ಕಲಾಪಕ್ಕೆ ಅಡ್ಡಿಪಡಿಸಿ ಸಾಧಿಸಿದ್ದೇನು?

ಬಜೆಟ್ ಅಧಿವೇಶನದ ಕೊನೇ ದಿನವಾದ ಮಾರ್ಚ್ 21ರಂದು ಕಲಾಪಕ್ಕೆ ಅಡ್ಡಿಪಡಿಸಿದ ಕಾರಣಕ್ಕೆ ಬಿಜೆಪಿಯ 18 ಶಾಸಕರನ್ನು ಆರು ತಿಂಗಳು ಅಮಾನತು ಮಾಡಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ನೀಡಿದ್ದ ರೂಲಿಂಗ್ ಅನ್ನು ಹಿಂಪಡೆದಿರುವುದಾಗಿ ವರದಿಯಾಗಿದೆ (ಪ್ರ.ವಾ., ಮೇ 26). ಆದರೆ ಬಹುಮುಖ್ಯವಾದ ಬಜೆಟ್ ಅಧಿವೇಶನದ ಚರ್ಚೆಯಲ್ಲಿ ಪಾಲ್ಗೊಂಡು, ಜನಸಾಮಾನ್ಯರಿಗೆ ಆಗಬಹುದಾದ ಅನ್ಯಾಯವನ್ನು ಸಕಾರಣವಾಗಿ, ಅಂಕಿಅಂಶಗಳ ಸಹಿತ ಎತ್ತಿಹಿಡಿಯುವ ಕೆಲಸವನ್ನು ಶಾಸಕರು ಮಾಡಬೇಕಾಗಿತ್ತು. ಆದರೆ ಅವರು ಹಾಗೆ ಮಾಡದೆ, ಅಂದು ಕಲಾಪಕ್ಕೆ ಅಡ್ಡಿಪಡಿಸಿ ಸಾಧಿಸಿದ್ದಾದರೂ ಏನು?

ವಿಧಾನಮಂಡಲದ ಕಲಾಪಕ್ಕೆ ಜನರ ತೆರಿಗೆಯಿಂದ ಸಂಗ್ರಹಿಸಿದ ಕೋಟ್ಯಂತರ ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ ವಿಧಾನಸಭೆಯ ಕಲಾಪವನ್ನು ಶಾಸಕರು 'ಆಡೋಣ ಬಾ...ಕೆಡಿಸೋಣ ಬಾ...' ಎಂಬ ಮಕ್ಕಳ ಆಟದಂತೆ ಪರಿಗಣಿಸುವುದು ತರವಲ್ಲ. ಇನ್ನು ಮುಂದಾದರೂ ಜನಪ್ರತಿನಿಧಿಗಳು ತಮ್ಮ ಹೊಣೆಗಾರಿಕೆ ಅರಿತು ಜನಪರವಾಗಿ ಧ್ವನಿ ಎತ್ತುವಂತೆ ಆಗಲಿ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಚೀನಾ ಎದುರಾಳಿ ಎದುರಿಸಲು ಹೇಗಿದೆ ಭಾರತದ ಸಿದ್ಧತೆ?



ಜಾಗತಿಕ ಮಟ್ಟದಲ್ಲಿ ವಿವಿಧ ರಾಷ್ಟ್ರಗಳ ನಡುವೆ ಎಂತಹ ಸಂಬಂಧವಿದೆ ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ಅವುಗಳ ಮುಖ್ಯ ಕಾಳಜಿ ಏನು ಎನ್ನುವುದರ ಬಗ್ಗೆ ಅಮೆರಿಕದ ರಕ್ಷಣಾ ಗುಪ್ತಚರ ಸಂಸ್ಥೆ (ಆರ್‌ಡಿಎ) ವರದಿಯೊಂದನ್ನು ಬಿಡುಗಡೆ ಮಾಡಿದೆ. ಭಾರತವು ಚೀನಾವನ್ನು ತನ್ನ ಪ್ರಮುಖ ಎದುರಾಳಿ ಎಂದು ಪರಿಗಣಿಸಿದ್ದರೆ, ಪಾಕಿಸ್ತಾನವು ಭಾರತವನ್ನು ತನ್ನ ಅಸ್ತಿತ್ವಕ್ಕೆ ದೊಡ್ಡ ಬೆದರಿಕೆ ಎಂದು ಪರಿಗಣಿಸಿದೆ ಎಂದು ವರದಿ ಉಲ್ಲೇಖಿಸಿದೆ. ಚೀನಾದೊಂದಿಗಿನ ಭಾರತದ ಸಂಬಂಧ ಸದ್ಯ ತಟಸ್ಥ ಸ್ಥಿತಿಯಲ್ಲಿದ್ದರೂ ಅದು ಭಾರತದ ಪಾಲಿಗೆ ಎಂದಿಗೂ ಮಗ್ಗುಲ ಮುಳ್ಳು ಎಂದಿದೆ. ಅದನ್ನು ಸಮರ್ಥವಾಗಿ ಎದುರಿಸಲು ಭಾರತ ಯಾವ ರೀತಿಯ ಸಿದ್ಧತೆಯಲ್ಲಿ ತೊಡಗಿದೆ ಎನ್ನುವುದನ್ನೂ ವರದಿಯಲ್ಲಿ ವಿವರಿಸಲಾಗಿದೆ

ಪಾಕಿಸ್ತಾನಕ್ಕೆ ಚೀನಾ ಅಭಯ

- ಪಾಕಿಸ್ತಾನ ಸೇನೆಯು ಮುಂದಿನ ವರ್ಷವೂ ನೆರೆ ರಾಷ್ಟ್ರಗಳೊಂದಿಗಿನ ಗಡಿಯಾಚೆಗಿನ ಸಂಘರ್ಷಕ್ಕೇ ಪ್ರಮುಖ ಆದ್ಯತೆ ನೀಡುವ ಸಾಧ್ಯತೆ ಹೆಚ್ಚಿದೆ. ಇದರೊಂದಿಗೆ, ಹೆಚ್ಚುತ್ತಿರುವ ತೆಹ್ರೀಕ್ ಎ–ತಾಲಿಬಾನ್ ಸಂಘಟನೆಯ ದಾಳಿಗಳು, ಬಲೂಚ್ ರಾಷ್ಟ್ರೀಯವಾದಿ ತೀವ್ರವಾದಿಗಳು ನಡೆಸುತ್ತಿರುವ ದಾಳಿಗಳು, ಭಯೋತ್ಪಾದನೆ ನಿಗ್ರಹ ಕ್ರಮಗಳು ಮತ್ತು ಅಣ್ವಸ್ತ್ರಗಳ ಆಧುನೀಕರಣಕ್ಕೆ ಹೆಚ್ಚಿನ ಒತ್ತು ನೀಡಬಹುದು
- ಭಾರತವು ತನ್ನ ಅಸ್ತಿತ್ವಕ್ಕೆ ಅತ್ಯಂತ ದೊಡ್ಡ ಬೆದರಿಕೆ ಎಂದು ನಂಬಿರುವ ಪಾಕಿಸ್ತಾನವು ಸೇನೆಯ ಆಧುನೀಕರಣಕ್ಕೆ ಹಾಕುತ್ತಿರುವ ಶ್ರಮವನ್ನು ಮುಂದುವರಿಸಲಿದೆ. ಸೇನಾ ಸಾಮರ್ಥ್ಯದಲ್ಲಿ ಭಾರತ ಹೊಂದಿರುವ ಮೇಲುಗೈಯನ್ನು ಸರಿದೂಗಿಸುವುದಕ್ಕಾಗಿ ಪರಮಾಣು ಅಸ್ತ್ರಗಳ ಅಭಿವೃದ್ಧಿ ಸೇರಿದಂತೆ ಇನ್ನಿತರ ಕ್ರಮಗಳನ್ನು ಅದು ಕೈಗೊಳ್ಳಲಿದೆ
- ಪಾಕಿಸ್ತಾನವು ತನ್ನ ಪರಮಾಣು ಶಸ್ತ್ರಾಸ್ತ್ರಗಳನ್ನು ಆಧುನೀಕರಣಗೊಳಿಸುತ್ತಿದೆ. ಪರಮಾಣು ವಸ್ತುಗಳನ್ನು, ಪರಮಾಣು ಅಸ್ತ್ರಗಳ ನಿಯಂತ್ರಣ ಹಾಗೂ ಅವುಗಳ ಭದ್ರತೆಯನ್ನು ನಿರ್ವಹಿಸುತ್ತಿದೆ. ಅದು ವಿದೇಶಿ ಪೂರೈಕೆದಾರರು ಮತ್ತು ಮಧ್ಯಸ್ಥಿಕೆ ವಹಿಸುವ ರಾಷ್ಟ್ರಗಳಿಂದ ಸಾಮೂಹಿಕ ವಿಧ್ವಂಸಕ ಅಸ್ತ್ರಗಳ (ಡಬ್ಲ್ಯುಎಂಡಿ) ಸರಕುಗಳನ್ನು ಖರೀದಿ ಮಾಡುತ್ತಿದೆ
- ಪಾಕಿಸ್ತಾನವು ಚೀನಾದ ಉದಾರ ಆರ್ಥಿಕ ಮತ್ತು ಸೇನಾ ಕೊಡುಗೆಯ ಮೊದಲ ಫಲಾನುಭವಿ. ಚೀನಾ ಸೇನೆ, ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ಜೊತೆ ಸೇರಿಕೊಂಡು ಪ್ರತಿ ವರ್ಷ ಸೇನಾ ತಾಲೀಮು ನಡೆಸುತ್ತಿದೆ. ಸಾಮೂಹಿಕ ವಿಧ್ವಂಸಕ ಅಸ್ತ್ರಗಳ ಅಭಿವೃದ್ಧಿಗೆ ಪೂರಕವಾದ ವಿದೇಶಿ ವಸ್ತುಗಳು ಮತ್ತು ತಂತ್ರಜ್ಞಾನ ನೆರವನ್ನು ಅದು ಚೀನಾದಿಂದಲೇ ಪಡೆದಿರುವ ಸಾಧ್ಯತೆ ಹೆಚ್ಚಿದೆ

ಪ್ರಜಾವಾಣಿ ವಾರ್ತೆ

ಪಹಲ್ಗಾಮ್ ಘಟನೆಯ ನಂತರ ಭಾರತ–ಪಾಕಿಸ್ತಾನದ ನಡುವೆ ಆರಂಭವಾಗಿದ್ದ ಸಂಘರ್ಷ ಮುಗಿದಿದೆ. ಕದನ ವಿರಾಮ ಏರ್ಪಟ್ಟಿದೆ. ಆದರೆ, ರಾಷ್ಟ್ರದ ಭದ್ರತೆಯ ವಿಚಾರದಲ್ಲಿ ಭಾರತ ನಿರಾಳವಾಗಿರುವ ಸ್ಥಿತಿಯಲ್ಲಿ ಇಲ್ಲ. ನೆರೆಯ ರಾಷ್ಟ್ರಗಳಾದ ಚೀನಾ ಮತ್ತು ಪಾಕಿಸ್ತಾನದ ಜತೆ ಭಾರತದ ಸಂಘರ್ಷಮಯ ಸಂಬಂಧ ಮುಂದುವರಿಯುತ್ತಿದೆ ಎಂದು ಅಮೆರಿಕದ ರಕ್ಷಣಾ ಗುಪ್ತಚರ ಸಂಸ್ಥೆ (ಡಿಐಎ) ವರದಿ ಹೇಳಿದೆ. ಪಾಕಿಸ್ತಾನದೊಂದಿಗೆ ನಿರಂತರ ಸಂಘರ್ಷ ನಡೆಯುತ್ತಿದ್ದರೂ ಭಾರತವು ಚೀನಾವನ್ನು ತನ್ನ ಪ್ರಮುಖ ಎದುರಾಳಿಯಾಗಿ ಪರಿಗಣಿಸಿದೆ. ಪಾಕಿಸ್ತಾನವು ದೇಶದ ಭದ್ರತೆಗೆ ಬೆದರಿಕೆಯಾಗಿದ್ದು, ಅದನ್ನು ನಿರ್ವಹಿಸಬಹುದಾಗಿದೆ ಎಂಬ ಅಭಿಪ್ರಾಯವನ್ನು ಭಾರತ ಹೊಂದಿದೆ ಎಂದು ವರದಿ ಹೇಳಿದೆ.

ಆದರೆ, ಪಾಕಿಸ್ತಾನವು ಭಾರತವನ್ನು ತನ್ನ ಅಸ್ತಿತ್ವಕ್ಕೆ ಇರುವ ದೊಡ್ಡ ಬೆದರಿಕೆ ಎಂದೇ ಪರಿಗಣಿಸಿದೆ. ಎರಡೂ ದೇಶಗಳು ತಮ್ಮ ಸೇನಾ ಸಾಮರ್ಥ್ಯ ಹೆಚ್ಚಿಸಿಕೊಳ್ಳುವ ಕಾರ್ಯದಲ್ಲಿ ನಿರತವಾಗಿವೆ. ಪಾಕಿಸ್ತಾನಕ್ಕೆ ಚೀನಾವು ಉದಾರ ಆರ್ಥಿಕ, ರಕ್ಷಣಾ ನೆರವು ನೀಡುತ್ತಿದೆ. ಅದರ ಸೇನಾ ಆಧುನೀಕರಣಕ್ಕೆ ಚೀನಾ ಬೆಂಬಲವಾಗಿ ನಿಂತಿದೆ ಎಂದು ವರದಿ ವಿವರಿಸಿದೆ.

ಅಮೆರಿಕದ ಸಂಸತ್ತಿನ ಸಶಸ್ತ್ರ ಸೇವೆಗಳ ಉಪಸಮಿತಿಗಾಗಿ ಇದೇ ಮೇ 11ರವರೆಗಿನ ಮಾಹಿತಿ–ಅಂಕಿಅಂಶ ಆಧರಿಸಿ ಡಿಐಎ ವರದಿ ಸಿದ್ಧಪಡಿಸಿದೆ. ಜಾಗತಿಕ ಮಟ್ಟದಲ್ಲಿ ನಾಯಕತ್ವವನ್ನು ಪ್ರದರ್ಶಿಸುವುದು, ಚೀನಾವನ್ನು ಎದುರಿಸುವುದು ಮತ್ತು ದೇಶದ ಸೇನಾ ಶಕ್ತಿಯನ್ನು ಬಲಪಡಿಸುವುದು ಪ್ರಧಾನಿ ನರೇಂದ್ರ ಮೋದಿ ಅವರ ರಕ್ಷಣಾ ಆದ್ಯತೆಗಳಾಗಿವೆ ಎಂದು ವರದಿ ಉಲ್ಲೇಖಿಸಿದೆ.

ಬಗೆಹರಿಯದ ಚೀನಾ ಗಡಿ ವಿವಾದ: ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯ ವಿವಾದಾಸ್ಪದ ಪ್ರದೇಶದಿಂದ ತಮ್ಮ ಪಡೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ 2024ರ ಅಕ್ಟೋಬರ್‌ನಲ್ಲಿ ಚೀನಾ ಮತ್ತು ಭಾರತದ ನಡುವೆ ಒಪ್ಪಂದ ಏರ್ಪಟ್ಟಿತ್ತು. ಅದರಿಂದ 2020ರ ನಂತರದಲ್ಲಿ ಎರಡೂ ದೇಶಗಳ ನಡುವೆ ಉಂಟಾಗಿದ್ದ ಉದ್ವಿಗ್ನ ಸ್ಥಿತಿ ಶಮನಗೊಂಡಿತ್ತು. ಆದರೆ, ದೀರ್ಘಕಾಲದಿಂದ ಇರುವ ಗಡಿ ಗುರುತಿಸುವಿಕೆಯ ವಿವಾದ ಇನ್ನೂ ಬಗೆಹರಿದಿಲ್ಲ ಎಂದಿದೆ.

ಚೀನಾದ ಪ್ರಭಾವವನ್ನು ಎದುರಿಸುವುದು ಮತ್ತು ತನ್ನ ಜಾಗತಿಕ ನಾಯಕತ್ವದ ಪಾತ್ರವನ್ನು ಸಮರ್ಥವಾಗಿ ಪೋಷಿಸುವುದು ಭಾರತದ ಉದ್ದೇಶ. ಈ ದಿಸೆಯಲ್ಲಿ ಸೇನಾ ಅಭ್ಯಾಸ, ತರಬೇತಿ, ಶಸ್ತ್ರಾಸ್ತ್ರ ಮಾರಾಟ ಮತ್ತು ಮಾಹಿತಿ ಹಂಚಿಕೆಯ ಮೂಲಕ ಹಿಂದೂ ಮಹಾಸಾಗರ ಪ್ರದೇಶದಲ್ಲಿ ದ್ವಿಪಕ್ಷೀಯ ರಕ್ಷಣಾ ಸಹಭಾಗಿತ್ವಕ್ಕೆ ಆದ್ಯತೆ ನೀಡುತ್ತಿದೆ; ಹಾಗೆಯೇ ಭಾರತವು ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ತ್ರಿಪಕ್ಷೀಯ ಪಾಲುದಾರಿಕೆಗೆ ಒತ್ತು ನೀಡುತ್ತಿದ್ದು, ಬ್ರಿಕ್ಸ್, ಶಾಂಘೈ ಸಹಕಾರ ಸಂಘಟನೆ ಮತ್ತು ಆಸಿಯಾನ್‌ನಂಥ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದೆ ಎಂದು ವರದಿ ಹೇಳಿದೆ.

ಸೇನಾ ಆಧುನೀಕರಣಕ್ಕೆ ಒತ್ತು: ಭಾರತವು 2024ರಲ್ಲಿ ಅಣ್ವಸ್ತ್ರ ಸಾಮರ್ಥ್ಯದ ಹೊಸ ಪೀಳಿಗೆಯ ಖಂಡಾಂತರ ಕ್ಷಿಪಣಿ ಅಗ್ನಿ–1 ಪ್ರೈಮ್, ಅಗ್ನಿ–5 ಮತ್ತು ಪರಮಾಣು ಚಾಲಿತ, ಗುರಿ ನಿರ್ದೇಶಿತ ಎರಡನೇ ಜಲಾಂತರ್ಗಾಮಿ ನೌಕೆಯನ್ನು ಯಶಸ್ವಿಯಾಗಿ ಪರೀಕ್ಷಿಸುವ ಮೂಲಕ ಸೇನೆಯ ಆಧುನೀಕರಣ ಕಾರ್ಯವನ್ನು ಮುಂದುವರಿಸಿತ್ತು. ಈ ವರ್ಷವೂ ದೇಶೀಯ ರಕ್ಷಣಾ ಉದ್ಯಮವನ್ನು ಬಲಪಡಿಸಲು, ಅವುಗಳ ಪೂರೈಕೆ ವ್ಯವಸ್ಥೆಯಲ್ಲಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಮತ್ತು ತನ್ನ ಸೇನೆಯನ್ನು ಆಧುನಿಕಗೊಳಿಸಲು 'ಮೇಡ್ ಇನ್ ಇಂಡಿಯಾ'ಕ್ಕೆ ಉತ್ತೇಜನ ನೀಡಲಿದೆ ಎಂದು ಡಿಐಎ ಹೇಳಿದೆ.

ರಷ್ಯಾ ಜತೆಗಿನ ಸಂಬಂಧ: ವರದಿಯ ಪ್ರಕಾರ, 2025ರಲ್ಲೂ ಭಾರತವು ರಷ್ಯಾದೊಂದಿಗೆ ತನ್ನ ಸಂಬಂಧವನ್ನು ಮುಂದುವರಿಸಲಿದ್ದು, ರಷ್ಯಾ ಜತೆಗಿನ ಒಪ್ಪಂದಗಳು ತನ್ನ ಆರ್ಥಿಕ ಮತ್ತು ರಕ್ಷಣಾ ಉದ್ದೇಶಗಳ ಈಡೇರಿಕೆಯ ದೃಷ್ಟಿಯಿಂದ ಮುಖ್ಯವಾಗಿವೆ ಎಂದು ಭಾವಿಸಿದೆ. ಅಲ್ಲದೇ ರಷ್ಯಾ–ಚೀನಾ ಸಂಬಂಧವು ಗಾಢವಾಗುತ್ತಿದ್ದು, ಈ ದೃಷ್ಟಿಯಿಂದಲೂ ಭಾರತಕ್ಕೆ ರಷ್ಯಾ ಜೊತೆಗಿನ ಸಂಬಂಧ ಮುಖ್ಯವಾಗಿದೆ. ಮೋದಿ ಆಡಳಿತದಲ್ಲಿ ರಷ್ಯಾ ಮೂಲದ ಶಸ್ತ್ರಾಸ್ತ್ರ ಖರೀದಿ ಕಡಿಮೆಯಾಗಿದೆ. ಆದರೂ, ಭಾರತವು ಚೀನಾ ಮತ್ತು ಪಾಕಿಸ್ತಾನವನ್ನು ಎದುರಿಸಲು ಅಗತ್ಯವಾದ ರಷ್ಯಾ ನಿರ್ಮಿತ ಸೇನಾ ಟ್ಯಾಂಕ್‌ಗಳು, ಯುದ್ಧವಿಮಾನಗಳ ಬಿಡಿಭಾಗಗಳಿಗಾಗಿ ರಷ್ಯಾವನ್ನು ಅವಲಂಬಿಸಿದೆ ಎಂದು ವರದಿ ಹೇಳಿದೆ.

ಚೀನಾದ ಉದ್ದೇಶ ಮತ್ತು ಪ್ರಯತ್ನ: ಅಮೆರಿಕದ ಪ್ರಮುಖ ಎದುರಾಳಿ ಎಂದೇ ಗುರುತಿಸಲಾಗುವ ಚೀನಾದ ಚಟುವಟಿಕೆಗಳ ಬಗ್ಗೆಯೂ ವರದಿಯಲ್ಲಿ ದೀರ್ಘವಾಗಿ ಪ್ರಸ್ತಾಪಿಸಲಾಗಿದೆ. ಚೀನಾವು ಪೂರ್ವ ಏಷ್ಯಾದ ಪ್ರಬಲ ಶಕ್ತಿಯಾಗಿ ಹೊರಹೊಮ್ಮುವ ಗುರಿಯೊಂದಿಗೆ ಮುನ್ನುಗ್ಗುತ್ತಿದೆ; ಶತಮಾನದ ಮಧ್ಯಭಾಗದ ಹೊತ್ತಿಗೆ ಚೀನಾದೊಂದಿಗೆ ತೈವಾನ್ ಅನ್ನು ವಿಲೀನ ಮಾಡುವುದು, ಆರ್ಥಿಕತೆಯಲ್ಲಿ ಪ್ರಗತಿ ಮತ್ತು ಸ್ಥಿರತೆ ಸಾಧಿಸುವುದು, ತಾಂತ್ರಿಕವಾಗಿ ಸ್ವಾವಲಂಬನೆ ಸಾಧಿಸುವುದು ಅವರ ಮುಖ್ಯ ಉದ್ದೇಶವಾಗಿದೆ ಎಂದಿದೆ.

ಜಾಗತಿಕವಾಗಿ ರಾಜತಾಂತ್ರಿಕ ನೆಲೆಯಲ್ಲಿ, ಮಾಹಿತಿ, ಸೇನಾ ಮತ್ತು ಆರ್ಥಿಕ ವಲಯಗಳಲ್ಲಿ ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳನ್ನು ಎದುರಿಸಲು ಚೀನಾ ತನ್ನ ಸಿದ್ಧತೆಗಳನ್ನು ಮುಂದುವರಿಸಿದೆ. ಜತೆಗೆ, ಅಮೆರಿಕದ ರಕ್ಷಣಾ ಪಾಲುದಾರರಿಗೆ ಸಹಕಾರ ನೀಡದಿರುವುದೂ ಅದರ ಆದ್ಯತೆಯಾಗಿದೆ. ಅಮೆರಿಕ ಏನಾದರೂ ಈ ವರ್ಷ ಸಂಘರ್ಷಕ್ಕೆ ಮುಂದಾದರೆ, ಅದನ್ನು ಎದುರಿಸಲು, ಮಣಿಸಲು ಸಿದ್ಧತೆ ಮಾಡಿಕೊಳ್ಳಲಿದೆ. ಚೀನಾವು ತನ್ನ ಹಿಡಿತದಲ್ಲಿರುವ ಫಿಲಿಪ್ಪೀನ್ಸ್, ತೈವಾನ್ ಮತ್ತು ಇತರ ರಾಷ್ಟ್ರಗಳ ಮೇಲೆ ಒತ್ತಡ ತಂತ್ರಗಳನ್ನು ಮುಂದುವರಿಸಲಿದೆ. ಮುಖ್ಯವಾಗಿ, ಬಿಕ್ಕಟ್ಟು ನಿವಾರಣೆಗೆ ಅಮೆರಿಕ ಅಸಮರ್ಥವಾಗಿದೆ ಎಂದು ನಿರೂಪಿಸುವ ಮೂಲಕ ತಾನು ಹೆಚ್ಚು ಜವಾಬ್ದಾರಿಯುತ ಜಾಗತಿಕ ನಾಯಕ ಎಂದು ಬಿಂಬಿಸಿಕೊಳ್ಳುವ ಉದ್ದೇಶ ಹೊಂದಿದೆ ಎಂದು ರಕ್ಷಣಾ ಗುಪ್ತಚರ ಸಂಸ್ಥೆ ಹೇಳಿದೆ.

ಚೀನಾದ ಸೇನಾ ಸಾಮರ್ಥ್ಯ




ಚೀನಾದ ಸೇನಾ ಸಾಮರ್ಥ್ಯ, ಅದರ ರಕ್ಷಣಾ ವೆಚ್ಚ ಹಾಗೂ ಜಾಗತಿಕವಾಗಿ ವಿವಿಧ ರಾಷ್ಟ್ರಗಳಲ್ಲಿ ಅದು ಸೇನಾ ಚಟುವಟಿಕೆಗಳನ್ನು ನಡೆಸಲು ರೂಪಿಸಿರುವ ಯೋಜನೆಗಳ ಬಗ್ಗೆಯೂ ವರದಿ ಪ್ರಸ್ತಾಪಿಸಿದೆ.

- ಚೀನಾವು ಸೇನೆಯ ಆಧುನೀಕರಣವನ್ನು ತ್ವರಿತಗೊಳಿಸುತ್ತಿದೆ. ಬಲವಂತವಾಗಿ ತೈವಾನ್ ಅನ್ನು ವಶಪಡಿಸಿಕೊಳ್ಳುವುದಕ್ಕಾಗಿ, ಪಶ್ಚಿಮ ಪೆಸಿಫಿಕ್ ವ್ಯಾಪ್ತಿಯಲ್ಲಿ ತಾನು ಶಕ್ತಿಯುತ ರಾಷ್ಟ್ರ ಎಂದು ಬಿಂಬಿಸುವುದಕ್ಕಾಗಿ ಮತ್ತು ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದ ಬಿಕ್ಕಟ್ಟಿನಲ್ಲಿ ಮಧ್ಯಪ್ರವೇಶಿಸುವ ಅಥವಾ ಅಲ್ಲಿ ತನ್ನ ಉಪಸ್ಥಿತಿಗೆ ಅಮೆರಿಕ ಮಾಡುತ್ತಿರುವ ಯತ್ನವನ್ನು ತಡೆಯುವ ಉದ್ದೇಶದಿಂದ ಚೀನಾವು ಯುದ್ಧದ ಎಲ್ಲ ವಿಭಾಗಗಳಲ್ಲೂ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಿದೆ. 2027 ಮತ್ತು 2035ರ ಹೊತ್ತಿಗೆ ಸೇನೆಯಲ್ಲಿ ಭಾರಿ ಪರಿವರ್ತನೆ ತರುವುದಕ್ಕೆ ಹಾಕಿಕೊಂಡಿರುವ ಗುರಿಗಳನ್ನು ತಲುಪುವ ನಿಟ್ಟಿನಲ್ಲಿ ಚೀನಾದ ನಾಯಕರು ಒತ್ತಡ ಹಾಕುತ್ತಿದ್ದಾರೆ
- ಪಿಎಲ್‌ಎಯ ವಾಯು ಪಡೆ ಮತ್ತು ನೌಕಾ ವಿಮಾನ ಪಡೆಗಳು ತಾಂತ್ರಿಕವಾಗಿ ಇನ್ನಷ್ಟು ಆಧುನೀಕರಣಗೊಂಡಿದ್ದು, ಹೆಚ್ಚು ಪರಿಣಾಮಕಾರಿಯೂ ಆಗಿವೆ
- ಜಾಗತಿಕ ಮಟ್ಟದಲ್ಲಿ ತನ್ನ ಸೇನೆಯ ಉಪಸ್ಥಿತಿ ಇರುವಂತೆ ಮಾಡಲು ಚೀನಾ ಬಯಸುತ್ತಿದ್ದು ವಿವಿಧ ದೇಶಗಳಲ್ಲಿ ಸೇನಾ ಕಾರ್ಯಾಚರಣೆ, ಸೇನಾ ನೆಲೆಗಳನ್ನು ಸ್ಥಾಪಿಸಲು ಯೋಜನೆ ರೂಪಿಸುತ್ತಿದೆ. 2024ರಲ್ಲಿ ತಾಂಜಾನಿಯಾದಲ್ಲಿ ದೊಡ್ಡ ಮಟ್ಟದ ಸೇನಾ ತಾಲೀಮನ್ನು ಚೀನಾ ನಡೆಸಿತ್ತು. ಈ ವರ್ಷ ಕಾಂಬೋಡಿಯಾದ ರೀಮ್ ನೌಕಾ ನೆಲೆಯಲ್ಲಿ ಸರಕು ಮತ್ತು ತರಬೇತಿ ಕೇಂದ್ರವನ್ನು ಚೀನಾ ಮತ್ತು ಕಾಂಬೋಡಿಯಾ ಜಂಟಿಯಾಗಿ ಉದ್ಘಾಟನೆ ಮಾಡಿವೆ. ಅಲ್ಲಿ ಎರಡು ಯುದ್ಧ ನೌಕೆಗಳನ್ನೂ ಚೀನಾ ನಿಯೋಜಿಸಿತ್ತು. ಮ್ಯಾನ್ಮಾರ್, ಥಾಯ್ಲೆಂಡ್, ಇಂಡೊನೇಷ್ಯಾ, ಪಾಕಿಸ್ತಾನ, ಶ್ರೀಲಂಕಾ, ಯುಎಇ, ಕ್ಯೂಬಾ, ಕೆನ್ಯಾ, ಗಿನಿಯಾ, ಸೀಶೆಲ್ಸ್ ತಾಂಜಾನಿಯಾ, ಅಂಗೋಲಾ, ನೈಜೀರಿಯಾ, ನಮೀಬಿಯಾ, ಮೊಜಾಂಬಿಕ್, ಗಾಬನ್, ಬಾಂಗ್ಲಾದೇಶ, ಪಪುವಾ ನ್ಯೂ ಗಿನಿಯಾ, ಸೊಲೊಮನ್ ದ್ವೀಪಗಳು ಮತ್ತು ತಜಕಿಸ್ತಾನಗಳಲ್ಲಿ ಸೇನಾ ನೆಲೆ ಸ್ಥಾಪಿಸಲು ಚೀನಾ ಉದ್ದೇಶಿಸಿದೆ

600ಕ್ಕೂ ಹೆಚ್ಚು ಕಾರ್ಯಾಚರಣೆ ಸನ್ನದ್ಧ ಅಣ್ವಸ್ತ್ರ ಸಿಡಿತಲೆಗಳಿದ್ದು 2030ರ ಹೊತ್ತಿಗೆ ಈ ಸಂಖ್ಯೆ **1,000** ದಾಟಲಿದೆ


ಚೀನಾ ಬತ್ತಳಿಕೆಯಲ್ಲಿನ ಕ್ಷಿಪಣಿಗಳು

ಚೀನಾದ ಪಿಎಲ್‌ಎ ರಾಕೆಟ್ ಪಡೆಯು 2024ರಲ್ಲಿ ವಿವಿಧ ವ್ಯಾಪ್ತಿಯಲ್ಲಿ ದಾಳಿ ಮಾಡುವ ಸಾಮರ್ಥ್ಯ ಹೊಂದಿರುವ 3,500ರಷ್ಟು ಕ್ಷಿಪಣಿಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿತ್ತು ಎಂದು ವರದಿ ಹೇಳಿದೆ.



ರಾಷ್ಟ್ರೀಯ

ದಾಳಿಯ ಬಳಿಕವಷ್ಟೇ ಪಾಕ್‌ಗೆ ಮಾಹಿತಿ: ಜೈಶಂಕರ್ ಸ್ಪಷ್ಟನೆ



ನವದೆಹಲಿ: ಒಂಬತ್ತು ಭಯೋತ್ಪಾದಕ ಶಿಬಿರಗಳ ಮೇಲೆ ದಾಳಿ ನಡೆಸಿದ ಬಳಿಕವಷ್ಟೇ 'ಆಪರೇಷನ್ ಸಿಂಧೂರ'ದ ಬಗ್ಗೆ ಪಾಕಿಸ್ತಾನಕ್ಕೆ ಮಾಹಿತಿ ನೀಡಲಾಗಿತ್ತು ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಸಂಸದೀಯ ಸಮಿತಿಯೊಂದಕ್ಕೆ ಸೋಮವಾರ ತಿಳಿಸಿದ್ದಾರೆ.

ಈ ಬಗ್ಗೆ ತಾವು ಹಿಂದೆ ನೀಡಿದ್ದ ಹೇಳಿಕೆಯನ್ನು 'ತಿರುಚುವ' ಮತ್ತು 'ತಪ್ಪಾಗಿ ನಿರೂಪಿಸುವ' ಕೆಲಸ ನಡೆದಿತ್ತು ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ. ವಿದೇಶಾಂಗ ವ್ಯವಹಾರಗಳಿಗೆ ಸಂಬಂಧಿಸಿದ ಸಲಹಾ ಸಮಿತಿಯ ಸಭೆಯಲ್ಲಿ ಸಂಸದರ ಪ್ರಶ್ನೆಗೆ ಉತ್ತರಿಸಿದ ಅವರು, 'ನನ್ನ ಹೇಳಿಕೆಯನ್ನು ಸಾಮಾಜಿಕ ಮಾಧ್ಯಮಗಳಲ್ಲಿ ತಿರುಚಿ ಪ್ರಚಾರ ಮಾಡಲಾಗಿದೆ. ದಾಳಿಯ ಬಗ್ಗೆ ಪಾಕಿಸ್ತಾನಕ್ಕೆ ಮುಂಚಿತವಾಗಿ ಮಾಹಿತಿ ನೀಡಲಾಗಿತ್ತು ಎಂದು ನಾನು ಹೇಳಿಯೇ ಇಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

'ಕದನ ವಿರಾಮ ನಿರ್ಧಾರದಲ್ಲಿ ಅಮೆರಿಕದ ಯಾವುದೇ ಹಸ್ತಕ್ಷೇಪ ಇಲ್ಲ. ಪಾಕಿಸ್ತಾನದಿಂದ ಕೋರಿಕೆ ಬಂದ ಬಳಿಕ ಉಭಯ ದೇಶಗಳ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರ (ಡಿಜಿಎಂಒ) ನಡುವಿನ ಮಾತುಕತೆ ನಂತರ ಒಪ್ಪಂದಕ್ಕೆ ಬರಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಭಯೋತ್ಪಾದನೆ ಮುಕ್ತ ವ್ಯಾಪಾರ: 'ಪಾಕಿಸ್ತಾನದಲ್ಲಿ ಭಯೋತ್ಪಾದನೆಯು ಮುಕ್ತ ವ್ಯಾಪಾರವಾಗಿದೆ. ಅಲ್ಲಿನ ಮಿಲಿಟರಿ ಮತ್ತು ಆಡಳಿತವು ಭಯೋತ್ಪಾದನಾ ಚಟುವಟಿಕೆಗಳಿಗೆ ಹಣಕಾಸಿನ ನೆರವು ನೀಡುವ ಜೊತೆಗೆ ಸಂಘಟನೆಗೂ ಬಲ ತುಂಬುತ್ತಿವೆ' ಎಂದು ಜೈಶಂಕರ್ ಆರೋಪಿಸಿದ್ದಾರೆ.

ಭಾರತ ಮತ್ತು ಪಾಕಿಸ್ತಾನದ ನಡುವೆ ಈಚೆಗೆ ನಡೆದ ಸಂಘರ್ಷದ ಸಮಯದಲ್ಲಿ, ಎರಡೂ ರಾಷ್ಟ್ರಗಳು ಅಣ್ವಸ್ತ್ರ ಬಳಸುವಿಕೆಯಿಂದ ಬಹಳ ದೂರದಲ್ಲಿದ್ದವು ಎಂದು ಜರ್ಮನ್ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಸ್ಪಷ್ಟಪಡಿಸಿದ್ದಾರೆ. 'ನಮ್ಮ ಭಾಗದ ಸಕಲ ವಿದ್ಯಮಾನಕ್ಕೂ ಅಣ್ವಸ್ತ್ರದ ನಂಟು ಬೆಸೆಯುವ ಪ್ರವೃತ್ತಿ ಪಶ್ಚಿಮದ್ದಾಗಿದೆ' ಎಂದು ತಿಳಿಸಿದ್ದಾರೆ.

'ನಿವೃತ್ತಿ ಸೌಲಭ್ಯಗಳಲ್ಲಿ ವಿಳಂಬ ಸಲ್ಲ'

ಕೋಲ್ಕತ್ತ (ಪಿಟಿಐ): ಪಿಂಚಣಿ ಹಾಗೂ ನಿವೃತ್ತಿ ನಂತರದಲ್ಲಿ ಸಿಗುವ ಇತರೆ ಸೌಲಭ್ಯಗಳು ಒಬ್ಬ ಕಾರ್ಮಿಕನು ಸುದೀರ್ಘ ಸೇವೆ ಸಲ್ಲಿಸಿ ಗಳಿಸಿರುವ ಹಕ್ಕೇ ವಿನಾ ದಾನವಲ್ಲ. ಹೀಗಾಗಿ ನಿವೃತ್ತಿ ನಂತರದ ಸೌಲಭ್ಯಗಳನ್ನು ಒದಗಿಸುವಲ್ಲಿ ಒಂದು ದಿನವೂ ವಿಳಂಬವಾಗಕೂಡದು ಎಂದು ಕಲ್ಕತ್ತ ಹೈಕೋರ್ಟ್ ಹೇಳಿದೆ.

ನ್ಯಾಯಮೂರ್ತಿ ಗೌರಂಗ್ ಕಾಂತ್ ಅವರು ಮೇ 23ರಂದು ಈ ಆದೇಶ ಹೊರಡಿಸಿ, ನಿವೃತ್ತಿ ನಂತರದಲ್ಲಿ ಸಿಗುವ ಸೌಲಭ್ಯಗಳೇ ನಿವೃತ್ತ ನೌಕರನಿಗೆ ಆಧಾರವಾಗಿರುತ್ತದೆ. ಸೌಲಭ್ಯಗಳು ಸಿಗುವುದು ವಿಳಂಬವಾದರೆ ಅವರಿಗೆ ಕಷ್ಟವಾಗುತ್ತದೆ ಎಂದೂ ಹೇಳಿದ್ದಾರೆ. ಪಶ್ಚಿಮ ಬಂಗಾಳದ ಸ್ಥಳೀಯ ಸಂಸ್ಥೆಯ 'ಡಿ' ದರ್ಜೆಯ ನಿವೃತ್ತ ನೌಕರರೊಬ್ಬರು ಪಿಂಚಣಿ ಬರುತ್ತಿಲ್ಲ ಎಂದು ಕೋರ್ಟ್ ಮೊರೆಹೋಗಿದ್ದರು.

ಅಸ್ಸಾಂ: ಗೊಗೊಯಿ ಕಾಂಗ್ರೆಸ್ ಅಧ್ಯಕ್ಷ

ನವದೆಹಲಿ (ಪಿಟಿಐ): ಅಸ್ಸಾಂ ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿದ್ದು, ಲೋಕಸಭಾ ಸದಸ್ಯ ಗೌರವ್ ಗೊಗೊಯಿ ಅವರನ್ನು ಕಾಂಗ್ರೆಸ್ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಇದುವರೆಗೂ ಭೂಪೇನ್ ಕುಮಾರ್ ಬೋರಾ ಅಧ್ಯಕ್ಷರಾಗಿದ್ದರು.

ಅದೇ ರೀತಿ, ಜಾಕೀರ್ ಹುಸೇನ್ ಸಿಕ್ದರ್, ರೋಸ್ಲಿನಾ ಟಿರ್ಕೆ, ಪ್ರದೀಪ್ ಸರ್ಕಾರ್ ಅವರನ್ನು ರಾಜ್ಯ ಘಟಕದ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಿದೆ.

ಅಸ್ಸಾಂ ವಿಧಾನಸಭೆಯ ಈಗಿನ ಅವಧಿ 2026ರ ಮೇ 20ಕ್ಕೆ ಕೊನೆಗೊಳ್ಳಲಿದೆ. ಸತತ ಎರಡು ಅವಧಿಗೆ ಅಧಿಕಾರ ಕಳೆದುಕೊಂಡಿರುವ ಕಾಂಗ್ರೆಸ್ ಪಕ್ಷವು ಈ ಬಾರಿ ಅಧಿಕಾರ ಹಿಡಿಯಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ.


'ಇದುವರೆಗೂ ಎಐಸಿಸಿ ಕಾರ್ಯದರ್ಶಿಯಾಗಿದ್ದ ರೋಸ್ಲಿನಾ ಟಿರ್ಕೆ ಅವರನ್ನು ಈಗಿನ ಜವಾಬ್ದಾರಿಯಿಂದ ಮುಕ್ತಗೊಳಿಸಲಾಗಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ತಿಳಿಸಿದ್ದಾರೆ.



ಗೌರವ್ ಗೊಗೊಯಿ

ಗೌರವ್ ಅವರು ಅಸ್ಸಾಂನ ಮಾಜಿ ಮುಖ್ಯಮಂತ್ರಿ ತರುಣ್ ಗೊಗೊಯಿ ಮಗ. ಜೊರ್ಹಾಟ್ ಕ್ಷೇತ್ರದ ಸಂಸದರಾಗಿದ್ದು, ಲೋಕಸಭೆಯಲ್ಲಿ ವಿರೋಧ ಪಕ್ಷದ ಉಪನಾಯಕರಾಗಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮೇ 27, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಅಮಾವಾಸ್ಯೆ ಗಂ. 8-32 ನಂತರ (ಜ್ಯೇಷ್ಠ ಶುಕ್ಲ) ಪ್ರತಿಪದ್ ಗಂ 29-03 ನಕ್ಷತ್ರ: ಕೃತಿಕ ಗಂ.5-33 ನಂತರ ರೋಹಿಣಿ ಗಂ 26-51 ಯೋಗ: ಸುಕರ್ಮಾ ಗಂ. 22-54 ಕರಣ: ನಾಗವಾನ್ ಗಂ. 8-32, ವೃಷಭ ಮಾಸದ 13 ನೇ ದಿನ.

ರಾಹುಕಾಲ: ಮಧ್ಯಾಹ್ನ 03-00 – 04-30

ಸೂರ್ಯೋದಯ: 06-06 ಸೂರ್ಯಾಸ್ತ : 06-49

ಮುಸ್ಲಿಂ ದಿನಾಂಕ: 28 ಜುಲ್ಕಾಯದ್, ಅದೃಷ್ಟ ಸಂಖ್ಯೆ : 4, 7

ಮೇಷ: ಅವಮಾನಿಸುತ್ತಿರುವವರೇ ಸಹಾಯ ಕೋರಿ ಬರಲಿದ್ದಾರೆ. ಸಂತೋಷದ ಸಮಯದ ನಡುವೆಯೂ ಒತ್ತಡದಿಂದ ಇರುವಿರಿ. ಯೋಗ್ಯ ವಯಸ್ಕರಿಗೆ ವಿವಾಹ ನಿಶ್ಚಯವಾಗುವುದು.

ವೃಷಭ: ತಮಾಷೆಯ ಮಾತುಗಳು ಹಿರಿಯರ ಮನಸ್ಸನ್ನು ನೋಯಿಸುವುದು. ಮಾತಿನಲ್ಲಿ ಹಿಡಿತವಿರಲಿ. ಸಂಗೀತ ಅಥವಾ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವ ಅವಕಾಶ ಸಿಗುವುದು. ಕುಶಲಕರ್ಮಿಗಳಿಗೆ ಆದಾಯ ಹೆಚ್ಚಲಿದೆ.

ಮಿಥುನ: ಬೌದ್ಧಿಕ ಚಟುವಟಿಕೆಗಳ ಬೆಳವಣಿಗೆಗೆ ಬೇಕಾದ ಪ್ರತಿಭಾನ್ವಿತರ ಸಮಾಗಮ ಆಗಲಿದೆ. ಉಪಯೋಗಿಸಿಕೊಳ್ಳುವುದು ನಿಮ್ಮ ಸ್ವಂತಿಕೆಯ ವಿಚಾರ. ವ್ಯಸನಗಳಿಂದ ದೂರ ಉಳಿಯಿರಿ.

ಕರ್ಕಾಟಕ: ಟೆಕ್ಸ್‌ಟೈಲ್ ಉದ್ಯಮದವರಿಗೆ ರಫ್ತು ವ್ಯಾಪಾರದಿಂದ ಲಾಭ ಆಗಲಿದೆ. ಗುರಿ ಸಾಧಿಸಲು ಹೊಸ ಬದಲಾವಣೆಗಳು ಅನಿವಾರ್ಯ ಎನಿಸಲಿದೆ. ತಂದೆಯಾಗುವ ಸುದ್ದಿ ಕೇಳಿ ಸಂತೋಷವಾಗುವುದು.

ಸಿಂಹ: ಚಾಣಾಕ್ಷತನದ, ಬುದ್ಧಿವಂತಿಕೆಯ ತೀರ್ಮಾನಗಳು ತೂಕದ ವ್ಯಕ್ತಿಯನ್ನಾಗಿ ಮಾಡುತ್ತವೆ. ವ್ಯವಹಾರ ಕ್ಷೇತ್ರವನ್ನು ವಿಸ್ತರಿಸಲು ಈ ದಿನ ಸೂಕ್ತವಾಗಿದೆ. ಸಂಗಾತಿಯ ಮಾತಿಗೆ ಬೆಲೆ ಕೊಡಿ.

ಕನ್ಯಾ: ಚಲನಚಿತ್ರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಕೌಶಲ ವೃದ್ಧಿಸಿಕೊಳ್ಳಲು ಅವಕಾಶಗಳು ದೊರೆಯಲಿವೆ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಲಿದ್ದೀರಿ.

ತುಲಾ: ನೀವಾಡುವ ಮಾತುಗಳಿಂದ ಮುಕ್ತ ಮನೋಭಾವ ಬಹಿರಂಗಗೊಳ್ಳಲಿದೆ. ಕಾಗದಪತ್ರಗಳಿಗೆ ಓದಿಯೇ ಸಹಿ ಹಾಕುವುದನ್ನು ಅಭ್ಯಾಸ ಮಾಡಿ. ಸ್ನೇಹಿತರ ಸಹಕಾರ ದೊರೆತು ಅಭಿಲಾಷೆ ಪೂರೈಸುವುದು.

ವೃಶ್ಚಿಕ: ಮೇಲಧಿಕಾರಿಗಳು ಹಾಗೂ ಹಿರಿಯರು ಕೆಲಸಗಳಲ್ಲಿ ಸಹಕಾರ ನೀಡುತ್ತಾರೆ. ವ್ಯಾಪಾರದಲ್ಲಿ ಮಿಶ್ರಫಲವಿರುವುದು. ಖರೀದಿಯಲ್ಲಿ ಮೋಸ ಹೋಗುವ ಲಕ್ಷಣವಿರುವುದರಿಂದ ಗಮನವಿರಲಿ.

ಧನು: ಅಡುಗೆ ಕೆಲಸ ಮಾಡುವವರಿಗೆ ಹೆಚ್ಚಿನ ಕೆಲಸ ಹಾಗೂ ಲಾಭವಿರುವುದು. ವಿರೋಧಿಗಳು ರಾಜಿಯಾಗುವರು. ಅಸಾಧಾರಣ ರೀತಿಯಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುತ್ತೀರಿ.

ಮಕರ: ಅವಶ್ಯಕತೆಗಳು ಆಶ್ಚರ್ಯಕರ ರೀತಿಯಲ್ಲಿ ಲಭಿಸಲಿವೆ. ವಕೀಲರು ಎದುರಾಳಿಗಳನ್ನು ಸುಲಭವಾಗಿ ಕಟ್ಟಿಹಾಕುವಿರಿ. ಮನಸ್ಸಿನಲ್ಲಿ ಏಕಾಗ್ರತೆಯಿಂದ ಶಿವನ ನಾಮಸ್ಮರಣೆ ಅಥವಾ ಧ್ಯಾನ ಮಾಡುವುದು ಒಳ್ಳೆಯದು.

ಕುಂಭ: ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ಮನವರಿಕೆಯಾಗುವುದು. ಹವಾ ಬದಲಾವಣೆಗಾಗಿ ಕಿರು ಪ್ರವಾಸದ ಸಾಧ್ಯತೆಗಳಿವೆ. ವರ್ಷಕ್ಕೊಮ್ಮೆ ನಡೆಯಬೇಕಾದ ದೈವಕಾರ್ಯದ ಬಗ್ಗೆ ಗಮನವಹಿಸಿ.

ಮೀನ: ವೃತ್ತಿರಂಗದಲ್ಲಿ ಹೊಸ ಹೆಜ್ಜೆ ಇಡುವವರಿಗೆ ವಿದ್ಯಾರ್ಹತೆಗಿಂತ ಪ್ರತಿಭೆ ಬಹಳ ಮುಖ್ಯ. ವಿದ್ಯಾಭ್ಯಾಸದಲ್ಲಿ ನಿರೀಕ್ಷೆಗೂ ಮೀರಿದ ಸಂತೋಷಮಯವಾದ ಫಲಿತಾಂಶವನ್ನು ಹೊಂದುತ್ತೀರಿ.

ದೇವರು ನಿರ್ಮಿಸಿದ ಅದ್ಭುತ

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

203

ಮನುಷ್ಯ ತಾಯಿಯ ಗರ್ಭದಿಂದ ಈ ಭೂಮಿಗೆ ಬಂದಾಗ ಮಾಡುವ ಮೊದಲ ಕೆಲಸ ಎಂದರೆ, ಉಸಿರು ತೆಗೆದುಕೊಳ್ಳುವುದು. ಮನುಷ್ಯ ಈ ಭೂಮಿಯನ್ನು ಬಿಟ್ಟು ಹೋಗುವಾಗ ಮಾಡುವ ಕೊನೆಯ ಕೆಲಸ ಎಂದರೆ, ಉಸಿರು ಬಿಡುವುದು. ಉಸಿರು ತೆಗೆದುಕೊಂಡ ಎಂದರೆ ಹುಟ್ಟಿದ ಎಂದು ಅರ್ಥ. ಉಸಿರು ಬಿಟ್ಟ ಅಂದರೆ ಸತ್ತ ಎಂದು ಅರ್ಥ. ಮನುಷ್ಯ ಪ್ರತಿ ಕ್ಷಣವೂ ಉಸಿರು ತೆಗೆದುಕೊಳ್ಳುತ್ತಾನೆ. ಪ್ರತಿ ಕ್ಷಣವೂ ಉಸಿರು ಬಿಡುತ್ತಾನೆ. ಅಂದರೆ, ಪ್ರತಿ ಕ್ಷಣವೂ ಹುಟ್ಟಿ ಸಾಯುತ್ತಾನೆ. ಇದು ಬದುಕಿನ ರೀತಿ. ಇದು ಗೊತ್ತಿರಬೇಕು. ಸತ್ತ ಮನುಷ್ಯನಿಗೆ ಬೆಲೆ ಇಲ್ಲ. ಯಾರದ್ದಾದರೂ ಮನೆಯಲ್ಲಿ ಹೆಣ ಬಿಡ್ತೀವಿ ಅಂದರೆ 'ನಿಮ್ಮ ಪಾದರಕ್ಷೆ ಬೇಕಾದರೆ ಬಿಡ್ರಿ, ಆದರೆ ಹೆಣ ಮಾತ್ರ ಬಿಡಬೇಡಿ' ಅಂತಾರೆ. ಹುಟ್ಟು ನನ್ನ ಕೈಯಲ್ಲಿ ಇಲ್ಲ. ಸಾವು ನನ್ನ ಕೈಯಲ್ಲಿ ಇಲ್ಲ. ನನ್ನ ಬಳಿ ಇರುವುದು ಬದುಕು ಮಾತ್ರ. ಅದನ್ನು ಚೆಂದ ಮಾಡಿಕೊಳ್ಳಬೇಕು. ಪರಿಸರ ಇಷ್ಟೆಲ್ಲಾ ಕೊಟ್ಟಿದೆ. ನರಕಸದೃಶ ಜೀವನವನ್ನು ಕಟ್ಟಬಾರದು ಮನುಷ್ಯ.

ಸುಂದರವಾದ ಜೀವನದ ಆಯ್ಕೆ ಬಹಳ ಮುಖ್ಯ. ತಿಪ್ಪೆಯ ಗುಂಡಿಯಲ್ಲಿ ಕಸ ತುಂಬಿದ್ದರೂ ಕೋಳಿ ಜೋಳದ ಕಾಳಿಗೆ ಮಾತ್ರ ಬಾಯಿ ಹಾಕುತ್ತದೆ. ಇದು ಬದುಕುವ ರೀತಿ. ಕೋಳಿಯ ಹಾಗೆ ಬದುಕನ್ನು ಆಯ್ಕೆ ಮಾಡಿಕೊಳ್ಳಬೇಕು. ಎಂತಹ ಬದುಕು ಬದುಕಬೇಕು ಎಂದರೆ ಲಿಂಗ ಮೆಚ್ಚಿ ಅಹುದಹುದು ಎನ್ನಬೇಕು. ಈ ಬದುಕನ್ನು ಕೊಟ್ಟ ದೇವರಿಗೇ ಒಂದು ಕ್ಷಣ ಹೊಟ್ಟೆಕಿಚ್ಚು ಬರುವ ಹಾಗೆ ಬದುಕಬೇಕು. ಇಂತಹ ಸುಖಿ, ಸಮಾಧಾನದ, ಸಂತೋಷದ ಜೀವನ ಕಟ್ಟಬೇಕು ಎನ್ನುವುದೇ ಶರಣರ ಚಿಂತನೆ. ಅದಕ್ಕಾಗಿಯೇ ಬಸವಾದಿ ಶರಣರು, ಕನಕ ಪುರಂದರದಾಸರು ಬರೆದರು. ಜೀವನದ ಬಗ್ಗೆ ಹೇಳಬೇಕು ಎಂದು ಶಂಕರರು ಬಂದರು. ಮೊದಲು ವೃದ್ಧರ ಬಳಿಗೆ ಹೋದರು. ಅವರು ಇನ್ನೇನು ನಮ್ಮ ಜೀವನನೇ ಮುಗೀತು ಇನ್ನು ಕೇಳೋದೇನು ಎಂದರು. ನಂತರ ಯುವಕರ ಬಳಿಗೆ ಹೋದರು. ಯುವಕರಲ್ಲಿ ಕೆಲವರು ಹುಡುಗಿ ಸಿಕ್ಕಿಲ್ಲ ಅಂತ, ಇನ್ನು ಕೆಲವರು ಸಿಕ್ಕಿದ್ದನ್ನು ಬಿಡೋದು ಹೇಗೆ ಅಂತ ಚಿಂತೆಯಲ್ಲಿದ್ದರು. ಮಹಿಳೆಯರ ಬಳಿಗೆ ಹೋದರೆ, ಅವರು ಬಹಳ ಬ್ಯುಸಿ ಇದ್ದರು. ಮಕ್ಕಳ ಬಳಿಗೆ ಹೋದರೆ ಅವರು ಆಟದಲ್ಲಿ ನಿರತರಾಗಿದ್ದರು. ಜೀವನದ ಬಗ್ಗೆ ಯಾರಿಗೆ ಹೇಳಬೇಕು ಎನ್ನುವುದೇ ಶಂಕರರಿಗೆ ಗೊತ್ತಾಗಲಿಲ್ಲ.

ದೀಪ ಬೆಳಗಬೇಕು ಎಂದರೆ ಹಣತೆ, ಬತ್ತಿ ಮತ್ತು ಎಣ್ಣೆ ಮೂರೂ ಬೇಕು. ಇದರಲ್ಲಿ ಒಂದು ಇಲ್ಲದೇ ಇದ್ದರೂ ಬೆಳಕು ಬರುವುದಿಲ್ಲ. ಹಾಗೆಯೇ ಉತ್ತಮ ಬದುಕು ಕಟ್ಟಬೇಕು ಎಂದರೆ ಮೈ, ಮಾತು ಮತ್ತು ಮನಸ್ಸು ಬಹಳ ಮುಖ್ಯ. ಜೀವನದಲ್ಲಿ ಇದರಲ್ಲಿ ಯಾವುದು ಇಲ್ಲದಿದ್ದರೂ ಉತ್ತಮ ಬದುಕು ಕಟ್ಟಲು ಸಾಧ್ಯವಿಲ್ಲ. ಈ ಮೂರೂ ಸರಿಯಾಗಿದ್ದರೆ ಬದುಕು ಬೆಳಗುತ್ತದೆ. ಹಣತೆಯ ದೀಪ ಆರದಂತೆಯೂ ನೋಡಿಕೊಳ್ಳಬೇಕು. ಬದುಕಿನ ದೀಪವೂ ಆರದಂತೆ ನೋಡಿಕೊಳ್ಳಬೇಕು. ಅಲ್ಲಮಪ್ರಭುಗಳು ದೇಹವನ್ನು ಅದ್ಭುತ ಎಂದರು. ಇದು ಯಾಕೆ ಅದ್ಭುತ ಎಂದರೆ ಜಗತ್ತಿನಲ್ಲಿ ಕೋಟ್ಯಂತರ ಜನರಿದ್ದಾರೆ. ಆದರೆ ಒಬ್ಬರು ಇದ್ದ ಹಾಗೆ ಇನ್ನೊಬ್ಬರಿಲ್ಲ. ಅದಕ್ಕೆ ಇದು ದೇವರು ನಿರ್ಮಿಸಿದ ಅದ್ಭುತ.

ಪದಬಂಧ 6055


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಗಾಳಿಯಿಂದ ಕೂಡಿದ ಪ್ರದೇಶವಿದು (5)
3.ಪಾಕ ಮಾಡುವಾಗ ಸೇವಿಸಿರುವ ಶರಬತ್ತು (3)
5.ರಾಜ್ಯದ ಚುನಾಯಿತ ಶಾಸಕರ ಮಂಡಳಿ (5)
7.ಸಲೀಸಾಗಿ ಒಳನುಗ್ಗುತಿರುವ ಗಂಡಾನೆ (3)
8.ನವಜೀವನವಿದು (5)
11.ಮುಸುಕು ಹೊದ್ದು ಮಲಗಿರುವಾಗ ಬಿದ್ದಿರುವ ಸ್ವಪ್ನ (3)
12.ಈತ ಮಂದಿಗೆಲ್ಲ ಒಡೆಯ (5)
14.ಮಸ್ತಿಷ್ಕ ಇಲ್ಲಿದೆ (3)
15.ಹೆಸರಿಡುವ ಶಾಸ್ತ್ರ (5)

ಮೇಲಿಂದ ಕೆಳಕ್ಕೆ

1.ಕಲ್ಪನೆಯಲ್ಲ ನಿಜವಾಗಿ ಇರುವಂಥದ್ದು (4)
2.ವನದಲ್ಲಿ ಕಾಣುತ್ತಿರುವ ಮುಖ (3)
4.ನಗರದಲ್ಲಿ ನಡೆದಿರುವ ಉತ್ಸವ (3)
6.ಮಾಸದ ಕೊನೆಯಲ್ಲಿ ಒಂದಾಗಿ ಸೇರಿಸಿದುದು (3)
7.ಸರದ ಜೊತೆಯಲ್ಲಿ ತಂದಿರುವ ಸಾಮಾನು (3)
8.ಹೊಲದ ಆಸುಪಾಸು ಕೊಳಕು ಕಾಣಿಸಿದೆಯಲ್ಲಾ? (3)
9.ಸ್ವೀಕರಿಸಲು ಹಿತವಲ್ಲದ ದಾನ (3)
10.ನಡುವೆ ಕರವನ್ನಿಟ್ಟ ಘಟನೆ (4)
11.ಹೆಚ್ಚು ಪದದ ಉಲ್ಟಾ ಪದ (3)
13.ನಾಯಕನ ಮೂಗು (3)



6054ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಹಲುಬೆ 4.ದಟ್ಟಣೆ
5.ಹರಿಕಾರ 6.ಬಲಿಪೀಠ 8.ಹರ
10.ದಿನ 13.ದಾರ್ಶನಿಕ
14.ಹರಿದಾರಿ 15.ರಮಣಿ
16.ಚರಣ

ಮೇಲಿಂದ ಕೆಳಕ್ಕೆ:
1.ಉದರಂಭರಣ
2.ಹಣಬರಹ 3.ಸಕಾಲ
5.ಹರಗಾರ 7.ಅನುಕ್ರಮಣಿಕೆ
9.ರಹದಾರಿ 11.ನವೀಕರಣ
12.ಸರಿಗೆ

ಸುಡೊಕು 6439

8				1				
		9		5		7		3
	1				3		2	
	4					8		
3			8		1			2
1	9			2				7
	8						7	
2		4	9		7	1		6
	5			3				

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6438ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8



ಭಾರಿ ಮಳೆಯಿಂದಾಗಿ ಮಂಗಳೂರಿನ ಪಂಪ್‌ವೆಲ್ ಜಂಕ್ಷನ್‌ನಲ್ಲಿ ಸೋಮವಾರ ಜಲಾವೃತವಾಗಿದ್ದ ರಸ್ತೆಯಲ್ಲೇ ವಾಹನಗಳು ಸಂಚರಿಸಿದವು ಪ್ರಜಾವಾಣಿ ಚಿತ್ರ/ ಫಕ್ರುದ್ದೀನ್ ಎಚ್.





ಬೆಳಗಾವಿ ಜಿಲ್ಲೆ ನಿಪ್ಪಾಣಿ ತಾಲ್ಲೂಕಿನ ಸಿದ್ನಾಳ ಗ್ರಾಮದ ಅಕ್ಕೋಳ– ಸಿದ್ನಾಳ ಸೇತುವೆ ಜಲಾವೃತಗೊಂಡಿದೆ (ಎಡಚಿತ್ರ) ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ಮಳೆಯ ನಡುವೆಯೇ ವಾಹನಗಳು ನಿಧಾನವಾಗಿ ಸಾಗಿದವು.

ಸೋಮೇಶ್ವರದಲ್ಲಿ ಕಡಲ್ಕೊರೆತ • ನೀಲಗಿರಿ ಪ್ರವಾಸಿ ತಾಣಗಳಿಗೆ ನಿರ್ಬಂಧ

ಮುಂಗಾರು ಬಿರುಸು– ಜನಜೀವನ ತತ್ತರ

ಪ್ರಜಾವಾಣಿ ವಾರ್ತೆ

ಮೈಸೂರು/ಶಿವಮೊಗ್ಗ: ಮೈಸೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ, ಧಾರವಾಡ, ಬಾಗಲಕೋಟೆ ಸೇರಿದಂತೆ ರಾಜ್ಯದ ಬಹುತೇಕ ಕಡೆ ಸೋಮವಾರ ಬಿರುಸಿನ ಮಳೆಯಾಗಿದೆ.

ಹಲವೆಡೆ ಆಸ್ತಿ, ಬೆಳೆ, ಮನೆ, ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ. ಅಲ್ಲಲ್ಲಿ ಮರಗಳು ಬಿದ್ದಿವೆ. ಕೊಡಗಿನ ಅಮ್ಮತ್ತಿ ಹೋಬಳಿಯ ಕರಡಿಗೋಡು ಗ್ರಾಮದ ಹೊಳೆಕೆರೆ ಭಾಗದ ಕಾವೇರಿ ನದಿಯಿಂದ ರಸ್ತೆಗೆ 3 ಅಡಿ ನೀರು ಬಂದಿದ್ದು, ಪ್ರವಾಹದ ಭೀತಿ ಸೃಷ್ಟಿಸಿದೆ. ಮುಂಜಾಗ್ರತಾ ಕ್ರಮವಾಗಿ ಕುಶಾಲನಗರದಲ್ಲಿ ನದಿ ತೀರದ ನಿವಾಸಿಗಳಿಗೆ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ನೋಟಿಸ್ ನೀಡಲಾಗಿದೆ.

ಶಿವಮೊಗ್ಗ ಭಾಗದ ಮಲೆನಾಡಿನಲ್ಲಿ ಮಳೆ ಸೋಮವಾರ ಕೊಂಚ ತಗ್ಗಿದೆ.

ಕೊಡಗು ಜಿಲ್ಲೆಯ ಚಿಕ್ಲಿಹೊಳೆ ಜಲಾಶಯ ತುಂಬಿ ಕೋಡಿ ಬಿದ್ದಿದೆ. ಜಲಪಾತಗಳು, ನದಿ, ತೊರೆಗಳಲ್ಲಿ ನೀರಿಗೆ ಇಳಿಯುವುದನ್ನು ಹಾಗೂ ಭಾರಿ ತೂಕದ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಎನ್‌ಡಿಆರ್‌ಎಫ್ ಕೊಡಗಿಗೆ ಬಂದಿದೆ.

ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲ್ಲೂಕಿನ ಕಬಿನಿ ಜಲಾಶಯದ ನೀರಿನ ಮಟ್ಟ ಒಂದೇ ದಿನ 5 ಅಡಿ ಹೆಚ್ಚಾಗಿದೆ.

ಮಳೆ (ಸೆ.ಮೀಗಳಲ್ಲಿ)	
ಭಾಗಮಂಡಲ	23
ಕೊಟ್ಟಿಗೆಹಾರ	22
ಮೂಲ್ಕಿ	20
ಪುತ್ತೂರು	17
ನಾಪೋಕ್ಲು	16
ಸುಳ್ಯ	13
ಧರ್ಮಸ್ಥಳ	13
ಗೇರುಸೊಪ್ಪ, ಉಪ್ಪಿನಂಗಡಿ, ಸೋಮವಾರಪೇಟೆ, ಆಗುಂಬೆ	12

ಒಳಹರಿವು 2,683 ಕ್ಯುಸೆಕ್‌ನಿಂದ 19ಸಾವಿರ ಕ್ಯೂಸೆಕ್‌ಗೆ ಏರಿಕೆಯಾಗಿದೆ. ಕುಶಾಲನಗರ ತಾಲ್ಲೂಕಿನ ಹಾರಂಗಿ ಜಲಾಶಯದಲ್ಲಿ 2 ಅಡಿ ಹೆಚ್ಚಿದೆ. ಹಾಸನದ ಹೇಮಾವತಿ ಜಲಾಶಯದ ಒಳಹರಿವು 6,345 ಕ್ಯೂಸೆಕ್‌ಗೆ ಏರಿಕೆಯಾಗಿದೆ.

ಚಾಮರಾಜನಗರ: ನೀಲಗಿರಿ ಜಿಲ್ಲೆಯ ಪ್ರವಾಸಿ ತಾಣಗಳಾದ ದೊಡ್ಡಬೆಟ್ಟ, ಪೈನ್ ಫಾರೆಸ್ಟ್, ಲ್ಯಾಂಬ್ಸ್ ರಾಕ್, ಆವಲಂಚಿ, 9ನೇ ಮೈಲ್ ಶೂಟಿಂಗ್ ಪಾಯಿಂಟ್, ಬೋಟ್ ಹೌಸ್, ಪೈಕಾರ ಹಾಗೂ ಊಟಿಯ ಪ್ರವಾಸಿ ಸ್ಥಳಗಳಿಗೆ ಪ್ರವಾಸಿಗರ ಭೇಟಿ ನಿರ್ಬಂಧಿಸಲಾಗಿದೆ.

ಹುಬ್ಬಳ್ಳಿ ವರದಿ: ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ನಸುಕಿನಲ್ಲಿ ಮಳೆ ಸುರಿಯಿತು. 'ಮಹಾರಾಷ್ಟ್ರದ ಪಶ್ಚಿಮಘಟ್ಟ ಪ್ರದೇಶದಲ್ಲಿ ಮಳೆ ಅಬ್ಬರವಿದ್ದು, ವೇದಗಂಗಾ ನದಿ ಹರಿವಿನ ಪ್ರಮಾಣ ಹೆಚ್ಚಾಗಿದೆ. ನಿಪ್ಪಾಣಿ ತಾಲ್ಲೂಕಿನಲ್ಲಿ ಅಕ್ಕೋಳ-ಸಿದ್ನಾಳ ಸೇತುವೆ ಜಲಾವೃತಗೊಂಡಿದೆ. ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ' ಎಂದು ತಹಶೀಲ್ದಾರ್ ಮುಜಫ್ಫರ್ ಬಳಿಗಾರ ತಿಳಿಸಿದ್ದಾರೆ.

ಮಲಪ್ರಭಾ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದೆ.ಈ ಮಾರ್ಗದಲ್ಲಿ ಹೊಸ ಸೇತುವೆ ನಿರ್ಮಿಸಲಾಗುತ್ತಿದೆ. ತಾತ್ಕಾಲಿಕ ಸೇತುವೆಗೆ ತಾಗಿಕೊಂಡು ನೀರು ಹರಿಯುತ್ತಿದೆ. ಸೇತುವೆ ಕಿರಿದಾಗಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಸಂಚಾರ ಬಂದ್ ಮಾಡಲಾಗಿದೆ. ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣದಲ್ಲಿ ಏರಿಕೆ ಉಂಟಾಗಿದ್ದು, ಸೋಮವಾರ ಬೆಳಿಗ್ಗೆ ಹೊತ್ತಿಗೆ 6,595 ಕ್ಯೂಸೆಕ್ ಒಳಹರಿವು ದಾಖಲಾಗಿದೆ.

ವಿಜಯಪುರದ ಆಲಮಟ್ಟಿ ಜಲಾಶಯದ ಒಳಹರಿವು ಹೆಚ್ಚಿದೆ. 52,650 ಕ್ಯುಸೆಕ್ (4.54 ಟಿಎಂಸಿ ಅಡಿ) ನೀರು ಹರಿದು ಬಂದಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಭಾರಿ ಮಳೆ ಕಾರಣ, ಸೋಮೇಶ್ವರದಲ್ಲಿ ಕಡಲ್ಕೊರೆತ ಹಾವಳಿ ಮತ್ತೆ ಶುರುವಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸಿ ತಾಣಗಳಾದ ಮುಳ್ಳಯ್ಯನಗಿರಿ, ಕೆಮ್ಮಣ್ಣುಗುಂಡಿ, ಕುದುರೆಮುಖ ಪ್ರದೇಶಗಳಲ್ಲಿಯೂ ಮಳೆ ಎಡೆಬಿಡದೆ ಸುರಿಯಿತು.

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಸೋಮವಾರ ಮೋಡ ಕವಿದ ವಾತಾವರಣದೊಂದಿಗೆ ದಿನವಿಡೀ ಮಳೆಯಾಯಿತು. ಯಾದಗಿರಿಯ ಕೆಂಭಾವಿಯ ಯುಕೆಪಿ ಕ್ಯಾಂಪಿನ ಗೋಡೆ ಕುಸಿದು ಬಿದ್ದಿದೆ.

ಮೂಡುಬಿದಿರೆ: ಜಲಪಾತದಲ್ಲಿ ಸಿಲುಕಿದ್ದ 6 ಮಂದಿ ರಕ್ಷಣೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಇಲ್ಲಿಗೆ ಸಮೀಪದ ಪುತ್ತಿಗೆ ಎರುಗುಂಡಿ ಜಲಪಾತ ವೀಕ್ಷಿಸಲು ತೆರಳಿದ್ದ ಪ್ರವಾಸಿಗರ ತಂಡವೊಂಡು ಭಾರಿ ಮಳೆಯಿಂದಾಗಿ ಉಕ್ಕಿ ಹರಿದ ಹಳ್ಳದ ನಡುವಿನ ಬಂಡೆಯಲ್ಲಿ ಸೋಮವಾರ ಸಿಲುಕಿತ್ತು. ತಂಡದಲ್ಲಿದ್ದ ಮಂಗಳೂರಿನ ಆರು ಪ್ರವಾಸಿಗರನ್ನು ಸ್ಥಳೀಯರು ರಕ್ಷಿಸಿದರು.

ಎರುಗುಂಡಿ ಜಲಪಾತದ ಬಳಿಯ ಹಳ್ಳದಲ್ಲಿ ಮಳೆಯ ನೀರು ತುಂಬಿ ಹರಿಯುತ್ತಿತ್ತು. ಅಪಾಯವನ್ನು ನಿರ್ಲಕ್ಷಿಸಿ ಯುವಕರು ಜಲಪಾತಕ್ಕೆ ಇಳಿದಿದ್ದರು. ಈ ವೇಳೆ ನೀರಿನ ಹರಿವು ಏಕಾಏಕಿ ಏರಿಕೆಯಾಗಿತ್ತು. ಯುವಕರು ಹಳ್ಳದ ನಡುವಿನ ಬಂಡೆಯಲ್ಲಿ ಸಿಲುಕಿದ್ದರು. ನೀರಿನ ರಭಸ ಹೆಚ್ಚಿದ್ದರಿಂದ ಅವರು ದಡಕ್ಕೆ ತಲುಪಲಾಗದೇ ಜೀವ ರಕ್ಷಣೆಗಾಗಿ ಕಿರುಚಲಾರಂಭಿಸಿದ್ದರು. ಅವರ ಕಿರುಚಾಟ ಕೇಳಿ ಹತ್ತಿರದಲ್ಲಿ ಮೀನು ಹಿಡಿಯುತ್ತಿದ್ದ ಸ್ಥಳೀಯರು ಧಾವಿಸಿ ಹಗ್ಗದ ಸಹಾಯದಿಂದ ಯುವಕರನ್ನು ರಕ್ಷಿಸಿದರು. ಈ ಘಟನೆಯ ನಂತರ ಪುತ್ತಿಗೆ ಗ್ರಾಮ ಪಂಚಾಯತಿಯು ಎರುಗುಂಡಿ ಜಲಪಾತಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಿದೆ. ಈ ಕುರಿತು ಎಚ್ಚರಿಕೆ ನೀಡುವ ಬ್ಯಾನರನ್ನು ಸ್ಥಳದಲ್ಲಿ ಅಳವಡಿಸಲಾಗಿದೆ.



ಮೂಡುಬಿದಿರೆ ಸಮೀಪದ ಪುತ್ತಿಗೆ ಗ್ರಾಮದ ಎರುಗುಂಡಿ ಜಲಪಾತದಲ್ಲಿ ಹಳ್ಳದ ನಡುವಿನ ಬಂಡೆಯಲ್ಲಿ ಸಿಲುಕಿದ್ದ ಪ್ರವಾಸಿಗರು

ಐದು ಜಿಲ್ಲೆಗೆ 'ರೆಡ್ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮಳೆ ಮುಂದುವರೆದಿದ್ದು, ಐದು ಜಿಲ್ಲೆಗಳಿಗೆ ಮಂಗಳವಾರ 'ರೆಡ್ ಅಲರ್ಟ್' ಘೋಷಿಸಲಾಗಿದೆ.

ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗೆ 'ರೆಡ್ ಅಲರ್ಟ್' ನೀಡಲಾಗಿದೆ. ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಬೆಳಗಾವಿ, ಕಲಬುರಗಿ, ಬೀದರ್, ಹಾಸನ, ಕೊಡಗು ಜಿಲ್ಲೆಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದ್ದು, ಕೆಲವೆಡೆ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ವಿಜಯಪುರ, ಬಾಗಲಕೋಟೆ, ಗದಗ, ಧಾರವಾಡ, ಚಾಮರಾಜನಗರ, ಮಂಡ್ಯ, ಮೈಸೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಭಾರಿ ಮಳೆಯ ಮುನ್ಸೂಚನೆ ನೀಡಲಾದ ಜಿಲ್ಲೆಗಳಲ್ಲಿ ಹಲವೆಡೆ ಗಂಟೆಗೆ 35ರಿಂದ 45 ಕಿ.ಮೀ. ವೇಗದಲ್ಲಿ ಗಾಳಿ ಬೀಸಬಹುದು. ಕರಾವಳಿಯ ಕೆಲವೆಡೆ ಗಂಟೆಗೆ 55 ಕಿ.ಮೀ.ವರೆಗೂ ವೇಗದಲ್ಲಿ ಗಾಳಿ ಬೀಸಬಹುದು. ಈ ಕಾರಣದಿಂದ ಸಣ್ಣ ಹಡಗುಗಳು ಓಡಾಡದಂತೆ ಸೂಚಿಸಲಾಗಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಗುಡುಗು ಹಾಗೂ ಭಾರಿ ಗಾಳಿ ಸಹಿತ ಸಾಧಾರಣ ಮಳೆ ಯಾಗುವ ಸಾಧ್ಯತೆ ಇದೆ. ಪ್ರತಿ ಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಇಲಾಖೆ ಹೇಳಿದೆ.

ಭೋವಿ ಅಭಿವೃದ್ಧಿ ನಿಗಮದಲ್ಲಿನ ಅವ್ಯವಹಾರ ಪ್ರಕರಣ

₹40 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕ ಡಾ.ಬಿ.ಕೆ. ನಾಗರಾಜಪ್ಪ, ಹಿಂದಿನ ವ್ಯವಸ್ಥಾಪಕ ನಿರ್ದೇಶಕಿ ಆರ್. ಲೀಲಾವತಿ ಮತ್ತು ಇತರರಿಗೆ ಸೇರಿದ ₹40 ಕೋಟಿ ಮೌಲ್ಯದ ಸ್ಥಿರ ಹಾಗೂ ಚರಾಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಭೋವಿ ಅಭಿವೃದ್ಧಿ ನಿಗಮದಲ್ಲಿ ಸುಮಾರು 750ಕ್ಕೂ ಹೆಚ್ಚು ನಕಲಿ ಫಲಾನುಭವಿಗಳ ಹೆಸರಿನಲ್ಲಿ ನೂರಾರು ಕೋಟಿ ರೂಪಾಯಿ ಸಾಲ ಮಂಜೂರು ಮಾಡಿ, ಅದನ್ನು ತಮ್ಮ ಹಿಡಿತದಲ್ಲಿರುವ ಕಂಪನಿಗಳ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡು, ಅಕ್ರಮ ಎಸಗಿರುವ ಆರೋಪ ನಾಗರಾಜಪ್ಪ, ಲೀಲಾವತಿ ಮತ್ತು ಇತರರ ಮೇಲಿದೆ. ಈ ಸಂಬಂಧ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದೆ.

'ಆರೋಪಿಗಳು ನಕಲಿ ಫಲಾನುಭವಿಗಳ ಹೆಸರಿನಲ್ಲಿ ಸಾಲ, ಸಹಾಯಧನ ಮತ್ತು ನೆರವು ಬಿಡುಗಡೆ ಮಾಡಿ, ದುರ್ಬಳಕೆ ಮಾಡಿಕೊಂಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ನಕಲಿ ಫಲಾನುಭವಿಗಳ ಹೆಸರಿಗೆ ಸಾಲ, ಸಹಾಯಧನ, ನೆರವು ಮಂಜೂರು ಮಾಡಿ, ಆದಿತ್ಯ ಎಂಟರ್‌ಪ್ರೈಸಸ್, ಸೋಮನಾಥೇಶ್ವರ ಎಂಟರ್‌ಪ್ರೈಸಸ್, ನ್ಯೂ ಡ್ರೀಮ್ಸ್ ಎಂಟರ್‌ಪ್ರೈಸಸ್, ಹರ್ಣಿತಾ ಕ್ರಿಯೇಷನ್ಸ್, ಅನ್ನಿಕಾ ಎಂಟರ್‌ಪ್ರೈಸಸ್ ಎಂಬ ಸಂಸ್ಥೆಗಳ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿತ್ತು. ಈ ಖಾತೆಗಳನ್ನು ನಾಗರಾಜಪ್ಪ ಮತ್ತು ಇತರರೇ ನಿರ್ವಹಿಸುತ್ತಿದ್ದರು. ಭೋವಿ ಅಭಿವೃದ್ಧಿ ನಿಗಮದಿಂದ ವರ್ಗಾವಣೆಯಾದ ಹಣವನ್ನು ಆಸ್ತಿಗಳ ಖರೀದಿಗೆ ಬಳಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ' ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

ಭೋವಿ ಅಭಿವೃದ್ಧಿ ನಿಮಗದ ಹಣವನ್ನು ಆರೋಪಿಗಳು ಐಷಾರಾಮಿ ಜೀವನ ನಿರ್ವಹಣೆ, ಸ್ಥಿರ ಮತ್ತು ಚರಾಸ್ತಿಗಳ ಖರೀದಿಗೆ ಬಳಸಿದ್ದರು. ಖರೀದಿ ಸಂದರ್ಭದಲ್ಲಿ ₹26.27 ಕೋಟಿ ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅವುಗಳ ಈಗಿನ ಮಾರುಕಟ್ಟೆ ಮೌಲ್ಯ ಅಂದಾಜು ₹ 40 ಕೋಟಿ ಇದೆ ಎಂದು ತನಿಖಾ ಸಂಸ್ಥೆ ಮಾಹಿತಿ ನೀಡಿದೆ.

ಈ ಪ್ರಕರಣದಲ್ಲಿ ನಾಗರಾಜಪ್ಪ ಅವರನ್ನು ಏಪ್ರಿಲ್ 5ರಂದು ಮತ್ತು ಲೀಲಾವತಿ ಅವರನ್ನು ಏ.12ರಂದು ಇ.ಡಿ ಬಂಧಿಸಿತ್ತು. ಇಬ್ಬರೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

'ಡಿಫೆನ್ಸ್ ಕಾರಿಡಾರ್ ಮಂಜೂರಾತಿಗೆ ಪಟ್ಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಸದ್ಯದಲ್ಲಿ ಭೇಟಿ ಮಾಡಿ ರಾಜ್ಯಕ್ಕೆ ಸಿಗಬೇಕಾಗಿರುವ ರಕ್ಷಣಾ ಕೈಗಾರಿಕಾ ಕಾರಿಡಾರ್ (ಡಿಫೆನ್ಸ್ ಕಾರಿಡಾರ್) ಮಂಜೂರು ಮಾಡುವಂತೆ ಒತ್ತಾಯಿಸುತ್ತೇನೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೇಂದ್ರ ಸರ್ಕಾರವು ಎರಡು ವರ್ಷಗಳ ಹಿಂದೆ ಉತ್ತರಪ್ರದೇಶ ಮತ್ತು ತಮಿಳುನಾಡಿಗೆ ಡಿಫೆನ್ಸ್ ಕಾರಿಡಾರ್ ಮಂಜೂರು ಮಾಡಿದೆ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ, ರಕ್ಷಣಾ ವಹಿವಾಟಿನಲ್ಲಿ ದೇಶಕ್ಕೆ ಶೇಕಡಾ 65ರಷ್ಟು ಕೊಡುಗೆ ನೀಡುತ್ತಿರುವ ಮತ್ತು ಜಾಗತಿಕವಾಗಿ ತೃತೀಯ ಸ್ಥಾನದಲ್ಲಿರುವ ಕರ್ನಾಟಕಕ್ಕೆ ಆ ಯೋಜನೆಯನ್ನು ಘೋಷಿಸದಿರುವುದು ಸರಿಯಲ್ಲ' ಎಂದರು.

'ಇತ್ತೀಚೆಗೆ ನಡೆದ ನೀತಿ ಆಯೋಗದ ಸಭೆಯಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಬೆಂಗಳೂರಿನಲ್ಲಿರುವ ಎಚ್‌ಎಎಲ್ ಕಾರ್ಖಾನೆಯನ್ನು ತಮ್ಮ ರಾಜ್ಯಕ್ಕೆ ಸ್ಥಳಾಂತರಿಸುವಂತೆ ಕೋರಿದ್ದಾರೆ ಎನ್ನಲಾಗುತ್ತಿದೆ. ನಾಯ್ಡು ಅವರು ಈ ವ್ಯವಸ್ಥೆಯನ್ನು ಚೆನ್ನಾಗಿ ಬಲ್ಲವರು. ಅವರು ತಮ್ಮಲ್ಲೂ ಎಚ್‌ಎಎಲ್ ಘಟಕ ಸ್ಥಾಪನೆಗೆ ಕೇಳಿರಬಹುದು. ಅದರಲ್ಲಿ ತಪ್ಪೇನೂ ಇಲ್ಲ. ಒಂದು ವೇಳೆ ಎಚ್‌ಎಎಲ್ ಸ್ಥಳಾಂತರಕ್ಕೆ ಕೇಳಿದ್ದರೆ ಅದು ಸರಿಯಲ್ಲ' ಎಂದು ಸಚಿವರು ಅಭಿಪ್ರಾಯಪಟ್ಟರು.

'ಚಂದ್ರಬಾಬು ನಾಯ್ಡು ತಮ್ಮಲ್ಲಿ ಉದ್ದಿಮೆ ಬೆಳೆಸಲು ಲೇಪಾಕ್ಷಿಯಲ್ಲಾದರೂ ಜಮೀನು ಕೊಡಲಿ, ಮಡಕಶಿರಾದಲ್ಲಾದರೂ ಭೂಮಿ ಕೊಡಲಿ. ಅದು ಅವರಿಗೆ ಬಿಟ್ಟಿದ್ದು. ಆದರೆ, ನಮ್ಮಲ್ಲಿರುವ ಉದ್ಯಮಗಳನ್ನು ಎಳೆದುಕೊಂಡು ಹೋಗುವ ಆಲೋಚನೆಯನ್ನು ಅವರು ಮಾಡಿರಲಾರರು ಎಂದು ಭಾವಿಸಿದ್ದೇನೆ. ರಾಜನಾಥ್ ಸಿಂಗ್ ಬಳಿಗೆ ಹೋಗುವಾಗ ಕೇಂದ್ರ ಸಂಪುಟದಲ್ಲಿರುವ ನಮ್ಮ ರಾಜ್ಯದ ಸಚಿವರುಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಾಗುವುದು. ಅದಕ್ಕೂ ಮೊದಲು, ನೀತಿ ಆಯೋಗದ ಸಭೆಯಲ್ಲಿ ನಡೆದಿದೆ ಎನ್ನಲಾಗುತ್ತಿರುವ ವಿದ್ಯಮಾನದ ಬಗ್ಗೆ ಮುಖ್ಯಮಂತ್ರಿ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯ ಜತೆ ಚರ್ಚಿಸಲಾಗುವುದು' ಎಂದರು.

ಮಹಾರಾಷ್ಟ್ರ: ಧಾರಾಕಾರ ಮಳೆ

ಸಿಡಿಲು ಬಡಿದು ವ್ಯಕ್ತಿಯೊಬ್ಬ ಸಾವು • 48 ಜನರ ರಕ್ಷಣೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಮಹಾರಾಷ್ಟ್ರದ ವಿವಿಧೆಡೆ ಭಾರಿ ಮಳೆ ಸುರಿಯುತ್ತಿದೆ. ಸಿಡಿಲು ಬಡಿದು ವ್ಯಕ್ತಿಯೊಬ್ಬ ಮೃತಪಟ್ಟಿದ್ದಾನೆ, ನೀರು ನುಗ್ಗಿದ್ದ ಪ್ರದೇಶಗಳಿಂದ 48 ಜನರನ್ನು ರಕ್ಷಿಸಲಾಗಿದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಕಚೇರಿ ತಿಳಿಸಿದೆ.

'ಪುಣೆ, ಸತಾರ, ಸೊಲ್ಲಾಪುರ, ರಾಯಗಢ, ಮುಂಬೈನಲ್ಲಿ ಭಾರಿ ಮಳೆ ಆಗಿದೆ. ದೌಂಡ್‌ನಲ್ಲಿ 24 ತಾಸುಗಳಲ್ಲಿ 117 ಮಿ.ಮೀ ಮಳೆ ಆಗಿದೆ' ಎಂದು ಕಚೇರಿಯು ಹೇಳಿದೆ. ಮುಂಬೈನಲ್ಲಿ 24 ತಾಸುಗಳಲ್ಲಿ 135.4 ಮಿ.ಮೀ. ಮಳೆ ಆಗಿದೆ. ಮಹಾರಾಷ್ಟ್ರದ ಬಾರಾಮತಿ ಜಿಲ್ಲೆಯಲ್ಲಿ ಮಳೆಯಿಂದಾಗಿ 25 ಮನೆಗಳು ಭಾಗಶಃ ಕುಸಿದಿವೆ.

ಮುಂಬೈನಲ್ಲಿ ಯಾವುದೇ ತುರ್ತು ಸಂದರ್ಭವನ್ನು ಎದುರಿಸಲು ಎನ್‌ಡಿಆರ್‌ಎಫ್‌ನ ಐದು ತಂಡಗಳನ್ನು ನಿಯೋಜಿಸಲಾಗಿದೆ ಎಂದು ಪ್ರಕಟಣೆ ಹೇಳಿದೆ. ಮುಂದಿನ 24 ಗಂಟೆಗಳಲ್ಲಿ ಮುಂಬೈನಲ್ಲಿ ಇನ್ನಷ್ಟು ಮಳೆ ಆಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೆಟ್ರೊ ನಿಲ್ದಾಣದಲ್ಲಿ ನೀರು: ಮುಂಬೈ ಮಹಾನಗರಲ್ಲಿ ಬಿರುಸಿನ ಮಳೆಯ ಕಾರಣಕ್ಕೆ ನೆಲದ ಅಡಿಯಲ್ಲಿರುವ ಆಚಾರ್ಯ ಆತ್ರೇಯ ಚೌಕ ಮೆಟ್ರೊ ನಿಲ್ದಾಣದಲ್ಲಿ ನೀರು ತುಂಬಿಕೊಂಡಿದ್ದು, ಅಲ್ಲಿಂದ ವರ್ಲಿವರೆಗಿನ ಮೆಟ್ರೊ ಸಂಚಾರವನ್ನು ಸೋಮವಾರ ಸ್ಥಗಿತಗೊಳಿಸಲಾಗಿತ್ತು. ಈ ಮೆಟ್ರೊ ನಿಲ್ದಾಣದ ಫ್ಲಾಟ್‌ಫಾರ್ಮ್ ಮೇಲೆ, ನಿಲ್ದಾಣದ ಇತರ ಕೆಲವೆಡೆ ನೀರು ನಿಂತಿರುವ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ವ್ಯಾಪಕವಾಗಿ ಹಂಚಿಕೊಳ್ಳಲಾಗಿದೆ.

ನಗರದಲ್ಲಿ ಕೆಲವು ತಾಸುಗಳ ಕಾಲ ಸುರಿದ ಮಳೆಯ ಕಾರಣದಿಂದಾಗಿ ತಗ್ಗುಪ್ರದೇಶದ ಹಲವೆಡೆ ನೀರು ತುಂಬಿಕೊಂಡಿದೆ. ಅಲ್ಲದೆ, ರೈಲು ಮಾರ್ಗಗಳ ಮೇಲೆಯೂ ನೀರು ತುಂಬಿಕೊಂಡು, ರೈಲುಗಳ ಸಂಚಾರಕ್ಕೆ ಅಡ್ಡಿ ಸೃಷ್ಟಿಸಿತ್ತು.

ನೈರುತ್ಯ ಮುಂಗಾರು ಮುಂಬೈ ಮಹಾನಗರವನ್ನು ಸೋಮವಾರ ಪ್ರವೇಶಿಸಿದೆ. ಕಳೆದ 75 ವರ್ಷಗಳ ಇತಿಹಾಸದಲ್ಲಿ, ದೇಶದ ಆರ್ಥಿಕ ರಾಜಧಾನಿಯಾದ ಮುಂಬೈಗೆ ಮುಂಗಾರು ಇಷ್ಟು ಬೇಗ ಪ್ರವೇಶಿಸಿರುವುದು ಇದೇ ಮೊದಲು ಎಂದು ಭಾರತೀಯ ಹವಾಮಾನ ಇಲಾಖೆಯ ವಿಜ್ಞಾನಿ ಸುಷ್ಮಾ ನಾಯರ್ ಹೇಳಿದ್ದಾರೆ.

ಲಾತೂರ್ ಜಿಲ್ಲೆಯ ಲಾತೂರ್–ತುಳಜಾಪುರ ರಸ್ತೆಯಲ್ಲಿ ಮಳೆಯ ಕಾರಣದಿಂದಾಗಿ ಕಾರು ಸ್ಕಿಡ್ ಆಗಿ ಸಂಭವಿಸಿದ ಅಪಘಾತದಲ್ಲಿ ಮಾಜಿ ಶಾಸಕ ಆರ್.ಟಿ. ಜಿಜಾ ದೇಶಮುಖ್ ಅವರು ಮೃತಪಟ್ಟಿದ್ದಾರೆ.



ಭಾರಿ ಮಳೆಯ ಪರಿಣಾಮವಾಗಿ ಮುಂಬೈ ನಗರದ ರಸ್ತೆಯಲ್ಲಿ ನೀರು ತುಂಬಿ, ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಯಿತು –ಎಎಫ್‌ಪಿ ಚಿತ್ರ

ಕೇರಳದಲ್ಲಿ ಭಾರಿ ಮಳೆ– ಉಕ್ಕಿದ ನದಿಗಳು

ತಿರುವನಂತಪುರ (ಪಿಟಿಐ): ಕೇರಳದ ಉತ್ತರ ಭಾಗದ ಜಿಲ್ಲೆಗಳಲ್ಲಿ ಮಳೆಯ ಆರ್ಭಟ ಮುಂದುವರಿದಿದೆ. ಹಲವು ಕಡೆಗಳಲ್ಲಿ ಜನರನ್ನು ಸುರಕ್ಷಿತ ಸ್ಥಳಗಳಿಗೆ, ಆಶ್ರಯ ಕೇಂದ್ರಗಳಿಗೆ ಕರೆದೊಯ್ಯಲಾಗಿದೆ.

ರಾಜ್ಯದ ಎಲ್ಲೆಡೆ ಮರಗಳು ಉರುಳಿಬಿದ್ದಿರುವ ವರದಿಗಳು ಇವೆ. ಇದರಿಂದಾಗಿ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಹಾಗೂ ಎತ್ತರದ ಸ್ಥಳಗಳಲ್ಲಿ ಜನಜೀವನಕ್ಕೆ ತೊಂದರೆ ಆಗಿದೆ. ರಾಜ್ಯದಲ್ಲಿ ನದಿಗಳು ಮೈದುಂಬಿ ಹರಿಯುತ್ತಿವೆ.

ವಯನಾಡ್‌ನ ಸುಲ್ತಾನ್ ಬತ್ತೇರಿಯ ಪುಳಂಕುನಿಯಲ್ಲಿನ ಬುಡಕಟ್ಟು ಸಮುದಾಯದ ಕೆಲವು ಕುಟುಂಬಗಳನ್ನು ಆಶ್ರಯ ಕೇಂದ್ರಗಳಿಗೆ ಕಳುಹಿಸಲಾಗಿದೆ. ಜಿಲ್ಲೆಯಲ್ಲಿ ಎನ್‌ಡಿಆರ್‌ಎಫ್ ತಂಡವು ಬೀಡುಬಿಟ್ಟಿದೆ.

ಪಾಲಕ್ಕಾಡ್ ಜಿಲ್ಲೆಯಲ್ಲಿ ತೀವ್ರ ಗಾಳಿ ಹಾಗೂ ನಿರಂತರವಾಗಿ ಸುರಿಯುತ್ತಿರುವ ಮಳೆಯು ಜನಜೀವನಕ್ಕೆ ಅಡಚಣೆ ಸೃಷ್ಟಿಸಿದೆ. ಅಟ್ಟಪ್ಪಾಡಿ, ನೆಲ್ಲಿಯಂಪತಿಯಲ್ಲಿಯೂ ಸಮಸ್ಯೆ ಆಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಚಾಲಕ ಕಂ ನಿರ್ವಾಹಕ ಹುದ್ದೆಗೆ ಪೂರ್ಣಗೊಂಡ ಚಾಲನಾ ಪರೀಕ್ಷೆ

ಕೆಎಸ್‌ಆರ್‌ಟಿಸಿಗೆ 2000 ಹೊಸ ಚಾಲಕರು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕೆಎಸ್‌ಆರ್‌ಟಿಸಿಯಲ್ಲಿ ಐದು ವರ್ಷಗಳಿಂದ ಬಾಕಿ ಉಳಿದಿದ್ದ ಚಾಲಕ ಕಂ ನಿರ್ವಾಹಕರ ನೇಮಕಾತಿ ಅಂತಿಮ ಹಂತಕ್ಕೆ ಬಂದಿದೆ. ಜೂನ್ ಮೊದಲ ವಾರದಲ್ಲಿ 2000 ಹೊಸ ನೌಕರರು ಕರ್ತವ್ಯಕ್ಕೆ ಹಾಜರಾಗಲಿದ್ದಾರೆ.

2020ರಲ್ಲಿ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. 2,545 ಚಾಲಕ ಕಂ ನಿರ್ವಾಹಕ ಹುದ್ದೆ, 1,200 ಚಾಲಕರು, 746 ಮೆಕ್ಯಾನಿಕ್ ಹುದ್ದೆಗಳಿಗೆ ಆಗ ಅರ್ಜಿ ಆಹ್ವಾನಿಸಲಾಗಿತ್ತು. ಅನಂತರ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿತ್ತು. 2023ರ ಅಕ್ಟೋಬರ್‌ನಲ್ಲಿ ಈಗಿನ ಸರ್ಕಾರ ನೇಮಕಾತಿ ಪ್ರಕ್ರಿಯೆ ನಡೆಸಲು ಮುಂದಾಗಿತ್ತು. 2,545ರ ಬದಲು 2000 ಚಾಲಕ ಕಂ ನಿರ್ವಾಹಕರು, 746 ಮೆಕ್ಯಾನಿಕ್ ಹುದ್ದೆ ಬದಲು 300 ಮೆಕ್ಯಾನಿಕ್ ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದಿಸಿತ್ತು. 2024ರ ಜನವರಿಯಲ್ಲಿ ತಾಂತ್ರಿಕ ಸಿಬ್ಬಂದಿ ನೇಮಕಾತಿ ಪೂರ್ಣಗೊಳಿಸಿ ವಿಭಾಗ/ ಘಟಕಗಳಿಗೆ ನಿಯೋಜನೆ ಮಾಡಲಾಗಿದೆ.

2000 ಹುದ್ದೆಗೆ 25,494 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ದಾಖಲೆಗಳ ಪರಿಶೀಲನೆಯ ಬಳಿಕ 13,954 ಅಭ್ಯರ್ಥಿಗಳು ಅರ್ಹರಾಗಿದ್ದರು. ಹುಮ್ನಾಬಾದ್ ಮತ್ತು ಹಾಸನದ ಕೆಎಸ್‌ಆರ್‌ಟಿಸಿ ತರಬೇತಿ ಕೇಂದ್ರದಲ್ಲಿ ಒಂದು ವರ್ಷದಿಂದ ಚಾಲನಾ ಪರೀಕ್ಷೆಯನ್ನು ನಡೆಸಲಾಗಿತ್ತು. 12,431 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 7,352 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ. ಮೀಸಲಾತಿ ಪ್ರವರ್ಗದ ಆಧಾರದಲ್ಲಿ ಆಯಾ ವರ್ಗದಲ್ಲಿ ಅಧಿಕ ಅಂಕ ಗಳಿಸಿದವರನ್ನು ಆಯ್ಕೆ ಮಾಡಲಾಗುತ್ತದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಶೇ 100ರಷ್ಟು ಪಾರದರ್ಶಕವಾಗಿ ಪರೀಕ್ಷೆ ನಡೆಸಲಾಗಿದೆ. ಚಾಲನಾ ಪರೀಕ್ಷೆಯನ್ನು ವಿಡಿಯೊ ಮಾಡಲಾಗಿದೆ. ಪಾರದರ್ಶಕತೆ ಕಾಪಾಡಲು ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಪ್ರತಿ ವಾರ ಬದಲಾವಣೆ ಮಾಡಲಾಗುತ್ತಿತ್ತು. ಚಾಲನಾ ವೃತ್ತಿ ಪರೀಕ್ಷೆಯನ್ನು ವೆಬ್‌ಕಾಸ್ಟಿಂಗ್ ಮಾಡಲಾಗಿದೆ. ಕೇಂದ್ರೀಕೃತ ನಿಯಂತ್ರಣಾ ಕೊಠಡಿಯಲ್ಲಿ ಎಲ್ಲವನ್ನೂ ನಿಗಾ ಇಡಲಾಗಿದೆ. ಚಾಲನಾ ತರಬೇತಿ ಮಾರ್ಗದಲ್ಲಿ ಮತ್ತು ಬಸ್‌ನಲ್ಲಿ ಸೇರಿ ಒಟ್ಟು 48 ಕ್ಯಾಮೆರಾಗಳು ಕಣ್ಗಾವಲು ಇದ್ದವು' ಎಂದು ತಿಳಿಸಿದ್ದಾರೆ.

ಅಲ್ಲದೇ ಇದೇ ಮೊದಲ ಬಾರಿಗೆ ಚಾಲನಾ ವೃತ್ತಿ ಪರೀಕ್ಷೆಗೆ ಸಂಬಂಧಿಸಿದಂತೆ ಆಕ್ಷೇಪಗಳಿದ್ದರೆ ಸಲ್ಲಿಸಲು ಅವಕಾಶ ನೀಡಲಾಗಿದೆ. ದಕ್ಷಿಣ ಕರ್ನಾಟಕದವರಿಗೆ ಅನುಕೂಲ ಆಗುವಂತೆ ಹಾಸನದಲ್ಲಿ, ಉತ್ತರ ಕರ್ನಾಟಕದವರಿಗೆ ಅನುಕೂಲ ಆಗುವಂತೆ ಹುಮ್ನಾಬಾದ್‌ನಲ್ಲಿ ಪರೀಕ್ಷಾ ಕೇಂದ್ರಗಳನ್ನು ಮಾಡಲಾಗಿತ್ತು. ಈ ಎರಡರಲ್ಲಿ ಯಾವುದನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಅಭ್ಯರ್ಥಿಗೆ ನೀಡಲಾಗಿತ್ತು' ಎಂದು ಪರೀಕ್ಷಾ ನೋಡಲ್ ಅಧಿಕಾರಿ ವಿವರಿಸಿದರು.

ಗಣಕೀಕೃತ ವೈರ್‌ಲೆಸ್ ಆಧಾರಿತ ಚಾಲನಾ ವೃತ್ತಿ ಪರೀಕ್ಷೆ ಇದಾಗಿದ್ದು, ಚಾಲನೆ ಮಾಡಿದ ಕೂಡಲೇ ಆಟೊಮೆಟಿಕ್ ಕಂಪ್ಯೂಟರ್ ಆಧಾರಿತ ಅಂಕ ಪ್ರಮಾಣಪತ್ರ ಅಲ್ಲಿಯೇ ಅಭ್ಯರ್ಥಿಗಳ ಕೈ ಸೇರಿದೆ. ಪ್ರತಿದಿನ 100 ರಿಂದ 120 ಅಭ್ಯರ್ಥಿಗಳಿಗೆ ಪರೀಕ್ಷೆ ಮಾಡಲಾಗಿದೆ. ಆಯಾ ದಿನವೇ ಸಂಜೆ ಅಂಕಪಟ್ಟಿಗಳನ್ನು ಕೆಎಸ್‌ಆರ್‌ಟಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ' ಎಂದು ತಿಳಿಸಿದರು.

'ಅವಘಡ ನಡೆಯದಂತೆ ಕಠಿಣ ಪರೀಕ್ಷೆ'

'ಚಾಲನ ಪರೀಕ್ಷೆಗೆ ಸಂಬಂಧಿಸಿದಂತೆ ಆಕ್ಷೇಪ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಪರೀಕ್ಷೆ ಕಠಿಣವಾಗಿತ್ತು ಎಂದು ಕೆಲವರು ಆಕ್ಷೇಪ ಸಲ್ಲಿಸಿದ್ದರು. ಚಾಲನಾ ವೃತ್ತಿ ಆಗಿರುವುದರಿಂದ ಮುಂದೆ ಅವಘಡ ನಡೆಯದಂತೆ ನೋಡಿಕೊಳ್ಳುವುದು ಅಗತ್ಯ. ಅದಕ್ಕಾಗಿ ಪರೀಕ್ಷೆಯಲ್ಲಿ ಚಾಲನಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕಾಗುತ್ತದೆ. ಆದರೂ ದೊಡ್ಡ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.



ಕೆಎಸ್‌ಆರ್‌ಟಿಸಿ ಚಾಲನಾ ತರಬೇತಿ ಕೇಂದ್ರದಲ್ಲಿರುವ ಚಾಲನಾ ಪರೀಕ್ಷಾ ಮಾರ್ಗ

ಅಂಕಿ ಅಂಶ

2,510 ಹುಮ್ನಾಬಾದ್‌ನಲ್ಲಿ ಚಾಲನಾ ಪರೀಕ್ಷೆಗೆ ಹಾಜರಾದವರು	**9,921** ಹಾಸನದಲ್ಲಿ ಚಾಲನಾ ಪರೀಕ್ಷೆಗೆ ಹಾಜರಾದವರು
1,408 ಉತ್ತೀರ್ಣರಾದವರು	**3,977** ಉತ್ತೀರ್ಣರಾದವರು
56.09% ಉತ್ತೀರ್ಣರಾದ ಪ್ರಮಾಣ	**59.91%** ಉತ್ತೀರ್ಣರಾದ ಪ್ರಮಾಣ

ಸಂಕ್ಷಿಪ್ತ ಸುದ್ದಿ

ಜಿ.ಬಿ. ಹರೀಶ್‌ಗೆ 'ವೀರ ಸಾವರ್ಕರ್ ಸಮ್ಮಾನ್'

ಮೈಸೂರು: ನಗರದ ಸಾವರ್ಕರ್ ಪ್ರತಿಷ್ಠಾನದಿಂದ ನೀಡಲಾಗುವ 'ವೀರ ಸಾವರ್ಕರ್ ಸಮ್ಮಾನ್'ಗೆ ಬೆಂಗಳೂರಿನ ವಂದೇಮಾತರಂ ಪಾಠಶಾಲೆಯ ಸಂಸ್ಥಾಪಕ, ಲೇಖಕ ಜಿ.ಬಿ.ಹರೀಶ್ ಅವರನ್ನು ಆಯ್ಕೆ ಮಾಡಲಾಗಿದೆ. ಇದು, ₹1 ಲಕ್ಷ ಮತ್ತು ಸಾವರ್ಕರ್ ಪುತ್ಥಳಿ ಹೊಂದಿದೆ.



ಜಿ.ಬಿ.ಹರೀಶ್

'ಮೇ 29ರಂದು ಸಂಜೆ 5.30ಕ್ಕೆ ಇಲ್ಲಿನ ಕಲಾಮಂದಿರದಲ್ಲಿ ನಡೆಯುವ 142ನೇ ಸಾವರ್ಕರ್ ಜಯಂತಿಯಲ್ಲಿ ಪ್ರದಾನ ಮಾಡಲಾಗುವುದು' ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಸಂದೇಶ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕಡೆಂಗೋಡ್ಲು ಕಾವ್ಯ ಪ್ರಶಸ್ತಿಗೆ ಪ್ರಜ್ಞಾ ಕೃತಿ

ಉಡುಪಿ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಹಾಗೂ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ನೀಡುವ ಕಡೆಂಗೋಡ್ಲು ಕಾವ್ಯ ಪ್ರಶಸ್ತಿಗೆ ಧಾರವಾಡದ ಲೇಖಕಿ ಪ್ರಜ್ಞಾ ಮತ್ತಿಹಳ್ಳಿ ಅವರ 'ಬೆಳದಿಂಗಳ ಸೋನೆಮಳೆ' ಕವನ ಸಂಕಲನ ಆಯ್ಕೆಯಾಗಿದೆ. ಪ್ರಶಸ್ತಿಯು ₹10 ಸಾವಿರ ನಗದು ಹೊಂದಿದ್ದು, ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಗಸ್ಟ್ ತಿಂಗಳಲ್ಲಿ ನಡೆಯಲಿದೆ.



ಪ್ರಜ್ಞಾ ಮತ್ತಿಹಳ್ಳಿ

ಪ್ರಜ್ಞಾ ಮತ್ತಿಹಳ್ಳಿ ಅವರು ಮೂಲತಃ ಉತ್ತರಕನ್ನಡ ಜಿಲ್ಲೆಯ ಶಿರಸಿಯವರಾಗಿದ್ದು ಪ್ರಸ್ತುತ ಅವರು ಕಿತ್ತೂರು ಸರ್ಕಾರಿ ಪದವಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

64 ಕ್ವಿಂಟಲ್ ಅಕ್ಕಿ ಅಕ್ರಮ ಸಂಗ್ರಹ: ದೂರು

ಬೆಳಗಾವಿ: ತಾಲ್ಲೂಕಿನ ಪೀರನವಾಡಿ ಗ್ರಾಮದ ಮನೆಯಲ್ಲಿ 'ಅನ್ನಭಾಗ್ಯ' ಯೋಜನೆಯ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿ ಇಟ್ಟುಕೊಂಡ ಆರೋಪದ ಮೇಲೆ ಸ್ಥಳೀಯ ನಿವಾಸಿ ಸಂಜಯ ಸುಬ್ಬರಾವ್ ಭೋಸಲೆ ಎಂಬುವರ ವಿರುದ್ಧ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಆಹಾರ ನಿರೀಕ್ಷಕ ಸುರೇಶ ಉಪ್ಪಾರ ಭಾನುವಾರ ರಾತ್ರಿ ದೂರು ದಾಖಲಿಸಿದ್ದಾರೆ. ಆರೋಪಿ ಬಂಧನಕ್ಕೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ನಿಧನ ವಾರ್ತೆ

ಶತಾಯುಷಿ ಕಮಲಮ್ಮ

ಬೆಂಗಳೂರು: ಕನ್ನಡ ಚಳವಳಿಯ ಕಟ್ಟಾಳು, ಕನ್ನಡ ಬಾವುಟ ಸೃಷ್ಟಿಸಿದ್ದ ಮ. ರಾಮಮೂರ್ತಿ ಅವರ ಪತ್ನಿ ಕಮಲಮ್ಮ ರಾಮಮೂರ್ತಿ (100) ಸೋಮವಾರ ನಿಧನರಾದರು.



ಕಮಲಮ್ಮ

ಪತಿ ರಾಮಮೂರ್ತಿ ಮತ್ತು ಮಕ್ಕಳಾದ ದಿವಾಕರ, ಮಂಜುನಾಥ ಅವರು ಬಾವಿ ಕುಸಿದು ಮೃತಪಟ್ಟ ಬಳಿಕ 58 ವರ್ಷಗಳಿಂದ ಕಮಲಮ್ಮ ಅವರು ಒಂಟಿಯಾಗಿ ಜೀವನ ಸಾಗಿಸುತ್ತಿದ್ದರು.

ಶಾರದಾ ಕುಟೀರದಲ್ಲಿ ವಾಸವಾಗಿದ್ದರು. ಇತ್ತೀಚೆಗೆ ಅನಾರೋಗ್ಯ ಉಂಟಾಗಿತ್ತು. ಅವರನ್ನು ನೋಡಿಕೊಳ್ಳುವುದಕ್ಕಾಗಿ ಬನಶಂಕರಿ ಸೇವಾಕ್ಷೇತ್ರಕ್ಕೆ ಸ್ಥಳಾಂತರಿಸಲಾಗಿತ್ತು. ಅಲ್ಲಿಯೇ ಮೃತರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಬಳಿಕ ಬನಶಂಕರಿ ವಿದ್ಯುತ್ ಚಿತಾಗಾರದಲ್ಲಿ ಅಂತ್ಯ ಸಂಸ್ಕಾರ ನೆರವೇರಿತು ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ನ್ಯಾಯಮೂರ್ತಿ ಯಶವಂತ್ ವರ್ಮಾ ನಿವಾಸದಲ್ಲಿ ನಗದು ಪತ್ತೆ ಪ್ರಕರಣ; ಆರ್‌ಟಿಐ ಅಡಿ ಮಾಹಿತಿ ಕೇಳಿದ್ದ ವಕೀಲ

ವಿಚಾರಣಾ ವರದಿ ಪ್ರತಿ ನೀಡಲು 'ಸುಪ್ರೀಂ' ನಕಾರ

ಪ್ರಜಾವಾಣಿ ವಾರ್ತೆ

ಕೋರ್ಟ್ ಸುದ್ದಿಗಳು

ನವದೆಹಲಿ: ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ದೆಹಲಿಯ ನಿವಾಸದಲ್ಲಿ ನಗದು ಪತ್ತೆಯಾಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಆಂತರಿಕ ವಿಚಾರಣಾ ಸಮಿತಿಯ ವರದಿಯ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಆಂತರಿಕ ವಿಚಾರಣಾ ವರದಿಯ ಪ್ರತಿ ಹಾಗೂ ಅಂದಿನ ಸಿಜೆಐ ಸಂಜೀವ್ ಖನ್ನಾ ಅವರು ಮುಂದಿನ ಕ್ರಮಕ್ಕಾಗಿ ಪ್ರಧಾನಿ ಹಾಗೂ ರಾಷ್ಟ್ರಪತಿಗೆ ಬರೆದ ಪತ್ರದ ಪ್ರತಿಯನ್ನು ನೀಡುವಂತೆ ಕೋರಿ ಮಹಾರಾಷ್ಟ್ರದ ವಕೀಲ ಅಮೃತ್‌ಪಾಲ್ ಸಿಂಗ್ ಖಾಲ್ಸಾ ಅವರು ಮೇ 9ರಂದು ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ್ದರು.

ಸುಪ್ರೀಂ ಕೋರ್ಟ್‌ನ ಕೇಂದ್ರೀಯ ಸಾರ್ವಜನಿಕ ಮಾಹಿತಿ ಅಧಿಕಾರಿ (ಸಿಪಿಐಒ) ಹಿಮಾನಿ ಶರದ್ ಅವರು ಮೇ 21ರಂದು ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಸುಪ್ರೀಂ ಕೋರ್ಟ್ ವರ್ಸಸ್ ಸುಭಾಷ್ ಚಂದ್ರ ಅಗರವಾಲ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಲ್ಲಿ ನಿಗದಿಪಡಿಸಿದ ಮಾನದಂಡಗಳ ಆಧಾರದಲ್ಲಿ ಈ ಮಾಹಿತಿಯನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ಖಾಸ್ತಾ ಕೇಳಿರುವ ಮಾಹಿತಿ ನೀಡುವುದನ್ನು ನಿರಾಕರಿಸಲು ನ್ಯಾಯಾಂಗದ ಸ್ವಾತಂತ್ರ್ಯ, ವಿಶ್ವಾಸಾರ್ಹ ಸಂಬಂಧ, ಖಾಸಗಿತನದ ಹಕ್ಕಿನ ಮೇಲಿನ ದಾಳಿ ಮತ್ತು ಗೋಪ್ಯತೆಯ ಕರ್ತವ್ಯ ಉಲ್ಲಂಘನೆ– ಮುಂತಾದ ಕಾರಣಗಳನ್ನು ನೀಡಿದ್ದಾರೆ.

ವರ್ಮಾ ಅವರ ದೆಹಲಿಯ ಅಧಿಕೃತ ನಿವಾಸದಲ್ಲಿ ಅಪಾರ ಪ್ರಮಾಣದ ಹಣ ಪತ್ತೆಯಾಗಿದೆ ಎನ್ನಲಾದ ಪ್ರಕರಣವು ನ್ಯಾಯಾಂಗ ವಲಯದಲ್ಲಿ ಕೋಲಾಹಲ ಉಂಟುಮಾಡಿತ್ತು. ವರ್ಮಾ ಅವರ ಮನೆಗೆ ಬಿದ್ದ ಬೆಂಕಿಯನ್ನು ನಂದಿಸಲು ತೆರಳಿದ್ದ ಅಗ್ನಿ ಶಾಮಕ ದಳದ ಸಿಬ್ಬಂದಿ ಭಾರಿ ಪ್ರಮಾಣದ ನಗದು ಪತ್ತೆ ಮಾಡಿದ್ದಾರೆ ಎಂದು ವರದಿಯಾಗಿತ್ತು.

'ನ್ಯಾಯಾಂಗ ಅಧಿಕಾರಿಗಳ ನಿವೃತ್ತಿ ವಯಸ್ಸು: ಕಾನೂನು ಅಡ್ಡಿ ಇಲ್ಲ'

ನವದೆಹಲಿ (ಪಿಟಿಐ): 'ಮಧ್ಯಪ್ರದೇಶದಲ್ಲಿ ನ್ಯಾಯಾಂಗ ಅಧಿಕಾರಿಗಳ ನಿವೃತ್ತಿ ವಯಸ್ಸನ್ನು 61 ವರ್ಷಗಳಿಗೆ ಹೆಚ್ಚಿಸಲು ಕಾನೂನಿನ ಅಡ್ಡಿ ಇಲ್ಲ' ಎಂದು ಸುಪ್ರೀಂ ಕೋರ್ಟ್ ಸೋಮವಾರ ಸ್ಪಷ್ಟಪಡಿಸಿದೆ.

ಮಧ್ಯಪ್ರದೇಶ ನ್ಯಾಯಾಧೀಶರ ಸಂಘ ಸಲ್ಲಿಸಿದ ವಿವರಣೆಯನ್ನು ಪರಿಶೀಲಿಸಿದ ಸಿಜೆಐ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಆಗಸ್ಟೀನ್ ಜಾರ್ಜ್ ಮಸೀಹ್ ಅವರ ಪೀಠವು, ಈ ವಿಚಾರದ ಬಗ್ಗೆ ಸಾಧ್ಯವಾದಷ್ಟು ಬೇಗ ಎಂದರೆ ಎರಡು ತಿಂಗಳಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಅಲ್ಲಿನ ಹೈಕೋರ್ಟ್‌ಗೆ ಸೂಚನೆ ನೀಡಿದೆ.

ಜಿಲ್ಲಾ ನ್ಯಾಯಾಧೀಶರ ನಿವೃತ್ತಿ ವಯಸ್ಸನ್ನು ಈಗಿರುವ 60 ವರ್ಷದಿಂದ 62 ವರ್ಷಕ್ಕೆ ಹೆಚ್ಚು ಮಾಡಬೇಕು ಎಂದು ನ್ಯಾಯಾಧೀಶರ ಸಂಘವು 2018ರಲ್ಲಿ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದವು. ನಂತರ, ಇನ್ನೊಂದು ರಾಜ್ಯದಲ್ಲಿ ಪೂರ್ವ ನಿದರ್ಶನವನ್ನು ಪರಿಗಣಿಸಿ ನಿವೃತ್ತಿ ವಯಸ್ಸನ್ನು 61 ವರ್ಷಕ್ಕೆ ಹೆಚ್ಚು ಮಾಡಬೇಕು ಎಂದು ಅದು ಪೀಠಕ್ಕೆ ಮನವಿ ಮಾಡಿತು.

ಇದೇ ಮನವಿಯನ್ನು ಸಂಘವು ಮಧ್ಯಪ್ರದೇಶ ಹೈಕೋರ್ಟ್‌ಗೆ ಸಲ್ಲಿಸಿತ್ತು. ಆದರೆ ಅದು 2018ರಲ್ಲಿ ಮನವಿಯನ್ನು ತಿರಸ್ಕರಿಸಿತ್ತು.

'ಕೂತು ಮಾತನಾಡಿ, ಬಗೆಹರಿಸಿಕೊಳ್ಳಿ'

ನವದೆಹಲಿ (ಪಿಟಿಐ): 'ನೀವು ಇಬ್ಬರು ಒಟ್ಟಿಗೆ ಕುಳಿತು ಊಟ ಮಾಡಿ. ನಿಮ್ಮ ಮಧ್ಯದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ. ಮಾತುಕತೆ ನಡೆಸಿಕೊಂಡು ನೀವೇ ಪರಿಹಾರ ಕಂಡುಕೊಳ್ಳಿ'

– ವಿಚ್ಛೇದನ ಅರ್ಜಿಯ ವಿಚಾರಣೆ ನಡೆಯುತ್ತಿದ್ದ ವೇಳೆ ದಂಪತಿಯನ್ನು ಉದ್ದೇಶಿಸಿ ಸುಪ್ರೀಂ ಕೋರ್ಟ್ ಸೋಮವಾರ ಈ ರೀತಿ ಹೇಳಿದೆ.

ಫ್ಯಾಷನ್ ಉದ್ಯಮಿ ಮಹಿಳೆಯು ತನ್ನ ಮೂರು ವರ್ಷದ ಮಗು ವಿನೊಂದಿಗೆ ವಿದೇಶಕ್ಕೆ ತೆರಳಲು ಅನುಮತಿ ನೀಡುವಂತೆ ನ್ಯಾಯಾಲಯವನ್ನು ಕೋರಿದ್ದರು. ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಸತೀಶ್‌ಚಂದ್ರ ಶರ್ಮಾ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು.

'ನಿಮಗೆ ಮೂರು ವರ್ಷದ ಮಗುವಿದೆ. ನಿಮ್ಮಿಬ್ಬರ ಮಧ್ಯೆ ಅದೆಂಥಾ ಅಹಂಕಾರ? ನಮ್ಮ ನ್ಯಾಯಾಲಯದ ಕ್ಯಾಂಟೀನ್ ನಿಮಗೆ ಇಷ್ಟವಾಗದೇ ಇರಬಹುದು. ಅದಕ್ಕಾಗಿ ಒಂದು ಕೋಣೆಯನ್ನು ನೀಡುತ್ತೇವೆ. ರಾತ್ರಿ ಕೂತು ಊಟ ಮಾಡಿ. ಮಾತುಕತೆ ನಡೆಸಿ. ಮಾತುಕತೆಯಿಂದ ಎಲ್ಲವೂ ಬಗೆಹರಿಯುತ್ತದೆ' ಎಂದು ಪೀಠ ಹೇಳಿತು. 'ಹಳೆಯ ಕಹಿ ಘಟನೆಗಳನ್ನು ಮರೆತುಬಿಡಿ. ಭವಿಷ್ಯದ ಕುರಿತು ಯೋಚನೆ ಮಾಡಿ. ನಾಳೆ ಬನ್ನಿ' ಎಂದಿತು. ನ್ಯಾಯಾಲಯವು ಅರ್ಜಿಯ ವಿಚಾರಣೆಯನ್ನು ಮಂಗಳವಾರಕ್ಕೆ ಮುಂದೂಡಿತು.

ನ್ಯಾಯಾಂಗ ಬಂಧನಕ್ಕೆ ಜ್ಯೋತಿ

ಹಿಸಾರ್ (ಪಿಟಿಐ): ಬೇಹುಗಾರಿಕೆ ಆರೋಪದಲ್ಲಿ ಬಂಧಿತರಾಗಿರುವ ಯುಟ್ಯೂಬರ್ ಜ್ಯೋತಿ ಮಲ್ಹೋತ್ರಾ ಅವರನ್ನು ನ್ಯಾಯಾಲಯವು ಸೋಮವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಜ್ಯೋತಿ ಅವರ ಕಸ್ಟಡಿ ಅವಧಿ ಮುಕ್ತಾಯವಾಗಿದ್ದು, ಮತ್ತೆ ಕಸ್ಟಡಿಗೆ ಕೋರದಿದ್ದರಿಂದ, ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಆದೇಶಿಸಿತು. ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾದ ಮಲ್ಹೋತ್ರಾ ಅವರ ಮೂರು ಮೊಬೈಲ್ ಫೋನ್‌ಗಳು ಮತ್ತು ಲ್ಯಾಪ್‌ಟಾಪ್‌ಗಳ ಡೇಟಾವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸುಮಾರು 10–12 ಟೆರಾಬೈಟ್ ಡೇಟಾವನ್ನು ಮರು ಪಡೆಯಲಾಗಿದೆ. ಈ ಕುರಿತಾಗಿ ಹೆಚ್ಚಿನ ತನಿಖೆ ನಡೆದಿದೆ' ಎಂದು ಹೇಳಿವೆ.

ಜ್ಯೋತಿ ಅವರ ನಾಲ್ಕು ಬ್ಯಾಂಕ್ ಖಾತೆಗಳಲ್ಲಿನ ಹಣ ವರ್ಗಾವಣೆಯ ಪರಿಶೀಲನೆಯೂ ನಡೆದಿದೆ.



ಹೊಸ ಸೇತುವೆ ಗುವಾಹಟಿಯಲ್ಲಿ ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ ಆರು ಪಥಗಳ ಸೇತುವೆ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. ಈ ಸೇತುವೆ ಗುವಾಹಟಿ ಮತ್ತು ಉತ್ತರ ಗುವಾಹಟಿಗೆ ಸಂಪರ್ಕ ಕಲ್ಪಿಸಲಿದೆ –ಪಿಟಿಐ ಚಿತ್ರ

ಅಂಜಾರಿಯಾ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಎನ್.ವಿ. ಅಂಜಾರಿಯಾ (ಕರ್ನಾಟಕ), ವಿಜಯ್ ಬಿಷ್ಣೋಯ್ (ಗುವಾಹಟಿ) ಹಾಗೂ ಎ.ಎಸ್. ಚಂದೂರ್‌ಕರ್ (ಬಾಂಬೆ) ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ.



ಅಂಜಾರಿಯಾ

ಖಾಲಿ ಇರುವ ಮೂರು ಹುದ್ದೆಗಳನ್ನು ಭರ್ತಿ ಮಾಡಲು ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಐವರು ಸದಸ್ಯರ ಕೊಲಿಜಿಯಂ ಸೋಮವಾರ ಸಭೆ ಸೇರಿತು. ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ವಿಕ್ರಮ್ ನಾಥ್, ಜೆ.ಕೆ ಮಹೇಶ್ವರಿ ಮತ್ತು ಬಿ.ವಿ ನಾಗರತ್ನ ಅವರು ಕೊಲಿಜಿಯಂನ ಇತರ ಸದಸ್ಯರಾಗಿದ್ದಾರೆ.

ಸಿಜೆಐ ಆಗಿದ್ದ ಸಂಜೀವ್ ಖನ್ನಾ, ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಎ.ಎಸ್.ಓಕಾ ಅವರ ನಿವೃತ್ತಿಯಿಂದ ಈ ಹುದ್ದೆಗಳು ಖಾಲಿ ಆಗಿವೆ. ಮಂಜೂರಾದ 34 ಹುದ್ದೆಗಳ ಪೈಕಿ ಈಗ ಸುಪ್ರೀಂ ಕೋರ್ಟ್‌ನಲ್ಲಿ 31 ನ್ಯಾಯಮೂರ್ತಿಗಳಿದ್ದಾರೆ.

ಅಂಜಾರಿಯಾ ಅವರು ಗುಜರಾತ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ 2011ರಲ್ಲಿ ನೇಮಕಗೊಂಡಿದ್ದರು. 2013ರಲ್ಲಿ ಖಾಯಂ ನ್ಯಾಯಮೂರ್ತಿಯಾಗಿದ್ದರು. ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ 2024ರ ಫೆಬ್ರುವರಿ 25ರಂದು ಅಧಿಕಾರ ಸ್ವೀಕರಿಸಿದ್ದರು.

ಪಾಕ್‌ಗೆ ಮಾಹಿತಿ ಸಿಆರ್‌ಪಿಎಫ್ ಸಿಬ್ಬಂದಿ ಬಂಧನ

ನವದೆಹಲಿ (ಪಿಟಿಐ): ಪಾಕಿಸ್ತಾನ ಗುಪ್ತಚರ ಸಂಸ್ಥೆಯೊಂದಿಗೆ ರಹಸ್ಯ ಮಾಹಿತಿಗಳನ್ನು ಹಂಚಿಕೊಂಡ ಆರೋಪದಡಿ ಸಿಆರ್‌ಪಿಎಫ್ ಸಿಬ್ಬಂದಿಯೊಬ್ಬರನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ದೆಹಲಿಯಲ್ಲಿ ಬಂಧಿಸಿದೆ.

ಆರೋಪಿ ಮೋತಿ ರಾಮ್ ಜಾಟ್ ಅವರು ಬೇಹುಗಾರಿಕಾ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಅವರು 2023ರಿಂದ ಪಾಕ್ ಗುಪ್ತಚರ ಅಧಿಕಾರಿಗಳ ಜೊತೆ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ರಹಸ್ಯ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ ಎಂದು ಎನ್‌ಐಎ ಅಧಿಕಾರಿಗಳು ಸೋಮವಾರ ಆರೋಪಿಸಿದ್ದಾರೆ.

ಪಟಿಯಾಲ ಹೌಸ್ ನ್ಯಾಯಾಲಯವು ಮೋತಿ ರಾಮ್‌ಗೆ ಜೂನ್ 6ರವರೆಗೆ ನ್ಯಾಯಾಂಗ ಬಂಧನ ವಿಧಿಸಿದೆ.

ತಪ್ಪೊಪ್ಪಿಗೆ ಹೇಳಿಕೆ ಆಶ್ಚರ್ಯ ತಂದಿದೆ: ಹಿಮಂತ ಶರ್ಮ

ಗುವಾಹಟಿ (ಪಿಟಿಐ): 'ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಅವರ ಪತ್ನಿ ಪಾಕ್ ಸರ್ಕಾರದಿಂದ ವೇತನ ಪಡೆಯುತ್ತಿದ್ದರು ಎಂದು ಕಾಂಗ್ರೆಸ್ ಹಿರಿಯ ಮುಖಂಡರ ತಪ್ಪೊಪ್ಪಿಗೆ ಹೇಳಿಕೆಯು ಆಶ್ಚರ್ಯ ತರಿಸಿದೆ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ತಿಳಿಸಿದ್ದಾರೆ.

'ಈ ಬಗ್ಗೆ ನನಗೆ ಮೊದಲು ತಿಳಿದಿರಲಿಲ್ಲ. ಕಾಂಗ್ರೆಸ್ ನಾಯಕ ರಿಪುನ್ ಬೋರಾ ಅವರ ಹೇಳಿಕೆ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಶರ್ಮಾ ತಿಳಿಸಿದ್ದಾರೆ.

'ಗೌರವ್ ಗೊಗೊಯ್ ಅವರ ಬ್ರಿಟನ್ ಮೂಲದ ಪತ್ನಿ ಎಲಿಜಬೆತ್ ಕೋಲ್‌ಬರ್ನ್ ಅವರು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಜೊತೆ ನಿಕಟ ಸಂಪರ್ಕ ಹೊಂದಿದ್ದು, ಅಲ್ಲಿಗೆ 19 ಬಾರಿ ಭೇಟಿ ನೀಡಿದ್ದಾರೆ' ಎಂದು ಬಿಜೆಪಿ ಆರೋಪಿಸಿದೆ.



ಹಿಮಂತ ಬಿಸ್ವ ಶರ್ಮ

'ಎಲಿಜಬೆತ್ ಕೋಲ್‌ಬರ್ನ್ ಅವರು ಅಂತರ ರಾಷ್ಟ್ರೀಯ ಸ್ವಯಂಸೇವಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಪಾಕ್ ಸೇರಿದಂತೆ ಹಲವು ದೇಶಗಳಿಗೆ ಇದರ ಪಾಲು ಇದೆ' ಎಂದು ಬೋರಾ ಭಾನುವಾರ ಹೇಳಿಕೆ ನೀಡಿದ್ದರು.

'ಪಾಕ್‌ನಿಂದ ವೇತನ ಪಡೆಯುತ್ತಿದ್ದ ಅವರು, ಹಲವು ಬಾರಿ ಅಲ್ಲಿಗೆ ಭೇಟಿ ನೀಡಿದ್ದರು. ಈ ಕಾರಣದಿಂದಲೇ ಒಬ್ಬರ ದೇಶಭಕ್ತಿ ಅಳೆಯಲು ಸಾಧ್ಯವೇ? ಬಹಳಷ್ಟು ಭಾರತೀಯರು– ಪಾಕಿಸ್ತಾನಿಗಳು ಕಾನೂನಾತ್ಮಕವಾಗಿ ಎರಡು ದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ' ಎಂದು ಬೋರಾ ಹೇಳಿದ್ದರು.

2 ಪಾಳಿಯಲ್ಲಿ ನೀಟ್–ಪಿಜಿ ಪರೀಕ್ಷೆ ವಿಚಾರಣೆಗೆ ಸಮ್ಮತಿ

ನವದೆಹಲಿ (ಪಿಟಿಐ): ನೀಟ್–ಪಿಜಿ ಪರೀಕ್ಷೆಯನ್ನು 2 ಪಾಳಿಯಲ್ಲಿ ನಡೆಸುವ ರಾಷ್ಟ್ರೀಯ ಪರೀಕ್ಷಾ ಮಂಡಳಿಯ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸೋಮವಾರ ಸಮ್ಮತಿಸಿದೆ.

ಜೂನ್ 15ರಿಂದ 2 ಪಾಳಿಯಲ್ಲಿ ಪರೀಕ್ಷೆ ನಡೆಯಲಿರುವ ಕಾರಣ ಅರ್ಜಿಯನ್ನು ತುರ್ತಾಗಿ ವಿಚಾರಣೆ ನಡೆಸಬೇಕೆಂದು ಅರ್ಜಿದಾರರ ಪರ ವಕೀಲರು ಮನವಿ ಮಾಡಿದ್ದರು.

ಸುಪ್ರೀಂ ಕೋರ್ಟ್ ಸಿಜೆಐ ಬಿ.ಆರ್. ಗವಾಯಿ ಹಾಗೂ ನ್ಯಾಯಮೂರ್ತಿ ಆಗಸ್ಟೀನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು.

ಷೇರುಪೇಟೆ ವಹಿವಾಟು 455

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,853
ಇಂದಿನ ಅಂತ್ಯ	25,001
▲	148
ದಿನದ ಗರಿಷ್ಠ	25,079

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹605

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹125-538
ದ್ವಿತಳಿ (ಬಿ.ವಿ)	₹280-710

ವಿನಿಮಯ ದರ

$ ಡಾಲರ್	85.10
£ ಪೌಂಡ್	115.53
€ ಯೂರೊ	96.96
¥ ಯೆನ್ (100ಕ್ಕೆ)	60

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹18000-19888
ದಾವಣಗೆರೆ	₹15350-16050
ಮಧುಗಿರಿ	₹10000-17500
ತಿಪಟೂರು	₹19500-20900
ತುರುವೇಕೆರೆ	₹16800-20300

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ		ಚಾಲಿ	26199-39499	ಕೆಂಪುಗೋಟು	21019-22809
ಹೊಸತು	25000-49500	ಕೋಕ	8669-20899	ರಾಶಿ	40689-46299
ಹಳತು	30000-52000	ಕೆಂಪುಗೋಟು	15989-27000	ತಟ್ಟಿಬೆಟ್ಟೆ	29209-42319
ಕುಮಟ		ರಾಶಿ	26899-58499	ಶಿರಸಿ	
ಚಾಲಿ	38999-43898	ಸಿಪ್ಪೆಗೋಟು	7099-17899	ಬೆಟ್ಟೆ	27006-40001
ಚಿಪ್ಪು	27569-32089	ಯಲ್ಲಾಪುರ		ಬಿಳೆಗೋಟು	20199-33099
ಕೋಕ	7089-18699	ಬಿಳೆಗೋಟು	24239-30289	ಚಾಲಿ	35199-44199
ಫ್ಯಾಕ್ಟರಿ	6099-25649	ಚಾಲಿ	35599-42599	ಕೆಂಪುಗೋಟು	13701-22899
ಹೊಸಚಾಲಿ	37569-44599	ಕೋಕ	16319-26969	ರಾಶಿ	40099-48299
ಸಾಗರ		ಹಸಚಾಲಿ	39099-42299		
ಬಿಳೆಗೋಟು	8919-28121				

ತಿರುಗಣೆ ಆಮದಿಗೆ ಕೇಂದ್ರ ನಿರ್ಬಂಧ

ನವದೆಹಲಿ (ಪಿಟಿಐ): ಚೀನಾದಂತಹ ದೇಶಗಳಿಂದ ಆಮದಾಗುವ ಕಡಿಮೆ ಗುಣಮಟ್ಟದ ಬಾಗಿಲಿನ ತಿರುಗಣೆ (ಹಿಂಜಸ್) ಆಮದನ್ನು ಕೇಂದ್ರ ಸರ್ಕಾರ ಸೋಮವಾರ ನಿರ್ಬಂಧಿಸಿದೆ. ಹಿಂಜಸ್ ಅನ್ನು ಬಾಗಿಲು ಮತ್ತು ಚೌಕಟ್ಟು ಜೋಡಿಸಲು ಬಳಸಲಾಗುತ್ತದೆ.

ಪ್ರತಿ ಕೆ.ಜಿಗೆ ₹280ಕ್ಕಿಂತ ಕಡಿಮೆ ದರದ, ವಿಮೆ, ಸರಕು ಸಾಗಣೆ (ಸಿಐಎಫ್) ಮೌಲ್ಯವನ್ನು ಹೊಂದಿರುವ ಈ ವಸ್ತುಗಳ ಆಮದು ನಿರ್ಬಂಧಿಸಲಾಗಿದೆ ಎಂದು ವಿದೇಶ ವ್ಯಾಪಾರ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ಅಧಿಸೂಚನೆಯಲ್ಲಿ ತಿಳಿಸಿದೆ.

ಈಗ, ಈ ಸರಕುಗಳ ದರವು ಪ್ರತಿ ಕೆ.ಜಿಗೆ ₹280ಕ್ಕಿಂತ ಕಡಿಮೆಯಿದ್ದರೆ ಆಮದುದಾರರು ಡಿಜಿಎಫ್‌ಟಿಯಿಂದ ಅನುಮತಿ ಅಥವಾ ಪರವಾನಗಿಯನ್ನು ಪಡೆಯಬೇಕಾಗುತ್ತದೆ ಎಂದು ತಿಳಿಸಿದೆ.

ಚೀನಾ, ಇಟಲಿ ಮತ್ತು ಜರ್ಮನಿಯಂತಹ ದೇಶಗಳಿಂದ ಪ್ರಸ್ತುತ ಈ ಸರಕುಗಳು ಆಮದಾಗುತ್ತಿವೆ.

ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿದ ಬೆಲೆ

ಕ್ವಿಂಟಲ್ ಕೊಬ್ಬರಿ ₹20,900

ಪ್ರಜಾವಾಣಿ ವಾರ್ತೆ



ತುಮಕೂರು: ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಸೋಮವಾರ ಕೊಬ್ಬರಿ ಧಾರಣೆ ಸಾರ್ವಕಾಲಿಕ ದಾಖಲೆ ಬರೆದಿದೆ. ಕ್ವಿಂಟಲ್ ಕೊಬ್ಬರಿ ಬೆಲೆ ₹20,900ಕ್ಕೆ ಏರಿಕೆಯಾಗಿದೆ.

ಕ್ವಿಂಟಲ್ ಕೊಬ್ಬರಿ ಗರಿಷ್ಠ ₹20,900ಕ್ಕೆ ಬೆಲೆ ಮಾರಾಟವಾದರೆ, ಕನಿಷ್ಠ ₹19,500 ಮತ್ತು ಮಾದರಿ ₹20,500ಕ್ಕೆ ಮಾರಾಟವಾಗಿದೆ. ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ 3,056 ಕ್ವಿಂಟಲ್ (7,112 ಚೀಲ) ಕೊಬ್ಬರಿ ಆವಕವಾಗಿತ್ತು.

ಕಳೆದ ಮಾರ್ಚ್ 24ರಂದು ₹19,051ಕ್ಕೆ ಮಾರಾಟವಾಗುವ ಮೂಲಕ ದಾಖಲೆ ಬರೆದಿತ್ತು.

2014-2015ನೇ ಸಾಲಿನಲ್ಲಿ ಕ್ವಿಂಟಲ್ ₹19 ಸಾವಿರಕ್ಕೆ ಮಾರಾಟವಾಗಿದ್ದೇ ಈವರೆಗಿನ ದಾಖಲೆಯಾಗಿತ್ತು. ಕಳೆದ ಎರಡು ತಿಂಗಳಿಂದ ₹19 ಸಾವಿರದ ಆಸುಪಾಸಿನಲ್ಲೇ ಇದ್ದ ಬೆಲೆ ಈಗ ಒಮ್ಮೆಲೆ ಕ್ವಿಂಟಲ್‌ಗೆ ₹1 ಸಾವಿರ ಏರಿಕೆ ಕಂಡಿದೆ.

ಏರಿಕೆಗೆ ಕಾರಣ: ಮಾರುಕಟ್ಟೆಯಲ್ಲಿ ಕೊಬ್ಬರಿ ಆವಕ ತೀವ್ರವಾಗಿ ಕಡಿಮೆಯಾಗಿದ್ದು, ಟೆಂಡರ್ ಸಮಯದಲ್ಲಿ ಮಾಡಿದ ಬದಲಾವಣೆ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ.

ಹಿಂದೆ ವಾರದಲ್ಲಿ ಮೂರು ದಿನ (ಸೋಮವಾರ, ಬುಧವಾರ, ಶನಿವಾರ) ಟೆಂಡರ್ ಪ್ರಕ್ರಿಯೆ ನಡೆಯುತ್ತಿತ್ತು. ನವೆಂಬರ್‌ನಿಂದ ವಾರದಲ್ಲಿ ಎರಡು ದಿನ (ಸೋಮವಾರ, ಗುರುವಾರ) ಹರಾಜು ನಡೆಯುತ್ತಿದೆ. ಜತೆಗೆ ಬಿಡ್‌ದಾರರು ನೇರವಾಗಿ ಭಾಗವಹಿಸಲು ಅವಕಾಶ ನೀಡಿದ್ದು, ಖರೀದಿದಾರರೇ ಬೆಲೆ ನಿಗದಿಪಡಿಸಿ ಖರೀದಿಸುತ್ತಿರುವುದು ಬೆಲೆ ಹೆಚ್ಚಳಕ್ಕೆ ದಾರಿಮಾಡಿಕೊಟ್ಟಿದೆ ಎಂದು ತಿಪಟೂರು ಎಪಿಎಂಸಿ ಕಾರ್ಯದರ್ಶಿ ನ್ಯಾಮಗೌಡ ಹೇಳುತ್ತಾರೆ.

ಆವಕ ಕುಸಿತ: ಎಳನೀರು, ತೆಂಗಿನ ಕಾಯಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುತ್ತಿದ್ದು, ಕಾಯಿಯನ್ನು ಕೊಬ್ಬರಿಗೆ ದಾಸ್ತಾನು ಮಾಡುವುದು ಕಡಿಮೆಯಾಗಿದೆ. ಅಡಿಕೆಗೂ ಉತ್ತಮ ಬೆಲೆ ಸಿಗುತ್ತಿದ್ದು, ತೆಂಗಿನ ಜಾಗವನ್ನು ಅಡಿಕೆ ಬೆಳೆ ಆವರಿಸಿಕೊಂಡಿದೆ. ರೋಗ ಬಾಧೆ ಹಾಗೂ ಇತರ ಕಾರಣಗಳಿಂದ ತೆಂಗಿನ ಬೆಲೆ ಸಂಕಷ್ಟಕ್ಕೆ ಸಿಲುಕಿದ್ದು, ಕೊಬ್ಬರಿ ಇಳುವರಿ ತಗ್ಗಿಸಿದೆ.

ಜೂನ್‌ನಿಂದ 3 ತಿಂಗಳು ಕೊಬ್ಬರಿ ಮಾರಾಟಕ್ಕೆ ಬರಲಿದ್ದು, ಇದೇ ಬೆಲೆ ಸಿಗುವ ಆಶಾಭಾವನೆಯಲ್ಲಿ ರೈತರಿದ್ದಾರೆ. ಆವಕ ಕಡಿಮೆ ಇರುವುದರಿಂದ ಮುಂದಿನ ದಿನಗಳಲ್ಲಿ ಬೆಲೆ ಮತ್ತಷ್ಟು ಹೆಚ್ಚಬಹುದು

ವರ್ತಕರು

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 455 ಅಂಶ ಏರಿಕೆ

ಮುಂಬೈ (ಪಿಟಿಐ): ಐಟಿ, ಆಟೊ ವಲಯದ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರು ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆಯಾಗಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 455 ಅಂಶ ಹೆಚ್ಚಳವಾಗಿ, 82,176ಕ್ಕೆ ಅಂತ್ಯಗೊಂಡಿದೆ. ವಹಿವಾಟಿನ ವೇಳೆ 771 ಅಂಶ ಏರಿಕೆಯಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 148 ಏರಿಕೆಯಾಗಿ, 25,001ಕ್ಕೆ ಕೊನೆಗೊಂಡಿದೆ.

ಜಪಾನ್ ದೇಶವನ್ನು ಹಿಂದಿಕ್ಕಿರುವ ಭಾರತವು ಜಾಗತಿಕ ಮಟ್ಟದಲ್ಲಿ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಐರೋಪ್ಯ ಒಕ್ಕೂಟದ ದೇಶಗಳ ಆಮದು ಸರಕುಗಳ ಮೇಲೆ ಶೇ 50ರಷ್ಟು ಸುಂಕವನ್ನು ಜುಲೈ 9ರ ವರೆಗೆ ಮುಂದೂಡಿದ್ದಾರೆ. ಇದು ದೇಶದ ಷೇರು ಸೂಚ್ಯಂಕಗಳ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮಹೀಂದ್ರ ಆ್ಯಂಡ್ ಮಹೀಂದ್ರ, ಎಚ್‌ಸಿಎಲ್ ಟೆಕ್, ಟಾಟಾ ಮೋಟರ್ಸ್, ನೆಸ್ಲೆ, ಐಟಿಸಿ, ಹಿಂದುಸ್ತಾನ್ ಯೂನಿಲಿವರ್, ಲಾರ್ಸೆನ್ ಆ್ಯಂಡ್ ಟೂಬ್ರೊ ಮತ್ತು ಟೆಕ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಎಟರ್ನಲ್, ಅಲ್ಟ್ರಾಟೆಕ್ ಸಿಮೆಂಟ್, ಪವರ್ ಗ್ರಿಡ್, ಟಾಟಾ ಸ್ಟೀಲ್ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್ ಸಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ಶಾಂಘೈ ಮತ್ತು ಹಾಂಗ್ ಕಾಂಗ್ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ಶುಕ್ರವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ₹1,794 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.



ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.17ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರೆಲ್ 64.89 ಡಾಲರ್ (₹5,523) ಆಗಿದೆ.

ಗ್ರೋವ್: ಐಪಿಒಗಾಗಿ ಸೆಬಿಗೆ ಅರ್ಜಿ

ನವದೆಹಲಿ (ಪಿಟಿಐ): ಷೇರು ವಹಿವಾಟು ಕಂಪನಿ 'ಗ್ರೋವ್' ಆರಂಭಿಕ ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಅನುಮತಿ ಕೋರಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಅರ್ಜಿ ಸಲ್ಲಿಸಿದೆ.

₹5,955 ಕೋಟಿಯಿಂದ ₹8,507 ಕೋಟಿ (1 ಬಿಲಿಯನ್ ಡಾಲರ್) ಬಂಡವಾಳ ಸಂಗ್ರಹಕ್ಕೆ ಮುಂದಾಗಿದೆ. ಈ ಮೊತ್ತವನ್ನು ತಂತ್ರಜ್ಞಾನದ ಅಭಿವೃದ್ಧಿ ಮತ್ತು ವಹಿವಾಟು ವಿಸ್ತರಣೆಗೆ ಬಳಸಿಕೊಳ್ಳಲು ಉದ್ದೇಶಿಸಿದೆ ಎಂದು ಮೂಲಗಳು ಪಿಟಿಐಗೆ ಸೋಮವಾರ ತಿಳಿಸಿವೆ.

ಈ ಹಂಚಿಕೆಯನ್ನು ನಿರ್ವಹಿಸಲು ಗ್ರೋವ್, ಜೆ.ಪಿ ಮಾರ್ಗನ್ ಇಂಡಿಯಾ ಪ್ರೈವೆಟ್ ಲಿಮಿಟೆಡ್, ಕೋಟಕ್ ಮಹೀಂದ್ರ ಕ್ಯಾಪಿಟಲ್ ಕಂಪನಿ ಲಿಮಿಟೆಡ್, ಸಿಟಿ ಗ್ರೂಪ್ ಗ್ಲೋಬಲ್ ಮಾರ್ಕೆಟ್ಸ್ ಪ್ರೈ. ಲಿಮಿಟೆಡ್, ಎಕ್ಸಿಸ್ ಕ್ಯಾಪಿಟಲ್ ಲಿಮಿಟೆಡ್ ಮತ್ತು ಮೋತಿಲಾಲ್ ಓಸ್ವಾಲ್ ಸೆಕ್ಯುರಿಟೀಸ್ ಲಿಮಿಟೆಡ್ ಅನ್ನು ನೇಮಿಸಿಕೊಂಡಿದೆ ಎಂದು ತಿಳಿಸಿವೆ.

2016ರಲ್ಲಿ ಗ್ರೋವ್ ಆರಂಭವಾಗಿದ್ದು, ಪ್ರಸಕ್ತ ವರ್ಷದ ಮಾರ್ಚ್ ವೇಳೆಗೆ ಮಾರುಕಟ್ಟೆಯಲ್ಲಿ ಶೇ 26ರಷ್ಟು ಪಾಲನ್ನು ಹೊಂದಿದೆ. 1.29 ಕೋಟಿ ಬಳಕೆದಾರರಿದ್ದಾರೆ.

ಉತ್ಪಾದನೆ ಕುಂಠಿತವೇ ರಫ್ತು ಇಳಿಕೆಗೆ ಕಾರಣ: ಅಂದಾಜು

'ಹತ್ತಿ ರಫ್ತು 13 ಲಕ್ಷ ಬೇಲ್ ಕುಸಿತ'



ಮುಂಬೈ (ಪಿಟಿಐ): 2024–25ರ ಋತುವಿನಲ್ಲಿ (ಅಕ್ಟೋಬರ್‌ನಿಂದ ಸೆಪ್ಟೆಂಬರ್) ದೇಶದ ಹತ್ತಿ ರಫ್ತು 13 ಲಕ್ಷ ಬೇಲ್‌ನಷ್ಟು ಇಳಿಕೆಯಾಗಲಿದೆ ಎಂದು ಭಾರತೀಯ ಹತ್ತಿ ಬೆಳೆಗಾರರ ಒಕ್ಕೂಟ (ಸಿಎಐ) ಅಂದಾಜಿಸಿದೆ.

2023–24ರ ಇದೇ ಅವಧಿಯಲ್ಲಿ ರಫ್ತು ಪ್ರಮಾಣ 28.36 ಲಕ್ಷ ಬೇಲ್‌ನಷ್ಟಿತ್ತು. ಇದು ಪ್ರಸಕ್ತ ಅವಧಿಯಲ್ಲಿ 15 ಲಕ್ಷ ಬೇಲ್‌ಗೆ ಇಳಿಯಬಹುದು ಎಂದು ಅಂದಾಜಿಸಲಾಗಿದೆ. ಒಟ್ಟಾರೆ 13.36 ಲಕ್ಷ ಬೇಲ್‌ಗಳಷ್ಟು ಕಡಿಮೆಯಾಗಲಿದೆ. ಬೆಲೆ ಇಳಿಕೆ ಮತ್ತು ಉತ್ಪಾದನೆಯಲ್ಲಿ ಕುಂಠಿತವಾಗಿರುವುದೇ ರಫ್ತು ಇಳಿಕೆಗೆ ಕಾರಣ ಎಂದು ಸೋಮವಾರ ತಿಳಿಸಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಜಿಲ್ ದೇಶದ ಹತ್ತಿಗೆ ಕಡಿಮೆ ದರವಿದೆ. ಇದು ಭಾರತಕ್ಕಿಂತ ಶೇ 7ರಷ್ಟು ಕಡಿಮೆ. ಅಲ್ಲದೆ, ದೇಶದ ಉತ್ಪಾದನೆಯು ಶೇ 11ಕ್ಕಿಂತಲೂ ಕಡಿಮೆಯಾಗಿದೆ. ಇದರ ಪರಿಣಾಮವಾಗಿ ಆಮದು ಪ್ರಮಾಣ ಹೆಚ್ಚಳವಾಗಿದ್ದು, ದೇಶದ ರಫ್ತು ಕಡಿಮೆಯಾಗಿದೆ ಎಂದು ಸಿಎಐ ಅಧ್ಯಕ್ಷ ಅತುಲ್ ಎಸ್ ಗಣತ್ರಾ ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ.

ಪ್ರಸಕ್ತ ಋತುವಿನಲ್ಲಿ 33 ಲಕ್ಷ ಬೇಲ್ ಆಮದಾಗುವ ಅಂದಾಜು ಇದೆ. ಇದು ಕಳೆದ ಋತುವಿಗೆ ಹೋಲಿಸಿದರೆ 17.80 ಲಕ್ಷ ಬೇಲ್‌ನಷ್ಟು ಹೆಚ್ಚು. ದೇಶದ ಒಟ್ಟು ಹತ್ತಿ ಉತ್ಪಾದನೆಯು 291 ಲಕ್ಷ ಬೇಲ್ ಆಗಬಹುದು. ಹಿಂದಿನ ಇದೇ ಅವಧಿಯಲ್ಲಿ 327 ಲಕ್ಷ ಬೇಲ್‌ನಷ್ಟಿತ್ತು ಎಂದು ಹೇಳಿದ್ದಾರೆ.

ಏಪ್ರಿಲ್ ಅಂತ್ಯದವರೆಗೆ ಹತ್ತಿ ಬಳಕೆ 185 ಲಕ್ಷ ಬೇಲ್ ಮತ್ತು ರಫ್ತು 10 ಲಕ್ಷ ಬೇಲ್‌ಗಳೆಂದು ಅಂದಾಜಿಸಲಾಗಿದೆ. 130 ಲಕ್ಷ ಬೇಲ್‌ಗಳ ದಾಸ್ತಾನು ಇದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಜವಳಿ ಗಿರಣಿಗಳಲ್ಲಿ 35 ಲಕ್ಷ ಬೇಲ್‌ಗಳು ಮತ್ತು ಉಳಿದ 95 ಲಕ್ಷ ಬೇಲ್‌ಗಳು ಭಾರತೀಯ ಹತ್ತಿ ನಿಗಮ, ಮಹಾರಾಷ್ಟ್ರ ಫೆಡರೇಷನ್ ಮತ್ತು ಇತರರ ಬಳಿ (ಕಂಪನಿಗಳು, ವ್ಯಾಪಾರಿಗಳು, ರಫ್ತುದಾರರು, ಇತರರು) ಇದೆ.

ಮುಖ್ಯಾಂಶಗಳು

- ಪ್ರಸಕ್ತ ಋತುವಿನಲ್ಲಿ 33 ಲಕ್ಷ ಬೇಲ್ ಆಮದು ಸಾಧ್ಯತೆ
- ದೇಶದ ಒಟ್ಟು ಹತ್ತಿ ಉತ್ಪಾದನೆಯು 291 ಲಕ್ಷ ಬೇಲ್: ಅಂದಾಜು
- ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಜಿಲ್ ದೇಶದ ಹತ್ತಿ ಅಗ್ಗ

ಗೂಗಲ್ ಪ್ಲೇಸ್ಟೋರ್‌ನಿಂದ ಬೈಜುಸ್ ಕಲಿಕಾ ಆ್ಯಪ್ ತೆರವು

ನವದೆಹಲಿ (ಪಿಟಿಐ): ಅಮೆಜಾನ್ ವೆಬ್ ಸರ್ವಿಸಸ್‌ಗೆ ಹಣ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಕಾರಣಕ್ಕೆ ಬೈಜುಸ್‌ನ ಕಲಿಕಾ ಆ್ಯಪ್ ಅನ್ನು ಗೂಗಲ್ ಪ್ಲೇಸ್ಟೋರ್ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಬೈಜುಸ್ ಬ್ರ್ಯಾಂಡ್‌ನಡಿ ಕಾರ್ಯನಿರ್ವಹಿಸುವ 'ಥಿಂಕ್ ಆ್ಯಂಡ್ ಲರ್ನ್'ನಂತಹ ಇತರ ಕೆಲವು ಆ್ಯಪ್‌ಗಳು ಗೂಗಲ್ ಪ್ಲೇಸ್ಟೋರ್‌ನಲ್ಲಿ ಬಳಕೆಗೆ ಇನ್ನೂ ಲಭ್ಯವಿವೆ.

'ಬೈಜುಸ್‌ನ ಕಲಿಕಾ ಆ್ಯಪ್‌ಗಳನ್ನು ಬೆಂಬಲಿಸಿ ಅದಕ್ಕೆ ಪೂರಕವಾಗಿ ಮಾರುಕಟ್ಟೆ ಒದಗಿಸುತ್ತಿದ್ದ ಅಮೆಜಾನ್ ವೆಬ್ ಸರ್ವಿಸಸ್‌ಗೆ ಹಣ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಕಾರಣಕ್ಕೆ ಈ ಆ್ಯಪ್ ಅನ್ನು ಗೂಗಲ್ ಪ್ಲೇಸ್ಟೋರ್‌ನಿಂದ ತೆಗೆದು ಹಾಕಲಾಗಿದೆ' ಎಂದು ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

4ರಿಂದ 12ನೇ ತರಗತಿಗಳವರೆಗಿನ ಗಣಿತ, ಭೌತವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವವಿಜ್ಞಾನ, 6ರಿಂದ 8ನೇ ತರಗತಿಗಳ ಸಾಮಾಜಿಕ ಅಧ್ಯಯನಗಳ ವಿಷಯಗಳು ಬೈಜುಸ್ ಲರ್ನಿಂಗ್ ಆ್ಯಪ್‌ನಲ್ಲಿವೆ. ಜೆಇಇ, ನೀಟ್ ಮತ್ತು ಐಎಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವವರಿಗೂ ಸಹ ಬೈಜುಸ್‌ನ ಈ ಆ್ಯಪ್ ಕಲಿಕಾ ಮಾಹಿತಿ ಒದಗಿಸುತ್ತಿದೆ. ಈ ಆ್ಯಪ್, ಆ್ಯಪಲ್‌ನ ಆ್ಯಪ್ ಸ್ಟೋರ್‌ನಲ್ಲಿ ಇನ್ನೂ ಲಭ್ಯವಿದೆ.

ಬೈಜುಸ್‌ನ ಪ್ರೀಮಿಯಂ ಲೀನಿಂಗ್ ಆ್ಯಪ್ ಮತ್ತು ಎಕ್ಸಾಮ್ ಪ್ರೆಪ್ ಆ್ಯಪ್ ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿವೆ.

ಸಾಲದಾತ ಅಧಿಕೃತ ಸಂಸ್ಥೆ ಗ್ಲಾಸ್ ಟ್ರಸ್ಟ್ ಮತ್ತು ವಿವಿಧ ಹೂಡಿಕೆದಾರರ ಮೇಲ್ಮನವಿಯ ಮೇರೆಗೆ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು ಬೈಜುಸ್ ವಿರುದ್ಧ ದಿವಾಳಿತನ ಪ್ರಕ್ರಿಯೆಗಳನ್ನು ಪ್ರಾರಂಭಿಸಿದೆ.

ಡಿಆರ್‌ಡಿಒ ಮುಖ್ಯಸ್ಥ ಸಮೀರ್ ಸೇವಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಮುಖ್ಯಸ್ಥ ಸಮೀರ್ ವಿ.ಕಾಮತ್ ಅವರ ಸೇವಾವಧಿಯನ್ನು ಕೇಂದ್ರ ಸರ್ಕಾರವು ಇನ್ನೊಂದು ವರ್ಷ ವಿಸ್ತರಿಸಿದೆ.

'ಸಮೀರ್ ಅವರ ಸೇವಾವಧಿಯನ್ನು 2026ರ ಮೇ 31ರವರೆಗೆ ವಿಸ್ತರಿಸಲು ಸಚಿವ ಸಂಪುಟದ ನೇಮಕಾತಿ ಸಮಿತಿಯು ಒಪ್ಪಿಗೆ ನೀಡಿದೆ' ಎಂದು ಕೇಂದ್ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಸಮೀರ್ ಅವರ ಸೇವಾವಧಿಯನ್ನು ಕೇಂದ್ರ ಸರ್ಕಾರ ವಿಸ್ತರಿಸಿದ್ದು ಇದು ಎರಡನೇ ಬಾರಿ. ಕಳೆದ ವರ್ಷ ಮೇ 27ರಂದು ಅವರ ಸೇವಾವಧಿಯನ್ನು ಒಂದು ವರ್ಷ ವಿಸ್ತರಿಸಲಾಗಿತ್ತು.

ಕಾಮತ್ ಅವರು 2022ರ ಆಗಸ್ಟ್ 25 ರಿಂದ ಡಿಆರ್‌ಡಿಒ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

'ದಟ್ಟಾರಣ್ಯದಲ್ಲಿ ಶರಾವತಿ ಯೋಜನೆ ಏಕೆ?'

ಒಂದನೇ ಪುಟದಿಂದ...

'ನಾವು ನಡೆಸಿದ ವಿಶ್ಲೇಷಣೆಯ ಪ್ರಕಾರ, ಪ್ರಸ್ತಾವಿತ ಅರಣ್ಯ ಪ್ರದೇಶವು ಹೆಚ್ಚಿನ ಸಂರಕ್ಷಣಾ ಮೌಲ್ಯದ ವಲಯದಲ್ಲಿ ಬರುತ್ತದೆ. ಅತಿ ದಟ್ಟ ಕಾಡು ಬಳಸುತ್ತಿರುವ ಬಗ್ಗೆ ರಾಜ್ಯ ಸೂಕ್ತ ಸಮರ್ಥನೆ ನೀಡಬೇಕು' ಎಂದು ಸಚಿವಾಲಯ ತಾಕೀತು ಮಾಡಿದೆ.

'ಯೋಜನೆಯ ಸುಲಲಿತ ಅನುಷ್ಠಾನಕ್ಕೆ ಸೂಕ್ತವಾದ ಜಾಗವನ್ನೇ ಆಯ್ಕೆ ಮಾಡಲಾಗಿದೆ. ಇಲ್ಲಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಬೇಕಾದ ಅಗತ್ಯ ಮೂಲಸೌಕರ್ಯಗಳು ಇವೆ' ಎಂದು ರಾಜ್ಯ ಸರ್ಕಾರ ಸಮಜಾಯಿಷಿ ನೀಡಿದೆ. ತಳಕಳಲೆ ಮತ್ತು ಗೇರುಸೊಪ್ಪ ಜಲಾಶಯಗಳು ಇರುವುದರಿಂದ ಹೊಸ ಅಣೆಕಟ್ಟೆ ನಿರ್ಮಾಣದ ಅಗತ್ಯವೇ ಇಲ್ಲ. ರಸ್ತೆಗಳು ಹಾಗೂ ಕಚೇರಿಗಳು ಇರುವುದರಿಂದ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಅರಣ್ಯ ಬಳಸಬೇಕಿಲ್ಲ. ಇಲ್ಲಿ ಪ್ರತಿನಿತ್ಯ 120 ಕೋಟಿ ಯೂನಿಟ್ ಟನ್ ವಿದ್ಯುತ್ ಸಂಗ್ರಹ ಮಾಡಬಹುದು' ಎಂದೂ ತಿಳಿಸಿದೆ.

ಯೋಜನೆಗೆ 54 ಹೆಕ್ಟೇರ್ (134 ಎಕರೆ) ಅರಣ್ಯ ಬಳಸಲಾಗುತ್ತಿದೆ. ಇದರಲ್ಲಿ 20 ಹೆಕ್ಟೇರ್ ಅರಣ್ಯವು ನೀರು ವಾಹಕ ವ್ಯವಸ್ಥೆಗೆ ಬಳಕೆಯಾಗಲಿದೆ. ಇದನ್ನು ನೆಲಮಟ್ಟದಿಂದ 50ರಿಂದ 430 ಮೀಟರ್ ಆಳದಲ್ಲಿ ನಿರ್ಮಿಸಲಾಗುತ್ತದೆ. ಇದರಿಂದ, ಅರಣ್ಯಕ್ಕೆ ಭಾರಿ ಹಾನಿ ಆಗುವುದಿಲ್ಲ ಎಂದು ರಾಜ್ಯ ಸ್ಪಷ್ಟಪಡಿಸಿದೆ. ಮೇಲಿನ ಹಾಗೂ ಕೆಳಗಿನ ಜಲಾಶಯಗಳನ್ನು ಸಂಪರ್ಕಿಸಲು ಪರ್ಯಾಯ ಮಾರ್ಗಗಳ ಬಗ್ಗೆಯೂ ಅಧ್ಯಯನ ನಡೆಸಲಾಗಿತ್ತು. ಹೆಚ್ಚಿನ ಕಾಡು ಬೇಕಾಗುತ್ತದೆ ಎಂಬ ಕಾರಣಕ್ಕೆ ಈ ಪ್ರಸ್ತಾವ ಕೈಬಿಡಲಾಗಿತ್ತು' ಎಂದೂ ಹೇಳಿದೆ.

ಕಕ್ಷಿದಾರರಿಗೆ ತ್ವರಿತ ನ್ಯಾಯ

ಒಂದನೇ ಪುಟದಿಂದ...

'ನ್ಯಾಯಾಲಯದಲ್ಲಿ ಪ್ರಕರಣ ದಾಖಲಾದ ದಿನದಂದು ಅಥವಾ ಮೊದಲ ವಿಚಾರಣೆಯ ದಿನದಂದು ಅಂತಿಮ ತೀರ್ಪು ಪ್ರಕಟಿಸುವ ದಿನ ನಿರ್ಣಯವಾಗುವ ಅತ್ಯಂತ ಪರಿಣಾಮಕಾರಿ ನ್ಯಾಯಾಂಗದ ಕಾರ್ಯನಿರ್ವಹಣೆಗೂ ಈ ತಿದ್ದುಪಡಿ ಇಂಬು ನೀಡಲಿದೆ. ಆ ಮೂಲಕ, ಇನ್ನು ಮುಂದೆ ನ್ಯಾಯಾಲಯಗಳಲ್ಲಿ ಯಾವುದೇ ವಿಳಂಬ ಇಲ್ಲದೇ ಪ್ರಕರಣಗಳು ಇತ್ಯರ್ಥವಾಗಲು ಅವಕಾಶ ಆಗಲಿದೆ' ಎಂದು ವಿವರಿಸಿದರು.

'ಕಾಯ್ದೆ ತಿದ್ದುಪಡಿ ಮೂಲಕ, ಪ್ರಕರಣದ ವಿಚಾರಣೆಯ ಯಾವುದೇ ಹಂತದಲ್ಲಿ ಒಂದು ತಿಂಗಳ ಒಳಗಾಗಿ ಕೇವಲ ಮೂರು ಬಾರಿ ಮುಂದೂಡಿಕೆಗೆ ಮಾತ್ರ ಅವಕಾಶ ಸಿಗಲಿದೆ. ಈ ಅವಕಾಶದ ಯಾವುದೇ ಹಂತದಲ್ಲಿ ಅರ್ಜಿದಾರ- ಪ್ರತಿವಾದಿ ನಿಗದಿತ ಅವಧಿಯಲ್ಲಿ ಹೇಳಿಕೆ ಸಲ್ಲಿಸದಿದ್ದರೆ, ಅಂಥವರಿಗೆ ಮತ್ತೆ ಹೇಳಿಕೆ ನೀಡಲು ಅವಕಾಶ ಇರುವುದಿಲ್ಲ' ಎಂದು ಸಚಿವರು ತಿಳಿಸಿದರು.

'ಈ ಕಾಯ್ದೆಯಲ್ಲಿ ಪ್ರಕರಣದ ನಿರ್ವಹಣೆಯನ್ನು ಪುನರ್ ವ್ಯಾಖ್ಯಾನಿಸಲಾಗಿದೆ. ಸಾಕ್ಷಿಗಳ ವಿಚಾರಣೆಯನ್ನು ದೈನಂದಿನ, ನಿಗದಿತ ಅಥವಾ ವಾರದ ಆಧಾರದಲ್ಲಿ ಕೈಗೊಳ್ಳಬೇಕಿರುವುದರಿಂದ ಯಾವುದೇ ಪ್ರಕರಣ ಅನಿರ್ದಿಷ್ಟ ಕಾಲ ವಿಳಂಬಕ್ಕೆ ಅವಕಾಶ ಇರುವುದಿಲ್ಲ. ಅಲ್ಲದೆ, ಆರ್ಥಿಕವಾಗಿ ಕೈಗೆಟಕುವ ರೀತಿಯಲ್ಲಿ ತ್ವರಿತ ನ್ಯಾಯದಾನ ಸಾಧ್ಯವಾಗಲಿದೆ' ಎಂದೂ ಅವರು ವಿವರಿಸಿದರು.

ರಾಜ್ಯಸಭೆಯ 8 ಸ್ಥಾನಕ್ಕೆ ಜೂನ್ 19ರಂದು ಚುನಾವಣೆ

ನವದೆಹಲಿ (ಪಿಟಿಐ): ರಾಜ್ಯಸಭೆಯ ಎಂಟು ಸ್ಥಾನಗಳಿಗೆ ಜೂನ್ 19ರಂದು ಚುನಾವಣೆ ನಡೆಯಲಿದೆ ಎಂದು ಕೇಂದ್ರ ಚುನಾವಣಾ ಆಯೋಗ ಸೋಮವಾರ ತಿಳಿಸಿದೆ.

ಅಸ್ಸಾಂನಲ್ಲಿ ಎರಡು ಸ್ಥಾನಗಳು ಜೂನ್‌ನಲ್ಲಿ ಹಾಗೂ ತಮಿಳುನಾಡಿನಲ್ಲಿ ಆರು ಸ್ಥಾನಗಳು ಜುಲೈನಲ್ಲಿ ತೆರವಾಗಲಿವೆ. ಈ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

126 ಶಾಸಕರ ಬಲದ ಅಸ್ಸಾಂ ವಿಧಾನಸಭೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ 84 ಸದಸ್ಯರನ್ನು ಹೊಂದಿದೆ. ಅಸ್ಸಾಂನಲ್ಲಿ ತೆರವಾಗುವ ಎರಡೂ ಸ್ಥಾನಗಳನ್ನು ಉಳಿಸಿಕೊಳ್ಳುವ ಗುರಿಯನ್ನು ಎನ್‌ಡಿಎ ಹೊಂದಿದೆ.

ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆ ನೇತೃತ್ವದ ಮೈತ್ರಿಕೂಟವು ಆರು ಸ್ಥಾನಗಳ ಪೈಕಿ ನಾಲ್ಕು ಸ್ಥಾನಗಳನ್ನು ಗೆದ್ದುಕೊಳ್ಳುವ ನಿರೀಕ್ಷೆ ಇದೆ. ಎಐಎಡಿಎಂಕೆ ಮತ್ತು ಅದರ ಮಿತ್ರಪಕ್ಷವಾದ ಪಿಎಂಕೆ ಜೊತೆಯಾಗಿ ಇನ್ನುಳಿದ ಎರಡು ಸ್ಥಾನಗಳನ್ನು ಉಳಿಸಿಕೊಳ್ಳುವ ಸಾಧ್ಯತೆ ಇದೆ.

ಈ ಚುನಾವಣೆಯ ನಂತರದಲ್ಲಿ ರಾಜ್ಯಸಭೆಯಲ್ಲಿ ವಿವಿಧ ಪಕ್ಷಗಳ ಸಂಖ್ಯಾಬಲದಲ್ಲಿ ಬದಲಾವಣೆ ಆಗುವ ಸಾಧ್ಯತೆ ಇಲ್ಲ. ರಾಜ್ಯಸಭಾ ಚುನಾವಣೆಯ ಅಧಿಸೂಚನೆಯನ್ನು ಜೂನ್ 2ರಂದು ಹೊರಡಿಸಲಾಗುತ್ತದೆ ಎಂದು ಚುನಾವಣಾ ಆಯೋಗವು ತಿಳಿಸಿದೆ.

ಇಸ್ರೇಲ್ ದಾಳಿ: 52 ಸಾವು

ದೇರ್ ಅಲ್ ಬಲಾಹ್ (ಗಾಜಾ ಪಟ್ಟಿ) (ಎಪಿ): ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ 52 ಜನರು ಸೋಮವಾರ ಮೃತಪಟ್ಟಿದ್ದಾರೆ.

ನಿರಾಶ್ರಿತ ಶಿಬಿರವಾಗಿ ಪರಿವರ್ತಿಸಿರುವ ಶಾಲೆಯಲ್ಲಿ ಮಲಗಿದ್ದ 36 ಜನ ನಾಗರಿಕರು ಬಾಂಬ್ ದಾಳಿಯಿಂದ ಮೃತಪಟ್ಟಿದ್ದಾರೆ. ಆದರೆ, ಇದನ್ನು ಅಲ್ಲಗಳೆದಿರುವ ಇಸ್ರೇಲ್ ಸೇನೆ, ಶಾಲೆಯನ್ನು ಅಡಗುದಾಣವಾಗಿಸಿಕೊಂಡಿದ್ದ ಉಗ್ರರನ್ನು ಗುರಿಯಾಗಿಸಿ ದಾಳಿ ನಡೆಸಿ, ಹಮಾಸ್ ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಹೇಳಿಕೊಂಡಿದೆ.

ಮೃತರಲ್ಲಿ ಒಂದೇ ಕುಟುಂಬದ ಆರು ಮಂದಿ ಇದ್ದು, ತಂದೆ ಮತ್ತು ಅವರ ಐವರು ಮಕ್ಕಳು ಸೇರಿದ್ದಾರೆ. ಗಾಜಾ ನಗರದ ನೆರೆಯ ದರಾಜ್‌ನಲ್ಲಿರುವ ಈ ಶಾಲೆಯ ಮೇಲೆ ನಡೆದಿರುವ ದಾಳಿಯಲ್ಲಿ ಹಲವು ಮಂದಿ ಗಾಯಗೊಂಡಿದ್ದಾರೆ ಎಂದು ಸಚಿವಾಲಯದ ತುರ್ತು ಸೇವೆಯ ಮುಖ್ಯಸ್ಥ ಫಾಹ್ಮಿ ಅವಾದ್ ಹೇಳಿದ್ದಾರೆ. ಗಾಜಾ ನಗರದ ಶಿಫಾ ಮತ್ತು ಅಲ್-ಅಹ್ಲಿ ಆಸ್ಪತ್ರೆಗಳು ಸಾವಿನ ಸಂಖ್ಯೆಯನ್ನು ದೃಢಪಡಿಸಿವೆ.



ಗಾಜಾದಲ್ಲಿ ಹಾನಿಗೊಳಗಾದ ಶಾಲೆಯನ್ನು ಪ್ಯಾಲೆಸ್ಟೀನಿ ನಾಗರಿಕರು ಪರಿಶೀಲಿಸಿದರು ಎಪಿ/ಪಿಟಿಐ

ಉತ್ತರ ಗಾಜಾದ ಜಬಾಲಿಯಲ್ಲಿರುವ ಮನೆಯೊಂದರ ಮೇಲೆ ನಡೆದ ಪ್ರತ್ಯೇಕ ದಾಳಿಯಲ್ಲಿ ಐವರು ಮಹಿಳೆಯರು ಮತ್ತು ಇಬ್ಬರು ಮಕ್ಕಳು ಸೇರಿ ಒಂದೇ ಕುಟುಂಬದ 16 ಜನರು ಹತರಾಗಿದ್ದಾರೆ ಎಂದು ಶಿಫಾ ಆಸ್ಪತ್ರೆಯ ಹೇಳಿಕೆ ತಿಳಿಸಿದೆ.

ಗಾಜಾ ಪಟ್ಟಿ ಮೇಲೆ ಇಸ್ರೇಲ್ ನಡೆಸಿದ ಪ್ರತೀಕಾರದ ದಾಳಿಯಲ್ಲಿ ಈವರೆಗೆ ಸುಮಾರು 54 ಸಾವಿರ ಪ್ಯಾಲೆಸ್ಟೀನಿಯನ್ನರು ಹತರಾಗಿದ್ದಾರೆ. ಮೃತರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು ಎಂದು ಗಾಜಾ ಆರೋಗ್ಯ ಸಚಿವಾಲಯ ಹೇಳಿದೆ.

ಫ್ರಾನ್ಸ್ ಅಧ್ಯಕ್ಷರಿಗೆ ಇರುಸುಮುರುಸು

ಮ್ಯಾಕ್ರನ್ ಮುಖಕ್ಕೆ ತಿವಿದ ಪತ್ನಿ

ಪ್ಯಾರಿಸ್/ ಹನೋಯಿ (ಎಪಿ, ಎಎಫ್‌ಪಿ): ಆಗ್ನೇಯ ಏಷ್ಯಾ ಪ್ರವಾಸ ಕೈಗೊಂಡಿರುವ ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಅವರು ವಿಮಾನದಿಂದ ಕೆಳಗಿಳಿಯುವ ವೇಳೆ ಅವರ ಪತ್ನಿ ಬ್ರಿಜೆಟ್ ಅವರು, ಮ್ಯಾಕ್ರನ್ ಮುಖಕ್ಕೆ ತಿವಿದಿರುವ ದೃಶ್ಯ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಈ ದೃಶ್ಯ ವ್ಯಾಪಕವಾಗಿ ಹರಿದಾಡಿದೆ. ಇದು ದಂಪತಿ ನಡುವಣ ಜಗಳ ಎಂದು ಮ್ಯಾಕ್ರನ್ ಅವರ ಆಪ್ತರೊಬ್ಬರು ಹೇಳಿದ್ದಾರೆ.

ಈ ಬೆಳವಣಿಗೆಯನ್ನು ತಳ್ಳಿಹಾಕಿರುವ ಮ್ಯಾಕ್ರನ್, 'ಪತ್ನಿ ತಮಾಷೆ ಮಾಡುತ್ತಿದ್ದಳು. ನಮ್ಮ ಸಂಬಂಧ ಉತ್ತಮವಾಗಿದೆ. ಯಾವುದೇ ರೀತಿಯ ಕಲಹ ಇಲ್ಲ' ಎಂದು ಸ್ಪಷ್ಟನೆ ನೀಡಿದ್ದಾರೆ.

ವಿಯೆಟ್ನಾಂ ರಾಜಧಾನಿ ಹನೋಯಿಯಲ್ಲಿ ವಿಮಾನದಿಂದ ಇಳಿಯುವ ಮುನ್ನ ಬಾಗಿಲು ತೆರೆದ ಕೆಲವೇ ಕ್ಷಣಗಳಲ್ಲಿಯೇ ಈ ಘಟನೆ ನಡೆದಿದೆ. ಮ್ಯಾಕ್ರನ್ ಅವರು ಕ್ಷಣಕಾಲ ಇರುಸುಮುರುಸಿಗೆ ಒಳಗಾದರು. ತಕ್ಷಣವೇ ಚೇತರಿಸಿಕೊಂಡು ವಿಮಾನ ನಿಲ್ದಾಣದಲ್ಲಿ ತಮ್ಮನ್ನು ಸ್ವಾಗತಿಸಲು ಆಗಮಿಸಿದ್ದ ಅಧಿಕಾರಿಗಳತ್ತ ಕೈಬೀಸಿದರು. ಅಧ್ಯಕ್ಷರ ಹಾಗೂ ಪತ್ನಿಯ ನಡವಳಿಕೆ ವಿಚಾರವನ್ನು ಫ್ರಾನ್ಸ್‌ನ ಮಾಧ್ಯಮಗಳು ವಿಶ್ಲೇಷಣೆ ಮಾಡಿವೆ. ಕೆಲವು ಮಾಧ್ಯಮಗಳು ಮ್ಯಾಕ್ರನ್ ಅವರಿಗೆ ಪತ್ನಿಯಿಂದ ಕಪಾಳ ಮೋಕ್ಷವಾಗಿದೆ ಎಂದು ವರದಿ ಮಾಡಿವೆ.



ಬ್ರಿಜೆಟ್ ಮ್ಯಾಕ್ರನ್– ಎಮಾನ್ಯುಯೆಲ್ ಮ್ಯಾಕ್ರನ್

'ಕಪಾಳ ಮೋಕ್ಷವೇ– ಜಗಳವೇ' ಎಂದು ಪ್ರಶ್ನಿಸಿ 'ಲೆ ಪರಿಸಿಯಾನ್' ವೆಬ್‌ಸೈಟ್ ವರದಿ ಮಾಡಿದೆ.

ಎಮಾನ್ಯುಯೆಲ್ ಅವರು, ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಬ್ರಿಜೆಟ್ ಶಿಕ್ಷಕಿಯಾಗಿದ್ದರು. ಮ್ಯಾಕ್ರನ್ ಅವರಿಗೆ 47 ವರ್ಷವಾಗಿದ್ದು, ಬ್ರಿಜೆಟ್ ಅವರಿಗೆ 72 ವರ್ಷಗಳಾಗಿವೆ. ಮೂರು ಮಕ್ಕಳ ತಾಯಿಯಾಗಿದ್ದ ಬ್ರಿಜೆಟ್, ಪತಿಗೆ ವಿಚ್ಛೇದನ ನೀಡಿ ಮ್ಯಾಕ್ರನ್ ಅವರನ್ನು 2007ರಲ್ಲಿ ವಿವಾಹವಾದರು.

ಬಾಂಗ್ಲಾ: ಹೊಸ ಸೇವಾ ನಿಯಮ ಸರ್ಕಾರಿ ನೌಕರರ ಪ್ರತಿಭಟನೆ

ಢಾಕಾ (ರಾಯಿಟರ್ಸ್, ಪಿಟಿಐ): ಬಾಂಗ್ಲಾದೇಶದಲ್ಲಿ ಸರ್ಕಾರಿ ನೌಕರರ ಪ್ರತಿಭಟನೆಗೆ ಪ್ರಾಥಮಿಕ ಶಾಲಾ ಶಿಕ್ಷಕರು ಕೂಡ ಕೈ ಜೋಡಿಸಿದ್ದು, ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಸರ್ಕಾರದ ಮೇಲೆ ಒತ್ತಡ ಹೆಚ್ಚಿಸಿದೆ.

ಸರ್ಕಾರಿ ನೌಕರರು ದುರ್ನಡತೆ ತೋರಿದರೆ, ಅವರನ್ನು ಕೆಲಸದಿಂದ ವಜಾಗೊಳಿಸಲು ಸಾರ್ವಜನಿಕ ಆಡಳಿತ ಸಚಿವಾಲಯಕ್ಕೆ ಅನುಮತಿ ನೀಡುವ ಸುಗ್ರೀವಾಜ್ಞೆಯನ್ನು ಭಾನುವಾರ ಸರ್ಕಾರ ಹೊರಡಿಸಿತ್ತು. ಇದಕ್ಕೆ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿದ್ದು, ನೌಕರರು ಪ್ರತಿಭಟನೆ ಆರಂಭಿಸಿದ್ದಾರೆ. ಸಚಿವಾಲಯದ ಒಳಗೆ ನುಗ್ಗಲು ಯತ್ನಿಸಿದ ಪ್ರತಿಭಟನಕಾರರನ್ನು ಪ್ರವೇಶದ್ವಾರದಲ್ಲೇ ತಡೆಯಲಾಗಿದೆ.

ಸುಗ್ರೀವಾಜ್ಞೆಯು ದಮನಕಾರಿ ನಿರ್ಧಾರವಾಗಿದ್ದು, ಕೂಡಲೇ ಹಿಂದಕ್ಕೆ ಪಡೆಯಬೇಕು ಎಂದು ಸರ್ಕಾರಿ ನೌಕರರು ಒತ್ತಾಯಿಸಿದ್ದಾರೆ.

ಈ ನಡುವೆ ವೇತನ ಹೆಚ್ಚಳಕ್ಕೆ ಒತ್ತಾಯಿಸಿ, ಸರ್ಕಾರಿ ಶಾಲೆಯ ಸಾವಿರಾರು ಶಿಕ್ಷಕರು ದೇಶದಾದ್ಯಂತ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

ದೇಶದಲ್ಲಿ ತಲೆದೋರಿರುವ ರಾಜಕೀಯ ಅಸ್ಥಿರತೆ ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದ ಬಾಂಗ್ಲಾದೇಶ ಸೇನಾ ಮುಖ್ಯಸ್ಥ ವಾಕರ್-ಉಜ್ ರೆಹಮಾನ್, ಡಿಸೆಂಬರ್‌ನಲ್ಲಿ ಚುನಾವಣೆ ನಡೆಸುವ ಕುರಿತು ಕಳೆದ ವಾರದ ಭಾಷಣದಲ್ಲಿ ಉಲ್ಲೇಖಿಸಿದ್ದರು.

ಉಕ್ರೇನ್ ಮೇಲೆ ಮುಂದುವರಿದ ರಷ್ಯಾ ದಾಳಿ

ಪುಟಿನ್ ಹುಚ್ಚಾಟ: ಟ್ರಂಪ್ ಟೀಕೆ


ಕೀವ್ (ಎಎಫ್‌ಪಿ): ರಷ್ಯಾವು ಉಕ್ರೇನ್ ಮೇಲೆ ನಡೆಸಿದ ಬೃಹತ್ ವೈಮಾನಿಕ ದಾಳಿಯನ್ನು ಖಂಡಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, 'ಪುಟಿನ್ ಹುಚ್ಚಾಟವಾಡುತ್ತಿದ್ದಾರೆ' ಎಂದು ಟೀಕಿಸಿದ್ದಾರೆ.

ಟ್ರಂಪ್ ಎಚ್ಚರಿಕೆ ನೀಡಿದ ಕೆಲವೇ ಗಂಟೆಗಳಲ್ಲಿ ರಷ್ಯಾವು ಉಕ್ರೇನ್ ಮೇಲೆ ಮತ್ತೆ ಬೃಹತ್ ದಾಳಿ ನಡೆಸಿದೆ.

ಭಾನುವಾರ ರಾತ್ರಿ ರಷ್ಯಾದ 355 ಡ್ರೋನ್‌ಗಳು ಮತ್ತು 9 ಕ್ಷಿಪಣಿಗಳು ಉಕ್ರೇನ್ ಮೇಲೆ ದಾಳಿ ನಡೆಸಿವೆ ಎಂದು ಉಕ್ರೇನ್‌ನ ವಾಯುಪಡೆಯ ಸಂವಹನ ವಿಭಾಗದ ಮುಖ್ಯಸ್ಥರು ತಿಳಿಸಿದ್ದಾರೆ.

ರಷ್ಯಾ ದಾಳಿಯಿಂದಾಗಿ ಭಾನುವಾರ ಒಟ್ಟು 13 ಮಂದಿ ಮೃತಪಟ್ಟಿದ್ದಾರೆ. ಹಲವು ನಾಗರಿಕರಿಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ನಾವು ಪುಟಿನ್ ಅವರ ಜೊತೆ ಉತ್ತಮ ಸಂಬಂಧ ಹೊಂದಿದ್ದೇವೆ. ಆದರೆ ಅವರಿಗೆ ಏನೋ ಆಗಿದೆ. ಅವರು ಹುಚ್ಚಾಟವಾಡುತ್ತಿದ್ದಾರೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಾಮಾಜಿಕ ಜಾಲತಾಣದಲ್ಲಿ ಭಾನುವಾರ ರಾತ್ರಿ ಪೋಸ್ಟ್ ಮಾಡಿದ್ದಾರೆ.



ರಷ್ಯಾ ದಾಳಿಯಿಂದ ಹಾರ್ಕಿವ್ ಪ್ರದೇಶದಲ್ಲಿ ಹೊತ್ತಿ ಉರಿದ ಕಟ್ಟಡ ಎಎಫ್‌ಪಿ ಚಿತ್ರ

'ಕಾರಣವಿಲ್ಲದೇ ಪುಟಿನ್ ಹಲವಾರು ಜನರನ್ನು ಹತ್ಯೆ ಮಾಡುತ್ತಿದ್ದಾರೆ. ಉಕ್ರೇನ್ ನಗರಗಳ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸುತ್ತಿದ್ದಾರೆ' ಎಂದು ಟ್ರಂಪ್ ಹೇಳಿದ್ದಾರೆ.

'ಪುಟಿನ್ ಉಕ್ರೇನ್ ಅನ್ನು ವಶಪಡಿಸಿಕೊಳ್ಳಲು ಯತ್ನಿಸಿದರೆ ಅದು ರಷ್ಯಾದ ಅವನತಿಗೆ ಕಾರಣವಾಗಲಿದೆ' ಎಂದು ಟ್ರಂಪ್ ಎಚ್ಚರಿಸಿದ್ದಾರೆ. ಅದರ ಜೊತೆಗೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಬಗ್ಗೆಯೂ ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಟ್ರಂಪ್ ಹೇಳಿಕೆಗೆ ತಿರುಗೇಟು ನೀಡಿರುವ ರಷ್ಯಾ, 'ದೇಶದ ಭದ್ರತೆಯ ದೃಷ್ಟಿಯಿಂದ ಸರಿಯಾದ ಕ್ರಮವನ್ನೇ ಕೈಗೊಂಡಿದ್ದೇವೆ' ಎಂದು ಹೇಳಿದೆ.


ಉಕ್ರೇನ್ ಗಡಿಭಾಗದಲ್ಲಿನ ಎರಡು ಗ್ರಾಮಗಳನ್ನು ವಶಪಡಿಸಿಕೊಂಡಿರುವುದಾಗಿ ರಷ್ಯಾ ಸೋಮವಾರ ಹೇಳಿದೆ.



ಪ್ರೈಮ್‌ನಲ್ಲಿ 'ಮೈ ಹೀರೊ'

ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡ, ಎ.ವಿ.ಸ್ಟುಡಿಯೋಸ್ ಲಾಂಛನದಲ್ಲಿ ಅವಿನಾಶ್ ವಿಜಯಕುಮಾರ್ ನಿರ್ಮಿಸಿ, ನಿರ್ದೇಶಿಸಿರುವ 'ಮೈ ಹೀರೊ' ಚಿತ್ರವನ್ನು ಮೇ 30ರಿಂದ ಅಮೆಜಾನ್ ಪ್ರೈಮ್‌ನಲ್ಲಿ ವೀಕ್ಷಿಸಬಹುದಾಗಿದೆ.

ತೆರೆಗಳಲ್ಲಿ ಈ ವರ್ಷ ಚೈತ್ರಾ ಕಾಲ



ಚೈತ್ರಾ

ಅಭಿಲಾಷ್ ಪಿ.ಎಸ್.

ಮಾರ್ನಮಿ ಟೀಸರ್ ರಿಲೀಸ್ ಮಾಡಿದ ನಟಿ ರಮ್ಯಾ

ತಮಿಳಿನ ವೆಬ್‌ಸರಣಿಗೆ ಚೈತ್ರಾ ಸಹಿ

'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಳಿಕ ನಟಿ ಚೈತ್ರಾ ಜೆ. ಆಚಾರ್ ಕಾಲಿವುಡ್‌ಗೆ ಹೆಜ್ಜೆ ಇಟ್ಟಿದ್ದರು. ಅಲ್ಲೆರಡು ಸಿನಿಮಾಗಳನ್ನು ಪೂರ್ಣಗೊಳಿಸಿ ಇದೀಗ ಮತ್ತೆ ಕನ್ನಡ ಸಿನಿಮಾಗಳಲ್ಲಿ ಅವರು ತೊಡಗಿಸಿಕೊಂಡಿದ್ದಾರೆ. ಅವರು ನಟಿಸಿರುವ 'ಮಾರ್ನಮಿ' ಚಿತ್ರದ ಪಾತ್ರ ಪರಿಚಯ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಈ ಚಿತ್ರ ಇದೇ ವರ್ಷ ತೆರೆಕಾಣಲಿದ್ದು, ಸಿನಿಮಾದೊಳಗಿನ ತಮ್ಮ ಪಾತ್ರದ ಬಗ್ಗೆ ಚೈತ್ರಾ ಮಾತಿಗಿಳಿದರು.

'ಈ ಸಿನಿಮಾದ ಕಥೆ ನನ್ನನ್ನು ಸೆಳೆಯಿತು. ಮಾರ್ನಮಿ ಎಂದರೆ ದಸರಾ. ದಸರಾ ಸುತ್ತಮುತ್ತಲೇ ಚಿತ್ರದ ಕಥೆ ನಡೆಯುತ್ತದೆ. ಗ್ಯಾಂಗ್‌ಗಳ ನಡುವಿನ ಗಲಾಟೆ, ಅದರೊಳಗೊಂದು ಪ್ರೇಮಕಥೆ ಹೀಗೆ ಮಂಗಳೂರನ್ನೇ ವೇದಿಕೆಯಾಗಿಸಿಕೊಂಡು ನಡೆಯುವ ಕಥೆ ಇದಾಗಿದೆ. ಇಡೀ ಸಿನಿಮಾದಲ್ಲಿ ಮಂಗಳೂರು ಭಾಷೆಯಿದೆ. ಇದಕ್ಕಾಗಿ ವರ್ಕ್‌ಶಾಪ್‌ಗಳನ್ನು ಮಾಡಿದ್ದೆವು. ಇತ್ತೀಚೆಗೆ ಚಿತ್ರದ ಡಬ್ಬಿಂಗ್ ಮುಗಿಯಿತು. ಪ್ರತಿಯೊಂದು ಮಾತನ್ನೂ ಬಹಳ ಸೂಕ್ಷ್ಮವಾಗಿ ಡಬ್ಬಿಂಗ್ ಮಾಡಿದೆ. ಚಿತ್ರದಲ್ಲಿ ನಾನು 'ದೀಕ್ಷಾ' ಎನ್ನುವ ಪಾತ್ರ ಮಾಡಿದ್ದೇನೆ. ಈಕೆಗೆ ಚಿತ್ರದೊಳಗೆ ಒಂದು ಗ್ರಾಫ್ ಇದೆ. ಸಿನಿಮಾ ಆರಂಭವಾಗಿದ್ದಾಗ ಇರುವ ದೀಕ್ಷಾಳಿಗೂ ಕ್ಲೈಮ್ಯಾಕ್ಸ್ ಹಂತದಲ್ಲಿನ ದೀಕ್ಷಾಳಿಗೂ ಬಹಳ ವ್ಯತ್ಯಾಸವಿದೆ. ತಕ್ಷಣದಲ್ಲೇ ನಿರ್ಧಾರಗಳನ್ನು ತೆಗೆದುಕೊಳ್ಳುವಾಕೆ. ನನ್ನ ನಿಜಜೀವನಕ್ಕೆ ಹೋಲಿಸಿದರೆ ಈ ಪಾತ್ರ ತದ್ವಿರುದ್ಧವಾಗಿದೆ. ನಾನು ಪ್ರತಿಯೊಂದು ಹೆಜ್ಜೆಗಳನ್ನು ಆಲೋಚನೆ ಮಾಡಿ ಇಡುವಾಕೆ. 'ದೀಕ್ಷಾ' ಮತ್ತು ನಾಯಕನ ಪ್ರೇಮಕಥೆ, ಅವರ ನಡುವೆ ಉಂಟಾಗುವ ಭಿನ್ನಾಭಿಪ್ರಾಯ ಕಥೆಯೊಳಗಿದೆ' ಎಂದು ಪಾತ್ರದ ವಿವರಣೆ ನೀಡಿದರು ಚೈತ್ರಾ.

'ಮಂಗಳೂರು ದಸರಾ, ಅಲ್ಲಿನ ಹುಲಿವೇಷದ ಹಿನ್ನೆಲೆ ಹಾಗೂ ಸಂಸ್ಕೃತಿ ಸೇರಿದಂತೆ ಅದೇ ಊರಿನ ಮನೆಗಳು, ವೇಷಭೂಷಣ ಹೀಗೆ ಎಲ್ಲವನ್ನೂ ನೈಜವಾಗಿ ಸೆರೆಹಿಡಿಯುವ ಪ್ರಯತ್ನ ಈ ಸಿನಿಮಾದಲ್ಲಾಗಿದೆ. ಬಹುತೇಕ ಎಲ್ಲಾ ಜೂನಿಯರ್ ಆರ್ಟಿಸ್ಟ್‌ಗಳು ಸ್ಥಳೀಯರೇ ಆಗಿದ್ದಾರೆ. ಶಿವಸೇನಾ ಅವರ ಛಾಯಾಚಿತ್ರಗ್ರಹಣ, ಚರಣ್ ರಾಜ್ ಅವರ ಸಂಗೀತ ಸಿನಿಮಾಗೆ ಹೊಸ ಸ್ಪರ್ಶವನ್ನೇ ನೀಡಿದೆ. ಇದು ಪ್ರೇಕ್ಷಕರನ್ನು ಸೆಳೆಯಲಿದೆ ಎನ್ನುವ ನಂಬಿಕೆ ನನಗಿದೆ' ಎನ್ನುತ್ತಾರೆ ಚೈತ್ರಾ.

''ಉತ್ತರಕಾಂಡ' ಸಿನಿಮಾದ ಚಿತ್ರೀಕರಣ ಪುನರಾರಂಭವಾಗಬೇಕಿದೆ. ವಿಜಯಪುರದಲ್ಲಿ ನಾಲ್ಕು ದಿನ ಇದರ ಚಿತ್ರೀಕರಣ ನಡೆದಿತ್ತು. ಇದೀಗ ಹೊಸ ಕಥೆಯೊಂದನ್ನು ಕೇಳಿ ಒಪ್ಪಿಕೊಂಡಿದ್ದೇನೆ. ಇದು ಯುವತಂಡವಿರುವ ಹೊಸಬರ ಚಿತ್ರ. ಶೀಘ್ರದಲ್ಲೇ ಇದು ಘೋಷಣೆಯಾಗಲಿದೆ' ಎಂದರು. 'ಟೋಬಿ', 'ಸಪ್ತಸಾಗರದಾಚೆ ಎಲ್ಲೋ' ಬಿಡುಗಡೆ ಬಳಿಕ ಮಲಯಾಳ, ತೆಲುಗು ಹಾಗೂ ಹಿಂದಿಯಿಂದಲೂ ಚೈತ್ರಾ ಅವರಿಗೆ ಅವಕಾಶಗಳು ಹುಡುಕಿಕೊಂಡು ಬಂದಿವೆ.

'3 BHK', 'ಮೈ ಲಾರ್ಡ್' ಶೀಘ್ರ ತೆರೆಗೆ

'ಸಿದ್ಧಾರ್ಥ್ ಅವರ 'ನುವ್ವೊಸ್ತಾನಂಟೆ ನೇನೊದ್ದಾಂತಾನ', 'ಬಾಯ್ಸ್' ಮುಂತಾದ ಸಿನಿಮಾಗಳನ್ನು ನೋಡಿದಾಗ ಅವರ ಜೊತೆ ನಟಿಸುವ ಆಸೆ ಹುಟ್ಟಿತ್ತು. 'ಚಿತ್ತ' ಸಿನಿಮಾ ನೋಡಿದ ಬಳಿಕ ನಟನೆಯಲ್ಲಿ ಅವರು ಪಳಗಿದ ರೀತಿಯನ್ನು ಕಂಡಿದ್ದೆ. ಇದೀಗ ಅವರ ಜೊತೆ ನಟಿಸಿರುವ '3 BHK' ರಿಲೀಸ್‌ಗೆ ಸಜ್ಜಾಗಿದೆ. ಜುಲೈ 4ರಂದು ಈ ಸಿನಿಮಾ ಬಿಡುಗಡೆಯಾಗಲಿದೆ. ಇದರಲ್ಲಿ ನಾನು ಸಿದ್ಧಾರ್ಥ್ ಅವರಿಗೆ ಜೋಡಿಯಾಗಿದ್ದೇನೆ. ಚೆನ್ನೈನಲ್ಲಿ ವಾಸಿಸುವ ಮಧ್ಯಮ ವರ್ಗದ ಹುಡುಗಿಯ ಪಾತ್ರ ನನ್ನದು. ಇದೊಂದು ಫ್ಯಾಮಿಲಿ ಡ್ರಾಮಾ. ಸಸಿಕುಮಾರ್ ಅವರ ಜೊತೆ ನಟಿಸಿರುವ 'ಮೈ ಲಾರ್ಡ್' ಸಿನಿಮಾದ ಡಬ್ಬಿಂಗ್ ಪೂರ್ಣಗೊಂಡಿದೆ. ಅದೂ ಈ ವರ್ಷ ತೆರೆಕಾಣಲಿದೆ. ತಮಿಳಿನಲ್ಲಿ ವೆಬ್‌ಸರಣಿಯೊಂದನ್ನು ಮಾಡಲಿದ್ದೇನೆ' ಎನ್ನುತ್ತಾರೆ ಚೈತ್ರಾ.



ಮಾರ್ನಮಿ
ಚೈತ್ರಾ

ರಿತ್ವಿಕ್ ಮಠದ್ ಹೀರೊ

ಕುಂದಾಪುರದ ಪಡುಕೋಣೆಯ ರಿಶಿತ್ ಶೆಟ್ಟಿ 'ಮಾರ್ನಮಿ' ಸಿನಿಮಾದ ಸೂತ್ರಧಾರ. ಚಿತ್ರವನ್ನು ಗುನಾಢ್ಯ ಬ್ಯಾನರ್ ಅಡಿಯಲ್ಲಿ ಶಿಲ್ಪಾ ನಿಶಾಂತ್ ನಿರ್ಮಾಣ ಮಾಡುತ್ತಿದ್ದಾರೆ. ರಿತ್ವಿಕ್ ಮಠದ್ ನಾಯಕನಾಗಿ ಅಭಿನಯಿಸಿದ್ದು, ಪ್ರಕಾಶ್ ತುಮಿನಾಡು, ಸೋನು ಗೌಡ, ಜ್ಯೋತೀಶ್ ಶೆಟ್ಟಿ, ರೋಚಿತ್, ಸ್ವರಾಜ್ ಶೆಟ್ಟಿ, ಮೈಮ್ ರಾಮದಾಸ್ ಹಾಗೂ ಚೈತ್ರ ಶೆಟ್ಟಿ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ❖

ಚೌಕಿದಾರ್ ಟೀಸರ್ ಬಿಡುಗಡೆ



ಪೃಥ್ವಿ ಅಂಬಾರ್

'ರಥಾವರ' ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ಆ್ಯಕ್ಷನ್ ಕಟ್ ಹೇಳಿರುವ 'ಚೌಕಿದಾರ್' ಚಿತ್ರದ ಟೀಸರ್ ಬಿಡುಗಡೆಗೊಂಡಿದೆ. ಈ ಚಿತ್ರದ ಮೂಲಕ ನಟ ಪೃಥ್ವಿ ಅಂಬಾರ್ ಹೊಸ ಲುಕ್‌ನಲ್ಲಿ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ.

ಪೃಥ್ವಿ ಅಂಬಾರ್ ಹಾಗೂ ಧನ್ಯಾ ರಾಮ್‌ಕುಮಾರ್ ಈ ಚಿತ್ರದಲ್ಲಿ ಜೋಡಿಯಾಗಿ ನಟಿಸಿದ್ದಾರೆ. ಟೀಸರ್‌ನಲ್ಲಿ ಪಾತ್ರಗಳ ಪರಿಚಯ ಮಾಡಿರುವ ನಿರ್ದೇಶಕರು ಕಥೆಯ ಗುಟ್ಟು ಬಿಟ್ಟು-ಕೊಟ್ಟಿಲ್ಲ. ಕನ್ನಡ ಹಾಗೂ ತೆಲುಗಿನಲ್ಲಿ ಈ ಸಿನಿಮಾ ಬಿಡು-ಗಡೆಯಾಗಲಿದ್ದು, ಪೊಲೀಸ್ ಅಧಿಕಾರಿಯಾಗಿ ಸುಧಾರಾಣಿ ನಟಿಸಿದ್ದಾರೆ. ನಟ ಸಾಯಿಕುಮಾರ್ ಪೃಥ್ವಿಯ ತಂದೆ ಪಾತ್ರದಲ್ಲಿ ಬಣ್ಣಹಚ್ಚಿದ್ದು, ಧರ್ಮ, ನಟಿ ಶ್ವೇತಾ ತಾರಾ-ಬಳಗದಲ್ಲಿದ್ದಾರೆ. ಸಚಿನ್ ಬಸ್ರೂರ್ ಸಂಗೀತ ಟೀಸರ್‌ನ ಪ್ಲಸ್ ಪಾಯಿಂಟ್. ಸಿನಿಮಾವನ್ನು ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡಿದ್ದು, ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಸಂತೋಷ್ ನಾಯಕ್ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಸಿದ್ದು ಕಂಚನಹಳ್ಳಿ ಛಾಯಾಚಿತ್ರಗ್ರಹಣ ಸಿನಿಮಾಗಿದೆ. ಜೂ.1ರಂದು ಚಿತ್ರದ ಮೊದಲ ಹಾಡನ್ನು ಬಿಡುಗಡೆ ಮಾಡಲಾಗುವುದು. ಶೀಘ್ರದಲ್ಲೇ ರಿಲೀಸ್ ದಿನಾಂಕವನ್ನು ಘೋಷಿಸುವುದಾಗಿ ಚಿತ್ರತಂಡ ತಿಳಿಸಿದೆ. ❖

'ನೀತಿ'ಯಲ್ಲಿ ಖುಷಿ ರವಿ



ಖುಷಿ ರವಿ

'ಅಯ್ಯನ ಮನೆ' ವೆಬ್ ಸರಣಿಯ ಬೆನ್ನಲ್ಲೇ ನಟಿ ಖುಷಿ ರವಿ ನಟಿಸಿರುವ 'ನೀತಿ' ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. ಗೌತಂ ಮಣಿವಣ್ಣನ್ ಈ ಸಿನಿಮಾವನ್ನು ಡೈರೆಕ್ಟರ್ಸ್ ಕಟ್ ಪ್ರೊಡಕ್ಷನ್‌ನಡಿ ನಿರ್ಮಾಣ ಮಾಡಿದ್ದು, ರಾಜ್‌ಗೋಪಾಲ್ ಸಿನಿಮಾಗೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

'ದಿಯಾ' ಸಿನಿಮಾ ಮೂಲಕ ಪ್ರೇಕ್ಷಕರನ್ನು ಸೆಳೆದಿದ್ದ ಖುಷಿ ರವಿ ಬಳಿಕ 'ಕೇಸ್ ಆಫ್ ಕೊಂಡಾಣ' ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿದ್ದರು. ಜೀ5ನಲ್ಲಿ ಬಂದ 'ಅಯ್ಯನ ಮನೆ' ವೆಬ್‌ಸರಣಿಯಲ್ಲಿ ಮುಖ್ಯಭೂಮಿಕೆಯಲ್ಲಿದ್ದ ಖುಷಿ ಸದ್ಯ 'ಸನ್ ಆಫ್ ಮುತ್ತಣ್ಣ', 'ಫುಲ್ ಮೀಲ್ಸ್' ಚಿತ್ರಗಳ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಇದರ ಜೊತೆಗೆ 'ನೀತಿ' ಸಿನಿಮಾವೂ ಇದೇ ವರ್ಷ ತೆರೆಕಾಣಲಿದೆ. ಭಾವನಾತ್ಮಕ ಸಸ್ಪೆನ್ಸ್ ಥ್ರಿಲ್ಲರ್ ಅಂಶಗಳನ್ನು ಹೊಂದಿರುವ 'ನೀತಿ' ಸಿನಿಮಾ, ಒಂದು ದಿನ ಬಂಗಲೆಯಲ್ಲಿ ಎರಡು ಪಾತ್ರಗಳ ಸುತ್ತ ಸುತ್ತುವ ಕಥೆಯಾಗಿದೆ. ಒಬ್ಬಂಟಿ ಮಹಿಳೆಯ ತೊಳಲಾಟ, ಅಪರಿಚಿತ ವ್ಯಕ್ತಿಯ ಆಗಮನದ ಮೂಲಕ ಕಥೆ ತೆರೆದುಕೊಳ್ಳುತ್ತದೆ ಎಂದಿದೆ ಚಿತ್ರತಂಡ.

ಚಿತ್ರದ ಮತ್ತೊಂದು ಪ್ರಮುಖ ಪಾತ್ರದಲ್ಲಿ ನಟ ಸಂಪತ್ ಮೈತ್ರೇಯ ಅಭಿನಯಿಸಿದ್ದು, ಪ್ರವೀಣ್ ಅಥರ್ವ ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ರೂಸಿಕ್ ಸಂಗೀತ ಸಂಯೋಜಿಸಿದ್ದು, ಪ್ರದೀಪ್ ಪದ್ಮಕುಮಾರ್ ಛಾಯಾಚಿತ್ರಗ್ರಹಣ, ಆರ್.ರಾಜ್‌ಕುಮಾರ್ ಸಂಕಲನ ಚಿತ್ರಕ್ಕಿದೆ. ಸದ್ಯದಲ್ಲೇ ಚಿತ್ರ ಬಿಡುಗಡೆಯಾ-ಗಲಿದೆ ಎಂದು ಚಿತ್ರತಂಡ ಹೇಳಿದೆ. ❖

ತೈಲ ಸೋರಿಕೆಯ ಶಂಕೆ, ಆತಂಕ

ಸಾಗರ ಸಂಪನ್ಮೂಲದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಅಪಾಯ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಕರಾವಳಿಯಲ್ಲಿ ಮುಳುಗಡೆ ಆಗಿರುವ ಲೈಬೀರಿಯಾದ ಸರಕು ಸಾಗಣೆ ಹಡಗಿನಲ್ಲಿದ್ದ ತೈಲದ ಕಂಟೇನರ್‌ಗಳು ಸೋರಿಕೆಯಾಗಿರುವ ಶಂಕೆ ವ್ಯಕ್ತವಾಗಿದ್ದು, ಇದು ಸಾಗರ ಸಂಪನ್ಮೂಲಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಆತಂಕ ಸೃಷ್ಟಿಸಿದೆ.

ಮುಂಗಾರು ಋತುವಿನಲ್ಲಿ ಮೀನುಗಳ ಸಂತಾನೋತ್ಪತ್ತಿ ನಡೆಯುತ್ತದೆ. ಇದೇ ಸಂದರ್ಭದಲ್ಲಿ ತೈಲ ಸೋರಿಕೆ ಆಗಿರುವುದು ಆತಂಕವನ್ನು ಹೆಚ್ಚಿಸಿದೆ.

ತೈಲ ಸೋರಿಕೆ ಶಂಕೆಯಿಂದಾಗಿ ರಾಜ್ಯ ಮೀನುಗಾರಿಕಾ ಇಲಾಖೆಯು ಸಮುದ್ರದ ನೀರನ್ನು ಪರೀಕ್ಷೆಗೆ ಒಳಪಡಿಸಲು ಮುಂದಾಗಿದೆ. ಕೇಂದ್ರ ಸಮುದ್ರ ಮೀನುಗಾರಿಕಾ ಸಂಶೋಧನಾ ಸಂಸ್ಥೆ (ಸಿಎಂಎಫ್‌ಆರ್‌ಐ) ಕೂಡ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿರುವುದಾಗಿ ಹೇಳಿದೆ.

ಇದಕ್ಕೆ ಸಂಬಂಧಿಸಿದಂತೆ ಸಿಎಂಎಫ್‌ಆರ್‌ಐ ನಿರ್ದೇಶಕ ಡಾ.ಗ್ರಿನ್‌ಸನ್ ಜಾರ್ಜ್ ಮಾಹಿತಿ ನೀಡಿ, 'ಸಮುದ್ರದಲ್ಲಿ ತೈಲ ಸೋರಿಕೆಯಾದರೆ ಅದು ಸಾಗರ ಉತ್ಪನ್ನಗಳ ಇಳುವರಿಯ ಮೇಲೆ ಪರಿಣಾಮ ಬೀರಲಿದೆ. ವಿಶೇಷವಾಗಿ ಮುಂಗಾರು ಅವಧಿಯು ಸಾಗರ ಉತ್ಪನ್ನಗಳ ಇಳುವರಿ ಹೆಚ್ಚಳಕ್ಕೆ ಸೂಕ್ತವಾದ ಕಾಲವಾಗಿದ್ದು, ಇದೇ ಸಂದರ್ಭದಲ್ಲಿ ತೈಲ ಸೋರಿಕೆಯಾದರೆ ಪರಿಣಾಮವೂ ಹೆಚ್ಚಿರಲಿದೆ. ಆದರೆ, ತೈಲ ಸೋರಿಕೆ ಎಷ್ಟು ಪ್ರಮಾಣದಲ್ಲಿ ಆಗಿದೆ? ಅದು ಹರಡುವುದನ್ನು ನಾವು ಹೇಗೆ ತಪ್ಪಿಸುತ್ತೇವೆ? ಎಂಬುದರ ಮೇಲೆ ಜಲಸಂಪನ್ಮೂಲ ಹಾಗೂ ಆರ್ಥಿಕತೆ ಮೇಲಿನ ಪರಿಣಾಮವೂ ಅವಲಂಬಿತವಾಗಿದೆ' ಎಂದಿದ್ದಾರೆ.

ರಕ್ಷಣೆಗೆ ಹಡಗುಗಳ ನಿಯೋಜನೆ: ಜಲ ಮಾಲಿನ್ಯದ ಮೇಲೆ ನಿಗಾ ಇಟ್ಟು, ಅಗತ್ಯ ಸಂದರ್ಭದಲ್ಲಿ ಕ್ರಮ ಕೈಗೊಳ್ಳಲು ಭಾರತೀಯ ಕರಾವಳಿ ಪಡೆಯ ಐಸಿಜಿ ಸಮರ್ಥ್, ಐಸಿಜಿ ಸಕ್ಷಮ್ ಹಾಗೂ ಐಸಿಜಿ ವಿಕ್ರಮ್ ರಕ್ಷಣಾ ಹಡಗುಗಳನ್ನು ಲೈಬೀರಿಯಾದ ಸರಕು ಸಾಗಣೆ ಹಡಗು ಮುಳುಗಡೆಯಾಗಿರುವ ಪ್ರದೇಶದಲ್ಲಿ ನಿಯೋಜಿಸಲಾಗಿದೆ ಎಂದು ಕೇಂದ್ರ ಬಂದರು ಸಚಿವ ಸರ್ವಾನಂದ ಸೋನೊವಾಲ್ ಮಾಹಿತಿ ನೀಡಿದ್ದಾರೆ.



ಕೇರಳದ ಕರಾವಳಿ ಪ್ರದೇಶಗಳತ್ತ ತೇಲಿಬಂದಿರುವ ಹಡಗಿನ ಕಂಟೇನರ್‌ಗಳು

ತೇಲಿಬಂದ ಕಂಟೇನರ್‌ಗಳು

ತೈಲ, ಅಪಾಯಕಾರಿ ವಸ್ತುಗಳು, ವಿವಿಧ ದೇಶಗಳ ಹಲವು ಉತ್ಪನ್ನಗಳನ್ನು ಹೊತ್ತಿದ್ದ ಲೈಬೀರಿಯಾದ ಹಡಗಿನ 643 ಕಂಟೇನರ್‌ಗಳು ಸಮುದ್ರದ ಪಾಲಾಗಿದ್ದು, ಈ ಪೈಕಿ 13 ಕಂಟೇನರ್‌ಗಳು ಕೇರಳದ ಕರಾವಳಿಯ ವಿವಿಧ ಪ್ರದೇಶಗಳಲ್ಲಿ ದಂಡೆಗಳಿಗೆ ಬಂದು ಬಿದ್ದಿವೆ. ಅವುಗಳ ಪೈಕಿ ಕೆಲವು ಕಂಟೇನರ್‌ಗಳಲ್ಲಿ ಬಟ್ಟೆಗಳು, ಚೀನಾದ ಚಹಾ ಪುಡಿ, ಗಾಜಿನ ವಸ್ತುಗಳು ಕಂಡುಬಂದಿವೆ ಎಂದು ಕೇರಳ ಸರ್ಕಾರ ಹೇಳಿದೆ. ಇನ್ನೂ ಕೆಲವು ಕಂಟೇನರ್‌ಗಳು ಖಾಲಿ ಆಗಿದ್ದು, ಅವುಗಳಲ್ಲಿ ತೈಲ ತುಂಬಿಸಲಾಗಿತ್ತೆ? ಅದು ಸೋರಿಕೆ ಆಗಿರಬಹುದೆ? ಎಂಬ ಶಂಕೆಯೂ ವ್ಯಕ್ತವಾಗಿದೆ.

'ಆರೋಗ್ಯಕ್ಕೆ ಒತ್ತು ಕೊಟ್ಟ ಮೋದಿ ಸರ್ಕಾರ'

ನಾಗಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತದ ಆರೋಗ್ಯ ಕ್ಷೇತ್ರದ ಮೂಲ-ಸೌಕರ್ಯಕ್ಕೆ ದೊಡ್ಡ ಮಟ್ಟದ ಉತ್ತೇಜನ ಸಿಕ್ಕಿದೆ. ಈ ಹಿಂದಿನ ಕಾಂಗ್ರೆಸ್ ಸರ್ಕಾರ ಈ ಕ್ಷೇತ್ರವನ್ನು ಕಡೆಗಣಿಸಿತ್ತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿದ್ದಾರೆ.



ಮಹಾರಾಷ್ಟ್ರದ ನಾಗಪುರದಲ್ಲಿರುವ ರಾಷ್ಟ್ರೀಯ ಕ್ಯಾನ್ಸರ್ ಸಂಸ್ಥೆ (ಎನ್‌ಸಿಐ) ಆವರಣದಲ್ಲಿ ರೋಗಿಗಳು ಮತ್ತು ಅವರ ಆರೈಕೆದಾರರಿಗೆ ವಸತಿ ಸೌಲಭ್ಯ ಕಲ್ಪಿಸುವ 'ಸ್ವಸ್ತಿ ನಿವಾಸ' ಸಂಕೀರ್ಣದ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ, ಅವರು ಮಾತನಾಡಿದರು. ರಾಷ್ಟ್ರೀಯ ಕ್ಯಾನ್ಸರ್ ಸಂಸ್ಥೆ (ಎನ್‌ಸಿಐ) ಮಹಾರಾಷ್ಟ್ರದ ಬಡವರಷ್ಟೇ ಅಲ್ಲದೇ ಮಧ್ಯಪ್ರದೇಶ, ತೆಲಂಗಾಣ, ಛತ್ತೀಸಗಢ ಸೇರಿ ಹಲವು ರಾಜ್ಯಗಳ ಜನರಿಗೆ ಸೇವೆ ನೀಡುತ್ತಿದೆ ಎಂದು ಅಮಿತ್ ಶಾ ಹೇಳಿದ್ದಾರೆ.

> **ಬಾಳಾ ಠಾಕ್ರೆ ಜೀವಂತವಾಗಿ ಇದ್ದಿದ್ದರೆ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ನಡೆಸಿದ ಮೋದಿ ಅವರನ್ನು ಆಲಿಂಗಿಸಿ ಮೆಚ್ಚಿಕೊಳ್ಳುತ್ತಿದ್ದರು.**
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ವಿಶ್ವದಲ್ಲೇ ಅತಿ ಹೆಚ್ಚು ಬಾಯಿ ಕ್ಯಾನ್ಸರ್ ರೋಗಿಗಳು ಭಾರತದಲ್ಲಿದ್ದಾರೆ. ದೇಶದಲ್ಲಿ 8 ನಿಮಿಷಕ್ಕೆ ಒಬ್ಬರು ಗರ್ಭಕಂಠ ಕ್ಯಾನ್ಸರ್‌ನಿಂದ ಸಾವಿಗೀಡಾಗುತ್ತಿದ್ದಾರೆ ಇತ್ತೀಚಿನ ವರ್ಷಗಳವರೆಗೂ ಕ್ಯಾನ್ಸರ್ ಚಿಕಿತ್ಸೆ ದುರ್ಲಬವಾಗಿತ್ತು. ಕಳೆದ 15 ವರ್ಷಗಳಲ್ಲಿ ರೋಗಕ್ಕೆ ಚಿಕಿತ್ಸೆ ನೀಡಲು ಉತ್ತಮ ಸಂಸ್ಥೆಗಳು ಬಂದಿವೆ ಎಂದರು.

ಚಾರ್ಜ್‌ಶೀಟ್‌ನಲ್ಲಿ ಸಿಪಿಎಂ ಉಲ್ಲೇಖ

ಕೊಚ್ಚಿ (ಪಿಟಿಐ): ಕರುವನ್ನೂರು ಕೋ–ಆಪರೇಟಿವ್ ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಜಾರಿ ನಿರ್ದೇಶನಾಲಯ (ಇ.ಡಿ) ಹೊಸತಾಗಿ ಸಲ್ಲಿಸಿದ್ದ ಚಾರ್ಜ್‌ಶೀಟ್‌ನಲ್ಲಿ ಕೇರಳದ ಆಡಳಿತಾರೂಢ ಪಕ್ಷ ಸಿಪಿಎಂ ಪಕ್ಷದ ಹೆಸರನ್ನು ಉಲ್ಲೇಖಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದ ಆರೋಪದ ಅಡಿಯಲ್ಲಿ ಕೇಂದ್ರ ತನಿಖಾ ಸಂಸ್ಥೆಯು ಎರಡನೇ ಸಲ ರಾಜಕೀಯ ಪಕ್ಷವೊಂದನ್ನು ಆರೋಪಿಯನ್ನಾಗಿ ಉಲ್ಲೇಖಿಸಿದೆ. ಅಬಕಾರಿ ನೀತಿ ಹಗರಣದಲ್ಲಿ ಕಳೆದ ವರ್ಷ ದೆಹಲಿಯಲ್ಲಿ ಅಧಿಕಾರ ನಡೆಸುತ್ತಿದ್ದ ಆಮ್ ಆದ್ಮಿ ಪಕ್ಷದ ಹೆಸರನ್ನು ಚಾರ್ಜ್‌ಶೀಟ್‌ನಲ್ಲಿ ಹೆಸರಿಸಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೊದಲ ಪೂರಕ ಚಾರ್ಜ್‌ಶೀಟ್‌ನಲ್ಲಿ 28 ಸಂಸ್ಥೆ, ವ್ಯಕ್ತಿಗಳ ಹೆಸರನ್ನು ಸೇರಿಸಿದೆ. ಇದರಲ್ಲಿ ಸಂಸದ ಕೆ. ರಾಧಾಕೃಷ್ಣನ್, ಶಾಸಕ ಎ.ಸಿ.ಮೊಯ್ದೀನ್ ಹೆಸರು ಇದೆ.



ಗುಜರಾತ್‌ನ ವಡೋದರಾದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ರೋಡ್‌ಶೋ ನಡೆಸಿದರು —ಪಿಟಿಐ ಚಿತ್ರ

ಸಿಂಧೂರ ಅಳಿಸುವವರ ಅಂತ್ಯ ಖಚಿತ: ಮೋದಿ

ದಾಹೋದ್ (ಗುಜರಾತ್) (ಪಿಟಿಐ): 'ಭಾರತವನ್ನು ದ್ವೇಷಿಸುವುದೇ ಪಾಕಿಸ್ತಾನದ ಉದ್ದೇಶವಾಗಿದ್ದು, ಹಾನಿ ಮಾಡುವ ಮಾರ್ಗಗಳ ಕುರಿತೇ ಯೋಚಿಸುತ್ತದೆ. ಆದರೆ, ನಾವು ದೇಶದ ಬಡತನವನ್ನು ಹೋಗಲಾಡಿಸಿ, ಆರ್ಥಿಕ ಅಭಿವೃದ್ಧಿ ತರುವ ಗುರಿ ಹೊಂದಿದ್ದೇವೆ' ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ತಿಳಿಸಿದರು.

ದಾಹೋದ್‌ನಲ್ಲಿ ಬೃಹತ್ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಸಿಂಧೂರ' ಕಾರ್ಯಾಚರಣೆಯನ್ನು ಪ್ರಶಂಸಿಸಿದರು.

'ನಮ್ಮ ಸಹೋದರಿಯರ ಸಿಂಧೂರವನ್ನು ಅಳಿಸಿಹಾಕುವ ದುಸ್ಸಾಹಸ ಮಾಡಿದವರು ತಮ್ಮ ಅಂತ್ಯವು ಸನ್ನಿಹಿತವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು' ಎಂದರು.

ಪಾಕಿಸ್ತಾನದ ಜನರು ಅಲ್ಲಿನ ಭಯೋತ್ಪಾದನೆಯನ್ನು ಮಟ್ಟಹಾಕಲು ಮುಂದೆ ಬರಬೇಕು. ಆಗಷ್ಟೇ ಅವರು ನೆಮ್ಮದಿಯಿಂದ ಊಟ ಮಾಡುವ ವಾತಾವರಣ ನಿರ್ಮಾಣವಾಗುತ್ತದೆ ಎಂದು ಹೇಳಿದರು.

'ಇಬ್ಭಾಗಗೊಂಡ ಬಳಿಕ ಹುಟ್ಟಿಕೊಂಡ ದೇಶವೊಂದು ಭಾರತವನ್ನು ದ್ವೇಷಿಸುವುದನ್ನೇ ವೃತ್ತಿ-ಯಾಗಿಸಿಕೊಂಡಿದೆ. ಭಾರತಕ್ಕೆ ಹಾನಿ ಮಾಡುವುದನ್ನೇ ಬಯಸುತ್ತದೆ. ಆದರೆ, ಭಾರತವು ಆರ್ಥಿಕ ಅಭಿವೃದ್ಧಿ ಮೂಲಕ ಬಡತನವನ್ನು ಹೋಗಲಾಡಿಸುವ ಗುರಿ ಹೊಂದಿದೆ. ಆ ಮೂಲಕ ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಬದಲಾಯಿಸುತ್ತಿದೆ. ಹಿಂದುಳಿದ ಪ್ರದೇಶಗಳಿಗೆ ಅಭಿವೃದ್ಧಿ ಕೊಂಡೊಯ್ಯುವುದೇ ಸರ್ಕಾರದ ನೀತಿ ಆಗಿದೆ' ಎಂದು ಮೋದಿ ತಿಳಿಸಿದರು.

ದೇಶಿ ವಸ್ತುಗಳನ್ನು ಬಳಸಿ: ಹೋಳಿ, ದೀಪಾವಳಿ, ಗಣೇಶ ಪೂಜೆ ವೇಳೆ ಭಾರತದಲ್ಲೇ ಉತ್ಪಾದಿಸಿದ ವಸ್ತುಗಳನ್ನು ಖರೀದಿಸಿ, ಬಳಸುವಂತೆ ಕರೆ ನೀಡಿದ ಅವರು, ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಲೋಕೋ ತಯಾರಿಕಾ ಕಾರ್ಖಾನೆ ಸೇರಿದಂತೆ ₹24 ಸಾವಿರ ಕೋಟಿ ವೆಚ್ಚದ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಮೋದಿ ಚಾಲನೆ ನೀಡಿದರು. ಅಹಮದಾಬಾದ್–ವೆರಾವಲ್ ನಡುವೆ ವಂದೇ ಭಾರತ್ ರೈಲು ಸೇವೆ, ವಲ್ಸಾಡ್–ದಾಹೋದ್ ಎಕ್ಸ್‌ಪ್ರೆಸ್ ರೈಲು ಸೇವೆಗೂ ಚಾಲನೆ ನೀಡಿದರು.



ಲಖನೌ ಸೂಪರ್‌ಜೈಂಟ್ಸ್ ವಿರುದ್ಧ ಇಂದು ಕೊನೆಯ ಲೀಗ್ ಪಂದ್ಯ • ಮರಳಿದ ಹೇಜಲ್‌ವುಡ್

ಆರ್‌ಸಿಬಿಗೆ ಮೊದಲೆರಡು ಸ್ಥಾನದ ಗುರಿ



ಲಖನೌ ಸೂಪರ್ ಜೈಂಟ್ಸ್ ತಂಡದ ಮೆಂಟರ್ ಜಹೀರ್ ಖಾನ್ ಜೊತೆ ನಾಯಕ ರಿಷಭ್ ಪಂತ್ ಪಿಟಿಐ ಚಿತ್ರ

ಲಖನೌ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಈಗ ಐಪಿಎಲ್ ಪಾಯಿಂಟ್ ಪಟ್ಟಿಯಲ್ಲಿ ಮೊದಲ ಎರಡರಲ್ಲಿ ಸ್ಥಾನ ಪಡೆಯುವ ಅವಕಾಶ ಮಂಗಳವಾರ ಒದಗಲಿದೆ. ರಜತ್ ಪಾಟೀದಾರ್ ಪಡೆ ಈ ಬಾರಿಯ ಐಪಿಎಲ್‌ನ ಕೊನೆಯ ಲೀಗ್ ಪಂದ್ಯದಲ್ಲಿ ಆತಿಥೇಯ ಲಖನೌ ತಂಡವನ್ನು ಎದುರಿಸಲಿದ್ದು, ಆರ್‌ಸಿಬಿಗೆ ಈ ಪಂದ್ಯ ಬಹಳ ಮಹತ್ವದ್ದಾಗಿದೆ.

ಪಾಯಿಂಟ್ ಪಟ್ಟಿಯಲ್ಲಿ ಪಂಜಾಬ್ ಕಿಂಗ್ಸ್ ಅಗ್ರಸ್ಥಾನಕ್ಕೇರಿದೆ. ಲಖನೌ ವಿರುದ್ಧ ಪಂದ್ಯ ಗೆದ್ದರೆ ಆರ್‌ಸಿಬಿಗೆ ಮೊದಲ ಕ್ವಾಲಿಫೈಯರ್ ಸ್ಥಾನ ಖಚಿತವಾಗಲಿದೆ.

ಗುಜರಾತ್ (18) ತಂಡ ಸತತ ಎರಡು ಪಂದ್ಯ ಸೋತಿರುವ ಕಾರಣ ಆರ್‌ಸಿಬಿಗೆ ಮೊದಲೆರಡು ಸ್ಥಾನ ಅವಕಾಶ ಜೀವಂತವಾಗಿದೆ.

ಪ್ರಮುಖ ಪಂದ್ಯಗಳಲ್ಲಿ ಎಡವಿ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿರುವ ಆತಿಥೇಯರು ಗೆಲುವಿ ನೊಡನೆ ಅಭಿಯಾನ ಮುಗಿಸಲು ಕಾತರ ರಾಗಿದ್ದಾರೆ. ಇನ್ನೊಂದು ಕಡೆ 2016ರ ನಂತರ ಆರ್‌ಸಿಬಿ ಮೊದಲ ಬಾರಿ ಕ್ವಾಲಿಫೈಯರ್ 1ಕ್ಕೆ ಅರ್ಹತೆ ಪಡೆಯುವ ಹಾದಿಯಲ್ಲಿದೆ.



ವಿರಾಟ್ ಕೊಹ್ಲಿ

ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಕ್ವಾಲಿಫೈಯರ್ 1ರಲ್ಲಿ ಆಡಲಿವೆ. ಗೆದ್ದ ತಂಡ ನೇರವಾಗಿ ಫೈನಲ್ ತಲುಪುತ್ತದೆ. ಸೋತ ತಂಡ ಕ್ವಾಲಿಫೈಯರ್ 2ರಲ್ಲಿ ಎಲಿಮಿನೇಟರ್ ಪಂದ್ಯದ ವಿಜೇತರನ್ನು ಎದುರಿಸಬೇಕಾ-ಗುತ್ತದೆ. ಮೂರು ಮತ್ತು ನಾಲ್ಕನೇ ಸ್ಥಾನ ಪಡೆಯುವ ತಂಡಗಳು ಎಲಿಮಿನೇಟ-ರ್‌ನಲ್ಲಿ ಮುಖಾಮುಖಿಯಾಗಲಿವೆ. ಹೀಗಾಗಿ ಈ ಪ್ರಮುಖ ಪಂದ್ಯದಲ್ಲಿ ಎಡವದಂತೆ ಆರ್‌ಸಿಬಿ ಎಚ್ಚರಿಕೆ ವಹಿಸಬೇಕಾಗಿದೆ.

ಬಲಾಬಲ	
ಒಟ್ಟು ಪಂದ್ಯ	5
ಆರ್‌ಸಿಬಿ ಗೆಲುವು	3
ಎಲ್‌ಎಸ್‌ಜಿ ಗೆಲುವು	2

ಸದ್ಯ 17 ಪಾಯಿಂಟ್ ಗಳಿಸಿರುವ ಆರ್‌ಸಿಬಿ ಈ ಪಂದ್ಯ ಗೆಲ್ಲುವ ಫೇವರೀಟ್ ಆಗಿದೆ. ಸತತವಾಗಿ ನಾಲ್ಕು ಪಂದ್ಯಗಳನ್ನು ಗೆದ್ದ ತಂಡವು ಹತ್ತು ದಿನಗಳ ವಿರಾಮದ ನಂತರ ಆಡಿದ ತನ್ನ ಕೊನೆಯ ಪಂದ್ಯದಲ್ಲಿ ಮೊದಲಿನ ಲಯದಲ್ಲಿರಲಿಲ್ಲ. ಐಪಿಎಲ್ ಪುನರಾರಂಭವಾದ ಬಳಿಕ ಆರ್‌ಸಿಬಿಯ ಮೊದಲ ಪಂದ್ಯ ಮಳೆಗೆ ಕೊಚ್ಚಿಹೋಗಿತ್ತು. ಹೀಗಾಗಿ ಸರಿಯಾದ ಪಂದ್ಯಾಭ್ಯಾಸವಿಲ್ಲದೇ ತಂಡ ಜಡಗಟ್ಟಿದ್ದು ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಪಂದ್ಯದಲ್ಲಿ ಎದ್ದುಕಂಡಿತ್ತು. ಬೆಂಗಳೂರು ತಂಡದ ಕೊನೆಯ ಗೆಲುವು ಮೇ 3ರಂದು ದಾಖಲಾಗಿತ್ತು.

'ಪಂದ್ಯವಿಲ್ಲದೇ ನಾವು ಜಡ್ಡುಗಟ್ಟಿದ್ದೆವು. ಪ್ರಮುಖ ಪಂದ್ಯದಲ್ಲಿ ಆಡುವಾಗ ಇರಬೇಕಾದ ತೀವ್ರತೆ ನಮ್ಮ ತಂಡದಲ್ಲಿರಲಿಲ್ಲ. ಆದರೂ ಕಡೆಯ ಕೆಲವು ಓವರುಗಳಲ್ಲಿ ನಾವು ಕರಾರುವಾಕ್ಕಾಗಿ ಬೌಲಿಂಗ್ ಮಾಡಿದ್ದೆವು' ಎಂದು ಹಂಗಾಮಿ ನಾಯಕ ಜಿತೇಶ್ ಶರ್ಮಾ ಹಿಂದಿನ ಸೋಲಿನ ನಂತರ ಪ್ರತಿಕ್ರಿಯಿಸಿದ್ದರು.

ಆಸ್ಟ್ರೇಲಿಯಾದ ವೇಗಿ ಜೋಶ್ ಹ್ಯಾಜಲ್‌ವುಡ್ ತಂಡಕ್ಕೆ ಮರಳಿರುವುದು ಆರ್‌ಸಿಬಿಯ ಉತ್ಸಾಹ ಹೆಚ್ಚಿಸಿದೆ. ಈ ಬಾರಿ 10 ಪಂದ್ಯಗಳಿಂದ 18 ವಿಕೆಟ್ ಪಡೆದ ಅವರು ಯಶಸ್ವಿ ಬೌಲರ್‌ಗಳಲ್ಲಿ ಒಬ್ಬರಾಗಿದ್ದು, ಆರೆಂಜ್ ಕ್ಯಾಪ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ಲಖನೌಗೆ ಸ್ಫೂರ್ತಿ: ಆದರೆ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಮಣಿಸುವುದು ಅಷ್ಟೇನೂ ಸುಲಭವಾಗದು. ಪ್ರಬಲ ಗುಜರಾತ್ ಟೈಟನ್ಸ್‌ಗೆ ಈ ಹಿಂದಿನ ಪಂದ್ಯದಲ್ಲಿ ಸೋಲುಣಿಸಿರುವುದು ಲಖನೌ ಸೂಪರ್‌ಜೈಂಟ್ಸ್ ತಂಡದ ವಿಶ್ವಾಸ ವೃದ್ಧಿಸಿದೆ.

ತಂಡ ಹಿನ್ನಡೆ ಅನುಭವಿಸಿದರೂ, ಮೂವರು ಪ್ರಮುಖ ಬ್ಯಾಟರ್‌ಗಳಾದ ಏಡನ್ ಮರ್ಕರಂ, ಮಿಚೆಲ್ ಮಾರ್ಷ್ ಮತ್ತು ನಿಕೋಲಸ್ ಪೂರನ್ ವೈಯಕ್ತಿಕವಾಗಿ ಸಾಕಷ್ಟು ರನ್ ಹರಿಸಿದ್ದಾರೆ.

ಗಾಯಾಳುಗಳ ಸಮಸ್ಯೆ ಎದುರಿಸುತ್ತಿದ್ದರೂ ಬೌಲಿಂಗ್ ವಿಭಾಗ ಕೆಲವು ಪಂದ್ಯಗಳಲ್ಲಿ ಗಮನಾರ್ಹ ಪ್ರದರ್ಶನ ನೀಡಿದೆ. ಎಕ್ಸ್‌ಪ್ರೆಸ್ ವೇಗಿ ಮಯಂಕ್ ಯಾದವ್ ಬದಲು ಅವಕಾಶ ಪಡೆದ ನ್ಯೂಜಿಲೆಂಡ್‌ನ ವಿಲ್ ಓ ರೂರ್ಕಿ, ತಂಡದ ಈ ಬಾರಿಯ 'ಶೋಧ' ದಿಗ್ವೇಶ್ ರಾಠಿ ಗಮನ ಸೆಳೆದಿದ್ದಾರೆ. ಒಂದು ಪಂದ್ಯಕ್ಕೆ ಅಮಾನತು ಆದ ಕಾರಣ ಸ್ಪಿನ್ನರ್ ರಾಠಿ ಈ ಹಿಂದಿನ ಪಂದ್ಯ ಆಡಿರಲಿಲ್ಲ.

ಆದರೆ ಕೆಳಮಧ್ಯಮ ಕ್ರಮಾಂಕ ವಿಫಲವಾಗಿದೆ. ಅದರಲ್ಲೂ ನಾಯಕ ಹಾಗೂ ಲೀಗ್‌ನ ದುಬಾರಿ ಆಟಗಾರ ರಿಷಭ್ ಪಂತ್ ಅವರ ಬ್ಯಾಟಿನಿಂದ ರನ್‌ಗಳು ಬತ್ತಿಹೋಗಿವೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	14	9	4	1	19	0.372
ಜಿಟಿ	14	9	5	0	18	0.254
ಆರ್‌ಸಿಬಿ	13	8	4	1	17	0.255
ಎಂಐ	14	8	6	0	16	1.142
ಡಿಸಿ	14	7	6	1	15	0.011
ಎಸ್‌ಆರ್‌ಎಚ್	14	6	7	1	13	-0.241
ಎಲ್‌ಎಸ್‌ಜಿ	13	6	7	0	12	-0.337
ಕೆಕೆಆರ್	14	5	7	2	12	-0.305
ಆರ್‌ಆರ್	14	4	10	0	8	-0.549
ಸಿಎಸ್‌ಕೆ	14	4	10	0	8	-0.647

ಆರೆಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 679 ರನ್

ಪರ್ಪಲ್ ಕ್ಯಾಪ್
ನೂರ್ ಅಹಮ್ಮದ್ (ಸಿಎಸ್‌ಕೆ) 24 ವಿಕೆಟ್

ಮತ್ತೊಂದು ಪಂದ್ಯಕ್ಕೆ ಚಾಹಲ್ ಅಲಭ್ಯ

ನವದೆಹಲಿ (ಪಿಟಿಐ): ಬೆರಳಿನ ಗಾಯ ಮಾಗದ ಕಾರಣ ಪಂಜಾಬ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ಮುಂಬೈ ಇಂಡಿಯನ್ಸ್ ವಿರುದ್ಧ ಸೋಮವಾರ ನಡೆದ ಪಂದ್ಯದಲ್ಲಿ ಆಡಲಿಲ್ಲ. ಸತತ ಎರಡನೇ ಪಂದ್ಯ ಅವರಿಗೆ ತಪ್ಪಿದಂತಾಯಿತು.

ಅವರು ಪ್ಲೇಆಫ್ ಪಂದ್ಯದ ವೇಳೆಗೆ ಪೂರ್ಣವಾಗಿ ಚೇತರಿಸಿಕೊಳ್ಳುವ ನಿರೀಕ್ಷೆಯಿದೆ.



ಭಾರತೀಯ ಕ್ರಿಕೆಟ್ ತಂಡಕ್ಕೆ ಹೊಸ ನಾಯಕ ಆಯ್ಕೆಯಾಗಿದ್ದಾರೆ!

ಮುಂಬೈ ಎದುರು ವಿಜೃಂಭಿಸಿದ ಪ್ರಿಯಾಂಶ್, ಇಂಗ್ಲಿಸ್

ಅಗ್ರಸ್ಥಾನಕ್ಕೆ ಲಗ್ಗೆಯಿಟ್ಟ ಪಂಜಾಬ್

ಜೈಪುರ (ಪಿಟಿಐ): ಆರಂಭ ಆಟಗಾರ ಪ್ರಿಯಾಂಶ್ ಆರ್ಯ (62, 35ಎ, 4x9, 6x2) ಮತ್ತು ಜೋಶ್ ಇಂಗ್ಲಿಸ್ (73, 42ಎ, 4x9, 6x3) ಅವರ ಅರ್ಧಶತಕಗಳ ಆಟ ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಸೋಮವಾರ ಮೇಳೈಸಿತು. ಇವರಿಬ್ಬರ ಶತಕದ ಜೊತೆಯಾಟದ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮೇಲೆ ನಿರೀಕ್ಷೆಗಿಂತ ಸುಲಭವಾಗಿ ಏಳು ವಿಕೆಟ್‌ಗಳ ಜಯಪಡೆಯಿತು. ಆ ಮೂಲಕ ಲೀಗ್‌ನಲ್ಲಿ ಅಗ್ರಸ್ಥಾನಕ್ಕೆ ಲಗ್ಗೆಯಿಟ್ಟಿತು.

ಬಲಿಷ್ಠ ಬ್ಯಾಟಿಂಗ್ ಸರದಿ ಹೊಂದಿದ್ದ ಮುಂಬೈ ತಂಡವನ್ನು, ಪಂಜಾಬ್ ಬೌಲರ್‌ಗಳು ಶಿಸ್ತುಬದ್ಧ ದಾಳಿಯಿಂದ 7 ವಿಕೆಟ್‌ಗೆ 184 ರನ್‌ಗಳಿಗೆ ಕಟ್ಟಿಹಾಕಿದರು. ಅಮೋಘ ಫಾರ್ಮಿನಲ್ಲಿರುವ ಸೂರ್ಯಕುಮಾರ್ ಯಾದವ್ ಅವರ ಅರ್ಧಶತಕ (57, 39 ಎಸೆತ) ಬಿಟ್ಟರೆ ಉಳಿದವರ ಕಾಣಿಕೆ ದೊಡ್ಡದಿರಲಿಲ್ಲ. ಬೌಲರ್‌ಗಳ ಶ್ರಮಕ್ಕೆ ಬ್ಯಾಟರ್‌ಗಳು ಕೈಜೋಡಿಸಿದರು. ಇನ್ನೂ 9 ಎಸೆತಗಳಿರುವಂತೆ ಕಿಂಗ್ಸ್ ಆರಾಮವಾಗಿ ಗುರಿ (3 ವಿಕೆಟ್‌ಗೆ 187) ತಲುಪಿತು. ಪಂಜಾಬ್ ಈ ಹಿಂದೆ 2014ರಲ್ಲಿ ಕೊನೆಯ ಬಾರಿ ಅಂಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿತ್ತು. ಮುಂಬೈ ತಂಡವು ಈ ಸೋಲಿನಿಂದಾಗಿ ಎಲಿಮಿನೇಟರ್ ಪಂದ್ಯವನ್ನು ಆಡಬೇಕಿದೆ.

ಬೂಮ್ರಾ ಐದನೇ ಓವರಿನಲ್ಲಿ, ಪಂಜಾಬ್ ತಂಡ 34ರಲ್ಲಿದ್ದಾಗ ಪ್ರಭಸಿಮ್ರನ್ ಸಿಂಗ್ (13) ವಿಕೆಟ್ ಪಡೆದರು. ಆದರೆ ಯುವ ಆಟಗಾರ ಪ್ರಿಯಾಂಶ್ ಮತ್ತು ವಿಕೆಟ್ ಕೀಪರ್ ಜೋಶ್ ಇಂಗ್ಲಿಸ್ ಬೀಸಾಟ ಮುಂದುವರಿಸಿದರು. ಎರಡನೇ ವಿಕೆಟ್‌ಗೆ 50 ಎಸೆತಗಳಲ್ಲಿ 109 ರನ್ ಸೇರಿಸಿ ತಂಡವನ್ನು ಗೆಲುವಿನ ಹಾದಿಯಲ್ಲಿ ಮುನ್ನಡೆಸಿದರು. ಸ್ಯಾಂಟನರ್ ಬೌಲಿಂಗ್‌ನಲ್ಲಿ ಆರ್ಯ ಅವರು ಲಾಂಗ್‌ಆಫ್‌ನಲ್ಲಿ ಸೂರ್ಯ ಅವರಿಗೆ ಕ್ಯಾಚಿತ್ತರು. ನಾಯಕ ಶ್ರೇಯಸ್ ಅಯ್ಯರ್ (ಔಟಾಗದೇ 26, 16ಎ) 'ಫಿನಿಷಿಂಗ್ ಟಚ್' ನೀಡಿದರು.

ಸೂರ್ಯ ಅರ್ಧಶತಕ: ಇದಕ್ಕೆ ಮೊದಲು ಸೂರ್ಯ (57, 39 ಎಸೆತ, 4x6, 6x2) ಮತ್ತು ಇತರ ಬ್ಯಾಟರ್‌ಗಳ ಕಿರುಕಾಣಿಕೆಗಳ ನೆರವಿನಿಂದ ಮುಂಬೈ ಸಾಧಾರಣ ಮೊತ್ತ ಗಳಿಸಿತು. ಸೂರ್ಯ ಅವರಿಗೆ ಇದು ಋತುವಿನ ಐದನೇ ಅರ್ಧಶತಕ.

ರಿಯಾನ್ ರಿಕೆಲ್ಟನ್ (27, 20ಎ) ಮತ್ತು ರೋಹಿತ್ ಶರ್ಮಾ (24) ಮೊದಲ ವಿಕೆಟ್‌ಗೆ 45 ರನ್ ಸೇರಿಸಿದರು. ಆದರೆ ಪವರ್‌ಪ್ಲೇ ನಂತರ ಮುಂಬೈ 52 ರನ್‌ಗಳನ್ನಷ್ಟೇ ಗಳಿಸಲು ಶಕ್ತವಾಗಿತ್ತು. ಪಂಜಾಬ್ ಪರ ಈ ಋತುವಿನ ಕೊನೆಯ ಪಂದ್ಯ ಆಡಿದ ದಕ್ಷಿಣ ಆಫ್ರಿಕಾದ ವೇಗಿ ಮಾರ್ಕೊ ಯಾನ್ಸೆನ್ ಅವರು ರಿಕೆಲ್ಟನ್ ವಿಕೆಟ್ ಪಡೆದರು.

ಕನ್ನಡಿಗ ವೈಶಾಖ ವಿಜಯಕುಮಾರ್ (44ಕ್ಕೆ2) ಅವರು ತಿಲಕ್ ವರ್ಮಾ (1) ಮತ್ತು ಅಪಾಯಕಾರಿಯಾಗಿ ಕಾಣುತ್ತಿದ್ದ ವಿಲ್ ಜಾಕ್ಸ್ (17, 8ಎ) ಅವರ ವಿಕೆಟ್ ಪಡೆದು ಮುಂಬೈ ಅಬ್ಬರಿಸದಂತೆ ತಡೆದರು. ಸ್ಪಿನ್ನರ್ ಯಜುವೇಂದ್ರ ಚಾಹಲ್ ಅನುಪಸ್ಥಿತಿ ಹೆಚ್ಚು ಬಾಧಿಸದಂತೆ ಹರಪ್ರೀತ್ ಬ್ರಾರ್ (36ಕ್ಕೆ1) ನೋಡಿಕೊಂಡರು.

ಸಂಕ್ಷಿಪ್ತ ಸ್ಕೋರ್: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 184 (ರಿಯಾನ್ ರಿಕೆಲ್ಟನ್ 27, ರೋಹಿತ್ ಶರ್ಮಾ 24, ಸೂರ್ಯಕುಮಾರ್ ಯಾದವ್ 57, ಹಾರ್ದಿಕ್ ಪಾಂಡ್ಯ; ಅರ್ಷದೀಪ್ ಸಿಂಗ್ 28ಕ್ಕೆ 2, ಮಾರ್ಕೊ ಯಾನ್ಸನ್ 34ಕ್ಕೆ 2, ವೈಶಾಕ್ ವಿಜಯಕುಮಾರ್ 44ಕ್ಕೆ 2). ಪಂಜಾಬ್ ಕಿಂಗ್ಸ್: 18.3 ಓವರ್‌ಗಳಲ್ಲಿ 3 ವಿಕೆಟ್‌ಗೆ 187 (ಪ್ರಿಯಾಂಶ್ ಆರ್ಯ 62, ಜೋಶ್ ಇಂಗ್ಲಿಸ್ 73, ಶ್ರೇಯಸ್ ಅಯ್ಯರ್ ಔಟಾಗದೇ 26; ಜಸ್‌ಪ್ರೀತ್ ಬೂಮ್ರಾ 23ಕ್ಕೆ 1, ಮಿಚೆಲ್ ಸ್ಯಾಂಟನರ್ 41ಕ್ಕೆ 2). ಪಂದ್ಯದ ಆಟಗಾರ: ಜೋಶ್ ಇಂಗ್ಲಿಸ್



ಅರ್ಧಶತಕ ದಾಖಲಿಸಿದ ಪ್ರಿಯಾಂಶ್ ಆರ್ಯ ಅವರನ್ನು ಅಭಿನಂದಿಸಿದ ಜೋಶ್ ಇಂಗ್ಲಿಸ್ ಎಎಫ್‌ಪಿ ಚಿತ್ರ

ಸಚಿನ್ ದಾಖಲೆ ಮುರಿದ ಸೂರ್ಯ



ಸೂರ್ಯಕುಮಾರ್ ಈ ಪಂದ್ಯದಲ್ಲಿ ಅರ್ಧ ಶತಕ ಹೊಡೆಯುವ ಹಾದಿಯಲ್ಲಿ, ಐಪಿಎಲ್ ಒಂದೇ ಋತುವಿನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಮುಂಬೈ ಇಂಡಿಯನ್ಸ್ ಆಟಗಾರ ಎನಿಸಿದರು. ಈ ಹಿಂದಿನ ದಾಖಲೆ, ದಿಗ್ಗಜ ಬ್ಯಾಟರ್ ಸಚಿನ್ ತೆಂಡೂಲ್ಕರ್ (2010ರ ಆವೃತ್ತಿಯಲ್ಲಿ 618 ರನ್) ಹೆಸರಿನಲ್ಲಿತ್ತು.

ಸೂರ್ಯ ಈ ಪಂದ್ಯದವರೆಗೆ 640 ರನ್ ಗಳಿಸಿದ್ದಾರೆ. ಭಾರತ ಟಿ20 ತಂಡದ ನಾಯಕ ಸೂರ್ಯ ಅವರು ಸತತ 14 ಇನಿಂಗ್ಸ್‌ಗಳಲ್ಲಿ 25ಕ್ಕಿಂತ ಹೆಚ್ಚಿನ ಮೊತ್ತ ಗಳಿಸಿ ದಾಖಲೆ ಬರೆದರು.

ಫ್ರೆಂಚ್ ಓಪನ್ ಟೆನಿಸ್: ಟೇಲರ್, ನವರೊಗೆ ಆಘಾತ

ಅಲ್ಕರಾಜ್, ಶ್ವಾಂಟೆಕ್ ಮುನ್ನಡೆ

ಪ್ಯಾರಿಸ್ (ಎಎಫ್‌ಪಿ): ಹಾಲಿ ಚಾಂಪಿಯನ್ನರಾದ ಕಾರ್ಲೋಸ್ ಅಲ್ಕರಾಜ್ ಮತ್ತು ಇಗಾ ಶ್ವಾಂಟೆಕ್ ಸೋಮವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ನೇರ ಸೆಟ್‌ಗಳ ಗೆಲುವಿನೊಡನೆ ಎರಡನೇ ಸುತ್ತು ಪ್ರವೇಶಿಸಿದರು.

ಸ್ಪೇನ್‌ನ ತಾರೆ ಅಲ್ಕರಾಜ್ 6-3, 6-4, 6-2ರಿಂದ ಇಟಲಿಯ ಕ್ವಾಲಿಫೈಯರ್ ಆಟಗಾರ ಗಿಯುಲಿಯೊ ಜೆಪ್ಪಿಯೇರಿ ಅವರನ್ನು ಹಿಮ್ಮೆಟ್ಟಿಸಿ, ಪ್ರಶಸ್ತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅಭಿಯಾನ ಆರಂಭಿಸಿದರು. ಎರಡನೇ ಶ್ರೇಯಾಂಕದ ಅಲ್ಕರಾಜ್ ಮುಂದಿನ ಸುತ್ತಿನಲ್ಲಿ ಹಂಗೇರಿಯ ಫ್ಯಾಬಿಯನ್ ಮರೋಜ್ಸನ್ ಅವರನ್ನು ಎದುರಿಸುವರು.

ರೋಲ್ಯಾಂಡ್ ಗ್ಯಾರೋಸ್‌ನ ಸುಝಾನ್ ಲೆಂಗ್ಲೆನ್ ಕೋರ್ಟ್‌ನಲ್ಲಿ ನಡೆದ ಹಣಾಹಣಿಯಲ್ಲಿ ವಿಶ್ವದ 310ನೇ ಕ್ರಮಾಂಕದ ಆಟಗಾರನನ್ನು ಸೋಲಿಸಲು 22 ವರ್ಷ ವಯಸ್ಸಿನ ಅಲ್ಕರಾಜ್ ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ.

ಪ್ರಸಕ್ತ ಋತುವಿನ ಮಾಂಟೆ ಕಾರ್ಲೊ ಮಾಸ್ಟರ್ಸ್ ಮತ್ತು ಇಟಾಲಿಯನ್ ಓಪನ್ ಟ್ರೋಫಿಗಳನ್ನು ಆವೆ ಮಣ್ಣಿನ ಮೇಲೆ ಗೆದ್ದಿರುವ ಅಲ್ಕರಾಜ್ ಇಲ್ಲೂ ಪ್ರಶಸ್ತಿ ಜಯಿಸುವ ನೆಚ್ಚಿನ ಆಟಗಾರನಾಗಿದ್ದಾರೆ. ಅವರು ಐದನೇ ಗ್ರ್ಯಾನ್‌ಸ್ಲಾಮ್ ಕಿರೀಟದ ನಿರೀಕ್ಷೆಯಲ್ಲಿದ್ದಾರೆ.

ಟೇಲರ್‌ಗೆ ಆಘಾತ: ಅಮೆರಿಕದ ಟೇಲರ್ ಫ್ರಿಟ್ಜ್ ಮೊದಲ ಸುತ್ತಿನಲ್ಲಿ ನಿರಾಸೆ ಅನುಭವಿಸಿದರು. ಶ್ರೇಯಾಂಕ ರಹಿತ ಜರ್ಮನಿಯ ಡೇನಿಯಲ್ ಆಲ್ಟ್‌ಮೇಯರ್ 7-5, 3-6, 6-3, 6-1ರಿಂದ ನಾಲ್ಕನೇ ಶ್ರೇಯಾಂಕದ ಟೇಲರ್ ಅವರಿಗೆ ಆಘಾತ ನೀಡಿದರು.



ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಎಎಫ್‌ಪಿ ಚಿತ್ರ

ಏಳನೇ ಶ್ರೇಯಾಂಕದ ಕ್ಯಾಸ್ಪರ್ ರೂಡ್ (ನಾರ್ವೆ) 6-3, 6-4, 6-2ರಿಂದ ಆಲ್ಬರ್ಟ್ ರಾಮೋಸ್ ವಿನೋಲಾಸ್ (ಸ್ಪೇನ್) ವಿರುದ್ಧ ನಿರಾಯಾಸವಾಗಿ ಗೆದ್ದರು. 13ನೇ ಶ್ರೇಯಾಂಕದ ಬೆನ್ ಶೆಲ್ಟನ್ (ಅಮೆರಿಕ) 6-4, 4-6, 3-6, 6-2, 6-3ರಿಂದ ಲೊರೆಂಜೊ ಸೊನೆಗೊ (ಇಟಲಿ) ಅವರನ್ನು ಮಣಿಸಿದರು.

ಶ್ವಾಂಟೆಕ್ ಶುಭಾರಂಭ: ಪೋಲೆಂಡ್‌ನ ತಾರೆ 23 ವರ್ಷ ವಯಸ್ಸಿನ ಶ್ವಾಂಟೆಕ್ ಆರಂಭಿಕ ಸುತ್ತಿನಲ್ಲಿ 6-3, 6-3ರಿಂದ ಸ್ಲೊವಾಕಿಯಾದ ರೆಬೆಕಾ ಸ್ರಾಮ್ಕೋವಾ ಅವರನ್ನು ಮಣಿಸಿದರು.


ನಾಲ್ಕು ಬಾರಿಯ ಚಾಂಪಿಯನ್ ಶ್ವಾಂಟೆಕ್ ಹಾಲಿ ಋತುವಿನಲ್ಲಿ ಲಯಕ್ಕೆ ಪರದಾಡುತ್ತಿದ್ದು, ವಿಶ್ವ ರ‍್ಯಾಂಕಿಂಗ್‌ನಲ್ಲಿ ಐದನೇ ಸ್ಥಾನಕ್ಕೆ ಇಳಿದಿದ್ದಾರೆ. ಅವರಿಗೆ ಮುಂದಿನ ಸುತ್ತಿನಲ್ಲಿ ಅಮೆರಿಕ ಓಪನ್ ಮಾಜಿ ಚಾಂಪಿಯನ್ ಎಮ್ಮಾ ರಾಡುಕಾನು ಎದುರಾಳಿಯಾಗಿದ್ದಾರೆ.

ಎರಡು ದಿನಗಳ ಹಿಂದೆ ಸ್ಟ್ರಾಸ್‌ಬರ್ಗ್‌ನಲ್ಲಿ ಡಬ್ಲ್ಯುಟಿಎ ಪ್ರಶಸ್ತಿ ಗೆದ್ದು ಬಂದಿರುವ ವಿಂಬಲ್ಡನ್ ಮಾಜಿ ಚಾಂಪಿಯನ್, ಕಜಕಸ್ತಾನದ ಎಲೆನಾ ರಿಬಾಕಿನಾ 6-1, 4-6, 6-4ರಿಂದ ಅರ್ಜೆಂಟೀನಾದ ಜೂಲಿಯಾ ರೀರಾ ಅವರನ್ನು ಸೋಲಿಸಿ ಎರಡನೇ ಸುತ್ತಿಗೆ ಮುನ್ನಡೆದರು. 12ನೇ ಶ್ರೇಯಾಂಕದ ರಿಬಾಕಿನಾ ಅವರಿಗೆ ಅಮೆರಿಕದ ಇವಾ ಜೊವಿಕ್ ಮುಂದಿನ ಎದುರಾಳಿ.

ಒಸಾಕಾಗೆ ನಿರಾಸೆ: ನಾಲ್ಕು ಗ್ರ್ಯಾನ್‌ಸ್ಲಾಮ್ ಕಿರೀಟಗಳ ಒಡತಿ ನವೋಮಿ ಒಸಾಕಾ ಮೊದಲ ಸುತ್ತಿನಲ್ಲೇ ಹೊರಬಿದ್ದರು. 10ನೇ ಶ್ರೇಯಾಂಕದ ಪೌಲಾ ಬಡೋಸಾ (ಸ್ಪೇನ್) 6-7 (1/7), 6-1, 6-4ರಿಂದ ಜಪಾನ್ ಆಟಗಾರ್ತಿಯನ್ನು ಸದೆಬಡಿದರು.

ಒಂಬತ್ತನೇ ಶ್ರೇಯಾಂಕದ ಎಮ್ಮಾ ನವರೊ ಮೊದಲ ಸುತ್ತಿನಲ್ಲೇ ಅಭಿಯಾನ ಮುಗಿಸಿದರು. ಸ್ಪೇನ್‌ನ ಜೆಸ್ಸಿಕಾ ಬೆಜೋಸ್ ಮನೇರಿಯೊ 6-0, 6-1ರಿಂದ ನಿರಾಯಾಸವಾಗಿ ಅಮೆರಿಕದ ಆಟಗಾರ್ತಿಯನ್ನು ಮಣಿಸಿದರು.

'ಟಿ20 ವಿಶ್ವಕಪ್ ಆಡುವ ಗುರಿ'



ಕೆ.ಎಲ್. ರಾಹುಲ್

ನವದೆಹಲಿ (ಪಿಟಿಐ): 'ನನಗೆ ಈಗಲೂ ಭಾರತ ಟಿ20 ಕ್ರಿಕೆಟ್ ತಂಡಕ್ಕೆ ಮರಳುವ ವಿಶ್ವಾಸವಿದೆ. ಮುಂದಿನ ಟಿ20 ಕ್ರಿಕೆಟ್ ವಿಶ್ವಕಪ್ ಆಡುವತ್ತ ನನ್ನ ಚಿತ್ತವಿದೆ. ಆದರೆ ಸದ್ಯ ನಾನು ಈಗ ಆಡುವ ರೀತಿಯನ್ನು ಮುಂದುವರಿಸುತ್ತೇನೆ. ಅದನ್ನೇ ಆನಂದಿಸುತ್ತೇನೆ' ಎಂದು ಅನುಭವಿ ಬ್ಯಾಟರ್ ಕೆ.ಎಲ್. ರಾಹುಲ್ ಹೇಳಿದ್ದಾರೆ.

ಹಾಲಿ ಚಾಂಪಿಯನ್ ಭಾರತವೇ ಮುಂದಿನ ವರ್ಷ ಟಿ20 ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸಲಿದೆ. ರಾಹುಲ್ ಅವರು ಮೂರು ವರ್ಷಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದರು. ಅದರಲ್ಲಿ ಭಾರತ ತಂಡವು ಸೆಮಿಫೈನಲ್‌ನಲ್ಲಿ ಸೋತಿತ್ತು.

ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ರಾಹುಲ್ ಅವರು ಡೆಲ್ಲಿ ತಂಡದಲ್ಲಿ ಆಡುತ್ತಿದ್ದಾರೆ. ಅವರು 13 ಪಂದ್ಯಗಳಿಂದ 539 ರನ್ ಪೇರಿಸಿದ್ದಾರೆ. ಅದರಲ್ಲಿ ಒಂದು ಅಮೋಘ ಶತಕವೂ ಸೇರಿದೆ. ಅಲ್ಲದೇ ಸತತ ಐದನೇ ಆವೃತ್ತಿಯಲ್ಲಿ ಅವರು 500ಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿದ ದಾಖಲೆಯನ್ನೂ ಮಾಡಿದ್ದಾರೆ.

'ಕಳೆದ ಕೆಲವು ವರ್ಷಗಳಿಂದ ನಾನು ಭಾರತ ಟಿ20 ತಂಡದಲ್ಲಿ ಆಡಿಲ್ಲ. ಈ ಅವಧಿಯಲ್ಲಿ ನಾನು ಯಾವ ಹಂತಗಳಲ್ಲಿ ಸುಧಾರಣೆ ಮಾಡಿಕೊಳ್ಳಬೇಕು ಮತ್ತು ಹೆಚ್ಚು ಉತ್ತಮವಾಗಿ ಆಡಬೇಕು ಎಂಬುದರ ಬಗ್ಗೆ ಯೋಚಿಸಲು ಅವಕಾಶ ದೊರೆಯಿತು. ಆ ಪ್ರಕಾರ ನಾನು ಮುಂದುವರಿಯುವೆ' ಎಂದು ಕನ್ನಡಿಗ ರಾಹುಲ್ ಅವರು ಸ್ಕೈ ಸ್ಪೋರ್ಟ್ಸ್ ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಕ್ರಿಕೆಟ್: ಪಾಂಚಾಲ್ ವಿದಾಯ



ಅಹಮದಾಬಾದ್ (ಪಿಟಿಐ): ಈ ಹಿಂದೆ ಭಾರತ 'ಎ' ತಂಡವನ್ನು ಮುನ್ನಡೆಸಿದ್ದ ಗುಜರಾತ್‌ನ ಬ್ಯಾಟರ್ ಪ್ರಿಯಾಂಕ್ ಪಾಂಚಾಲ್ ಅವರು ಕ್ರಿಕೆಟ್‌ನ ಎಲ್ಲ ಮಾದರಿಗೆ ವಿದಾಯ ಹೇಳಿದ್ದಾರೆ ಎಂದು ಗುಜರಾತ್ ಕ್ರಿಕೆಟ್ ಸಂಸ್ಥೆ ಸೋಮವಾರ ತಿಳಿಸಿದೆ.

35 ವರ್ಷ ವಯಸ್ಸಿನ ಪಾಂಚಾಲ್ 127 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದು, 45.18ರ ಸರಾಸರಿಯಲ್ಲಿ 8,856 ರನ್ ಗಳಿಸಿದ್ದಾರೆ. ಇದರಲ್ಲಿ 29 ಶತಕಗಳು ಮತ್ತು 34 ಅರ್ಧ ಶತಕಗಳು ಒಳಗೊಂಡಿವೆ. ಆರಂಭ ಆಟಗಾರರಾಗಿದ್ದ ಪಾಂಚಾಲ್ ಅವರು ಗುಜರಾತ್ ರಣಜಿ ತಂಡವನ್ನೂ ಮುನ್ನಡೆಸಿದ್ದಾರೆ. 17 ವರ್ಷ ಅವರು ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ.

ಕೆಲವು ಸಂದರ್ಭಗಳಲ್ಲಿ ಅವರು ಭಾರತ ಸೀನಿಯರ್ ತಂಡಕ್ಕೂ ಆಯ್ಕೆಯಾಗಿದ್ದರು. ಒಮ್ಮೆ ರೋಹಿತ್ ಶರ್ಮಾ ಸ್ಥಾನಕ್ಕೆ ಬದಲಿಯಾಗಿ ತಂಡ ಸೇರಿಕೊಂಡಿದ್ದರು. 2021ರಲ್ಲಿ ತವರಿನಲ್ಲಿ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಅವರು ಅಭಿಮನ್ಯು ಈಶ್ವರನ್ ಜೊತೆಗೆ ಮೀಸಲು ಆಟಗಾರರ ಪಟ್ಟಿಯಲ್ಲಿದ್ದರು.

2016–17ರ ರಣಜಿ ಋತುವಿನಲ್ಲಿ ಅವರು 1,310 ರನ್ ಬಾರಿಸಿ ಅಮೋಘ ಸಾಧನೆ ತೋರಿದ್ದರು. ಆ ಸಲ ಒಂದೇ ಇನಿಂಗ್ಸ್‌ನಲ್ಲಿ ಅಜೇಯ 314 ರನ್ ಬಾರಿಸಿದ್ದರು. ಆ ವರ್ಷ ಗುಜರಾತ್ ರಣಜಿ ಚಾಂಪಿಯನ್ ಆಗಿತ್ತು.

ಜಾವೆಲಿನ್: ಪ್ಯಾರಾ ಅಥ್ಲೀಟ್ ಮಹೇಂದ್ರ ಗುರ್ಜರ್ ವಿಶ್ವದಾಖಲೆ

ನವದೆಹಲಿ (ಪಿಟಿಐ): ಭಾರತದ ಪ್ಯಾರಾ ಅಥ್ಲೀಟ್ ಮಹೇಂದ್ರ ಗುರ್ಜರ್ ಅವರು ಸ್ವಿಜರ್ಲೆಂಡ್‌ನಲ್ಲಿ ನಡೆಯುತ್ತಿರುವ ನಾಟ್ವಿಲ್ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರಿ ಕೂಟದಲ್ಲಿ ಭಾನುವಾರ ಪುರುಷರ ಜಾವೆಲಿನ್ ಎಫ್‌42 ವಿಭಾಗದಲ್ಲಿ 61.17 ಮೀ. ದೂರ ಎಸೆದು ವಿಶ್ವ ದಾಖಲೆ ಸ್ಥಾಪಿಸಿದ್ದಾರೆ.

27 ವರ್ಷ ವಯಸ್ಸಿನ ಗುರ್ಜರ್ ಅವರು 2022ರಲ್ಲಿ ಬ್ರೆಜಿಲ್‌ನ ರಾಬರ್ಟೊ ಫ್ಲೋರಿಯಾನಿ ಎಡ್ನೆಲ್‌ಸನ್ ಸ್ಥಾಪಿಸಿದ್ದ ದಾಖಲೆ (59.19 ಮೀ.) ಮುರಿದರು. ಮೂರನೇ ಯತ್ನದಲ್ಲಿ ವಿಶ್ವದಾಖಲೆ ಥ್ರೊ ದಾಖಲಿಸಿದರು.

ಎರಡು ಬಾರಿಯ ಪ್ಯಾರಾಲಿಂಪಿಕ್ ಸ್ವರ್ಣ ವಿಜೇತ ಹಾಗೂ ವಿಶ್ವದಾಖಲೆ ವೀರ ಸುಮಿತ್ ಅಂಟಿಲ್ ಅವರು ಪುರುಷರ ಜಾವೆಲಿನ್ ಎಫ್‌64 ವಿಭಾಗದಲ್ಲಿ 72.35 ಮೀ. ದೂರ ದಾಖಲಿಸಿ ಅಗ್ರಸ್ಥಾನ ಪಡೆದರು.

ಚೆನ್ನೈ ಜಿಎಂ: ಆಟಗಾರರ ಸಂಖ್ಯೆ 20ಕ್ಕೆ

ಚೆನ್ನೈ (ಪಿಟಿಐ): ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯ ವ್ಯಾಪ್ತಿ ವಿಸ್ತರಿಸಲಾಗಿದ್ದು, ಭಾಗವಹಿಸುವ ಆಟಗಾರರ ಸಂಖ್ಯೆಯನ್ನು 20ಕ್ಕೆ ಹೆಚ್ಚಿಸಲಾಗಿದೆ. ಬಹುಮಾನ ಮೊತ್ತವನ್ನೂ ಏರಿಸಲಾಗಿದ್ದು, ಈಗ ಅದು ₹1 ಕೋಟಿ ಆಗಿದೆ.

ಆಗಸ್ಟ್ 6 ರಿಂದ 15ರವರೆಗೆ ನಿಗದಿಯಾಗಿರುವ ಈ ಟೂರ್ನಿಯಲ್ಲಿ ಈ ಹಿಂದೆ ಪ್ರತಿಯೊಂದು ವಿಭಾಗದಲ್ಲಿ (ಓಪನ್ ಮತ್ತು ಚಾಲೆಂಜರ್ಸ್ ವಿಭಾಗ) ಎಂಟು ಆಟಗಾರರರು ಇರುತ್ತಿದ್ದು, ಅದನ್ನು ಹತ್ತಕ್ಕೆ ಏರಿಸಲಾಗಿದೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಹಿಂದಿನ (2024ರ) ಆವೃತ್ತಿಯ ಗ್ರ್ಯಾಂಡ್‌ಮಾಸ್ಟರ್ಸ್ ವಿಭಾಗದ ಸರಾಸರಿ ರೇಟಿಂಗ್ 2729 ಆಗಿದ್ದು ಕಣ ಪ್ರಬಲವಾಗಿತ್ತು. ಚಾಲೆಂಜರ್ಸ್ ವಿಭಾಗದಲ್ಲಿ ಮೊದಲ ಬಾರಿ ಮಹಿಳೆಯರಿಗೂ ಆಡುವ ಅವಕಾಶ ನೀಡಲಾಗಿತ್ತು.

ಹೋದ ವರ್ಷ ಮಾಸ್ಟರ್ಸ್ ವಿಭಾಗದಲ್ಲಿ ಅರವಿಂದ ಚಿದಂಬರಮ್, ಸ್ವದೇಶದ ಅರ್ಜುನ್ ಇರಿಗೇಶಿ ಮತ್ತು ವಿದಿತ್ ಗುಜರಾತಿ ಅವರನ್ನು ಹಿಂದೆಹಾಕಿ ಚಾಂಪಿಯನ್ ಆಗಿದ್ದರು. ಪ್ರಣವ್ ಚಾಲೆಂಜರ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದರು.

ಹಾಕಿ: ಭಾರತಕ್ಕೆ ಮಣಿದ ಉರುಗ್ವೆ

ರೊಸಾರಿಯೊ (ಅರ್ಜೆಂಟೀನಾ): ಕನಿಕಾ ಸಿವಾಚ್ ಗಳಿಸಿದ ಅವಳಿ ಗೋಲುಗಳ ನೆರವಿನಿಂದ ಭಾರತ ಜೂನಿಯರ್ ಮಹಿಳಾ ತಂಡ ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯ ಕಠಿಣ ಹೋರಾಟದ ಪಂದ್ಯದಲ್ಲಿ ಭಾನುವಾರ ಉರುಗ್ವೆ ತಂಡದ ಮೇಲೆ 3–2 ಗೋಲುಗಳ ಜಯಗಳಿಸಿತು. ಇದು ಭಾರತಕ್ಕೆ ಸತತ ಎರಡನೇ ಗೆಲುವು.

ಕನಿಕಾ 46ನೇ ಮತ್ತು 50ನೇ ನಿಮಿಷ ಚೆಂಡನ್ನು ಗುರಿತಲುಪಿಸಿದರು. ಸೋನಮ್ 21ನೇ ನಿಮಿಷ ಪೆನಾಲ್ಟಿ ಕಾರ್ನರ್ ಮೂಲಕ ಭಾರತದ ಮೊದಲ ಗೋಲು ಗಳಿಸಿದ್ದರು.

ಶೂಟಿಂಗ್: ತೇಜಸ್ವಿನಿಗೆ ಚಿನ್ನ

ಝೂಲ್ (ಜರ್ಮನಿ), (ಪಿಟಿಐ): ಭಾರತ ತೇಜಸ್ವಿನಿ, ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಸ್ಮರಣೀಯ ಪ್ರದರ್ಶನ ನೀಡಿ ಚಿನ್ನ ಗೆದ್ದುಕೊಂಡರು. ಆ ಮೂಲಕ ಭಾರತ ಪದಕಪಟ್ಟಿಯಲ್ಲಿ ಚೀನಾವನ್ನು ಹಿಂದೆಹಾಕಿ ಅಗ್ರಸ್ಥಾನ ಪಡೆಯಲು ನೆರವಾದರು.

ಹರಿಯಾಣದ 20 ವರ್ಷ ವಯಸ್ಸಿನ ತೇಜಸ್ವಿನಿ ಅವರಿಗೆ ಇದು ವಿಶ್ವಕಪ್‌ನಲ್ಲಿ ಮೊದಲ ವೈಯಕ್ತಿಕ ಪದಕವಾಗಿದೆ. ಭಾರತ ಈ ಕೂಟದಲ್ಲಿ ಗೆದ್ದ 11ನೇ ಪದಕ ಸಹ. ತನ್ಮೂಲಕ ಭಾರತ ಈ ಕೂಟದಲ್ಲಿ ಮೂರು ಚಿನ್ನ, ನಾಲ್ಕು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳೊಡನೆ ಅಭಿಯಾನ ಪೂರೈಸಿತು. ಚೀನಾ ಸಹ ಮೂರು ಚಿನ್ನ ಗೆದ್ದರೂ, ಆ ತಂಡಕ್ಕೆ ಒಂದು ಕಂಚಿನ ಪದಕ ಮಾತ್ರ ಇತ್ತು.

ಅಲಿನಾ ನೆಸ್ಟ್‌ಸಿಯಾರೊವಿಚ್ (ವೈಯಕ್ತಿಕ ತಟಸ್ಥ ಅಥ್ಲೀಟ್) ಬೆಳ್ಳಿ ಹಾಗೂ ಹಂಗೇರಿಯ ಮಮಿರಿಯಮ್ ಜಾಕೊ ಕಂಚಿನ ಪದಕ ಗೆದ್ದರು.

ಇದರೊಂದಿಗೆ ಈ ವಿಶ್ವಕಪ್ ಸೇರಿ ಕೊನೆಯ ಐದು ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಕೂಟಗಳಲ್ಲಿ ಭಾರತ ನಾಲ್ಕರಲ್ಲಿ ಅಗ್ರಸ್ಥಾನ ಗಳಿಸಿದಂತಾಯಿತು.

ಪುರಿ ಕಡಲತೀರ ಬಳಿ ಮಗುಚಿದ ಸ್ಪೀಡ್ ಬೋಟ್

ಸೌರವ್ ಗಂಗೂಲಿ ಅಣ್ಣ, ಅತ್ತಿಗೆ ಪಾರು

ಪುರಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಅವರ ಅಣ್ಣ ಸ್ನೇಹಾಶಿಶ್ ಗಂಗೂಲಿ ಮತ್ತು ಅತ್ತಿಗೆ ಅರ್ಪಿತಾ ಅವರು ಇತರ ಕೆಲವರೊಂದಿಗೆ ಪುರಿ ತೀರದ ಸಮುದ್ರದಲ್ಲಿ ವಿಹರಿಸುತ್ತಿದ್ದ ಸ್ಪೀಡ್‌ಬೋಟ್ ಮಗುಚಿದ್ದು, ಅವರು ಜೀವರಕ್ಷಕರ ಸಹಾಯದಿಂದ ಪಾರಾಗಿದ್ದಾರೆ. ಈ ಘಟನೆಗೆ ಸಂಬಂಧಿಸಿ ತನಿಗೆ ನಡೆಸುವಂತೆ ಪುರಿ ಜಿಲ್ಲಾಡಳಿತ ಆದೇಶಿಸಿದೆ.

ಘಟನೆ ಮೇ 24ರಂದು ನಡೆದಿದ್ದರೂ, ವಿಷಯ ಸೋಮವಾರ ಬಹಿರಂಗವಾಗಿದೆ. 'ಈ ಘಟನೆಗೆ ಕಾರಣವೇನೆಂದು ತನಿಖೆ ನಡೆಸುವಂತೆ ಆದೇಶ ನೀಡಿದ್ದೇನೆ. ದೋಣಿ ವಿಹಾರ ನಿರ್ವಹಣೆಯ ಗುತ್ತಿಗೆ ಪಡೆದ ಅಪರೇಟರ್ ಕಡೆಯಿಂದ ಸುರಕ್ಷತಾ ನಿಯಮ ಪಾಲನೆಯಲ್ಲಿ ಲೋಪವಾಗಿರುವುದು ಕಂಡುಬಂದರೆ ಕ್ರಮ ಕೈಗೊಳ್ಳಲಾಗುವುದು' ಎಂದು ಪುರಿ ಜಿಲ್ಲಾಧಿಕಾರಿ ಸಿದ್ಧಾರ್ಥಶಂಕರ್ ಸ್ವೇನ್ ತಿಳಿಸಿದ್ದಾರೆ.

ಸ್ಕೈಡ್ರೈವ್ ಅಡ್ವೆಂಚರ್ ಮತ್ತು ವಾಟರ್ ಸ್ಪೋರ್ಟ್ಸ್ ಹೆಸರಿನ ಖಾಸಗಿ ಸಂಸ್ಥೆಗೆ ಒಡಿಶಾ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರವು ಇಲ್ಲಿ ಜಲಕ್ರೀಡಾ ಚಟುವಟಿಕೆ ನಡೆಸಲು ಅನುಮತಿ ನೀಡಿತ್ತು.

'ಶನಿವಾರ ಮಧ್ಯಾಹ್ನ ಘಟನೆ ನಡೆದರೂ, ಕುಟುಂಬ ಸದಸ್ಯರು ದೂರು ಕೊಟ್ಟಿರಲಿಲ್ಲ. ನಮಗೆ ಗೊತ್ತಾದ ಬಳಿಕ ಕುಟುಂಬ ಸದಸ್ಯರನ್ನು ಸಂಪರ್ಕಿಸಿದ್ದೇವೆ. ಇದು ಮಾನವ ತಪ್ಪಿನಿಂದ ಆಗಿದ್ದೊ ಅಥವಾ ಪ್ರಾಕೃತಿಕ ಕಾರಣದಿಂದ ಆಗಿದೆಯೊ ಎಂಬುದನ್ನು ತಿಳಿದುಕೊಳ್ಳಲು ಸೂಚಿಸಿದ್ದೇವೆ' ಎಂದು ಪುರಿ ಎಸ್‌ಪಿ ವಿನೀತ್ ಅಗರವಾಲ್ ತಿಳಿಸಿದರು.

ಸ್ಥಳೀಯ ಟೆಲಿವಿಷನ್ ಚಾನೆಲ್ ಪ್ರಸಾರ ಮಾಡಿರುವ ದೃಶ್ಯಾವಳಿಗಳ ಪ್ರಕಾರ ಸಮುದ್ರ ಪ್ರಕ್ಷುಬ್ಧವಾಗಿದ್ದು, ದೈತ್ಯ ಅಲೆಯೊಂದು ದೋಣಿಗೆ ಬಡಿದ ಕಾರಣ ಅದು ಆಯತಪ್ಪಿ ಬುಡಮೇಲಾಗಿದೆ. ಅರ್ಪಿತಾ, ಸ್ನೇಹಾಶಿಶ್ ಸೇರಿ ಎಲ್ಲರೂ ಅಪಾಯಕ್ಕೆ ಸಿಲುಕಿದ್ದರು.



ಸೌರವ್ ಗಂಗೂಲಿ ಅವರ ಅತ್ತಿಗೆ ಅರ್ಪಿತಾ ಅವರನ್ನು ಜೀವರಕ್ಷಕ ಸಿಬ್ಬಂದಿ ದಡ ಸೇರಿಸಿದರು –ಪಿಟಿಐ ಚಿತ್ರ

'ದೇವರ ದಯದಿಂದ ನಾವು ಬದುಕುಳಿದೆವು. ನಾವು ಇನ್ನೂ ಆ ಭಯದ ಗುಂಗಿನಿಂದ ಹೊರಬಂದಿಲ್ಲ. ಸಮುದ್ರದಲ್ಲಿ ಜಲಕ್ರೀಡೆ ಚಟುವಟಿಕೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಕೋಲ್ಕತ್ತಕ್ಕೆ ಮರಳಿದ ಮೇಲೆ ಈ ಬಗ್ಗೆ ಪುರಿ ಎಸ್‌ಪಿ ಮತ್ತು ಒಡಿಶಾ ಸಿಎಂ ಅವರಿಗೆ ಪತ್ರ ಬರೆಯುವುದಾಗಿ' ಅರ್ಪಿತಾ ತಿಳಿಸಿದ್ದಾರೆ. 'ಜೀವರಕ್ಷಕರ ಸಕಾಲಿಕ ನೆರವು ನಮ್ಮನ್ನು ಕಾಪಾಡಿತು' ಎಂದಿದ್ದಾರೆ. ರಬ್ಬರ್ ಬೋಟ್‌ಗಳನ್ನು ಬಳಸಿ ಅಪಾಯಕ್ಕೆ ಸಿಲುಕಿದವರನ್ನು ರಕ್ಷಿಸಲಾಯಿತು.

'ಸಾಹಸ ಕ್ರೀಡಾ ಅಪರೇಟರ್‌ಗಳ ದುರಾಸೆ ಇದಕ್ಕೆ ಕಾರಣ' ಎಂದು ಅರ್ಪಿತಾ ದೂರಿದ್ದಾರೆ. 10 ಮಂದಿ ಕುಳಿತುಕೊಳ್ಳಲು ವಿನ್ಯಾಸ ಮಾಡಿದ್ದ ದೋಣಿಯಲ್ಲಿ ಬರೇ ನಾಲ್ಕು ಮಂದಿ ಇದ್ದರು. ಹೀಗಾಗಿ ಅದಕ್ಕೆ ನಿಯಂತ್ರಣ ಇರಲಿಲ್ಲ. ದೊಡ್ಡ ಅಲೆಗಳನ್ನು ತಡೆದುಕೊಳ್ಳುವಲ್ಲಿ ಸಾಧ್ಯವಾಗುತ್ತಿರಲಿಲ್ಲ. ಭಾರ ಕಡಿಮೆಯಿದ್ದ ಕಾರಣ ದೋಣಿ ನಿಯಂತ್ರಣ ತಪ್ಪಿತು. ಸಮುದ್ರವೂ ಪ್ರಕ್ಷುಬ್ಧವಾಗಿತ್ತು' ಎಂದು ಅವರು ಹೇಳಿದರು.


ಇಂದಿನಿಂದ 28ನೇ ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್

ಉತ್ತಮ ಸಾಧನೆ ನಿರೀಕ್ಷೆಯಲ್ಲಿ ಭಾರತ

ಗುಮಿ (ದಕ್ಷಿಣ ಕೊರಿಯಾ), (ಪಿಟಿಐ): ಸ್ಟಾರ್ ಅಥ್ಲೀಟ್ ನೀರಜ್ ಚೋಪ್ರಾ ಅವರ ಅನುಪಸ್ಥಿತಿಯ ನಡುವೆಯೂ 59 ಸದಸ್ಯರ ಪ್ರಬಲ ಭಾರತ ತಂಡ, ಮಂಗಳವಾರ ಆರಂಭವಾಗುವ 26ನೇ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ.

ಡೈಮಂಡ್ ಲೀಗ್ ಕೂಟಗಳ ಕಡೆ ಗಮನಹರಿಸಿರುವ ಕಾರಣ ನೀರಜ್ ಚೋಪ್ರಾ, ಎರಡು ವರ್ಷಗಳಿಗೊಮ್ಮೆ ನಡೆಯುವ ಏಷ್ಯನ್ ಕೂಟದಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿದ್ದಾರೆ. ಈ ಹಿಂದಿನ ಕೆಲ ಆವೃತ್ತಿಗಳಲ್ಲೂ ಅವರು ಭಾಗಿಯಾಗಿರಲಿಲ್ಲ. ಹೀಗಾಗಿ ಪುರುಷರ ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ ಒಲಿಂಪಿಕ್ ಚಾಂಪಿಯನ್, ಪಾಕಿಸ್ತಾನದ ಅರ್ಷದ್ ನದೀಮ್ ಅವರು ಆಕರ್ಷಣೆಯಾಗಿದ್ದಾರೆ. ಸಚಿನ್ ಯಾದವ್ ಮತ್ತು ಯಶವೀರ್ ಸಿಂಗ್ ಜಾವೆಲಿನ್‌ನಲ್ಲಿ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ.

ಮಂಗಳವಾರ ನಡೆಯುವ ಪುರುಷರ 20 ಕಿ.ಮೀ. ರೇಸ್ ವಾಕ್ ಈ ಕೂಟದ ಮೊದಲ ಪದಕ ನಿರ್ಧರಿಸುವ ಸ್ಪರ್ಧೆಯಾಗಿದೆ. ಇದರಲ್ಲಿ ಭಾರತದ ಸರ್ವಿನ್ ಸೆಬಾಸ್ಟಿಯನ್ (ವೈಯಕ್ತಿಕ ಶ್ರೇಷ್ಠ ಸಾಧನೆ: 1:21:23) ಮತ್ತು ಅಮಿತ್ (1:21:47) ಕಣದಲ್ಲಿದ್ದಾರೆ.



ಪ್ರವೀಣ್ ಚಿತ್ರವೇಲ್

'ಇಲ್ಲಿ ಬೆಳಗಿನ ಹವೆ ದೂರ ಅಂತರದ ಸ್ಪರ್ಧೆಗೆ ಸೂಕ್ತವಾಗಿದೆ. ಮಂಗಳವಾರ ನನ್ನ ವೈಯಕ್ತಿಕ ಶ್ರೇಷ್ಠ ಸಾಧನೆ ಸುಧಾರಿಸುವ ವಿಶ್ವಾಸವಿದೆ' ಎಂದು ಸೆಬಾಸ್ಟಿಯನ್ ಅವರು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳೆಯರ ಜಾವೆಲಿನ್ ಥ್ರೋ ಸ್ಪರ್ಧೆಯೂ ಮೊದಲ ದಿನ ನಡೆಯಲಿದ್ದು, ಏಷ್ಯನ್ ಗೇಮ್ಸ್ ಚಾಂಪಿಯನ್ ಅನ್ನು ರಾಣಿ ಭಾರತದ ಭರವಸೆ ಯಾಗಿದ್ದಾರೆ. 32 ವರ್ಷ ವಯಸ್ಸಿನ ಅನ್ನುರಾಣಿ ಮಾರ್ಚ್‌ನಲ್ಲಿ ಮುಂಬೈನಲ್ಲಿ ನಡೆದ ಕೂಟದಲ್ಲಿ ಭರ್ಚಿಯನ್ನು 58.82 ಮೀ. ದೂರ ಎಸೆದಿದ್ದು, ಇದು ವರ್ಷದ ಉತ್ತಮ ಪ್ರದರ್ಶನವಾಗಿದೆ. ಆದರೆ ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಗಿಂತ (63.82 ಮೀ.) ಬಹಳ ಕಡಿಮೆ. ಬ್ಯಾಂಕಾಕ್‌ನಲ್ಲಿ ನಡೆದ ಈ ಹಿಂದಿನ ಆವೃತ್ತಿಯಲ್ಲಿ ಅವರು ನಾಲ್ಕನೇ ಸ್ಥಾನ ಗಳಿಸಿದ್ದರು.

ಸರ್ವೇಶ್ ಅನಿಲ್ ಕುಶಾಗ್ರೆ (ಪುರುಷರ ಹೈಜಂಪ್ ಕ್ವಾಲಿಫಿಕೇಷನ್ ಸುತ್ತು) ಮತ್ತು ಯೂನುಸ್ ಶಾ (ಪುರುಷರ 1,500 ಮೀ. ಹೀಟ್ಸ್) ಕೂಡ ಮೊದಲ ದಿನ ಕಣಕ್ಕಿಳಿಯಲಿದ್ದಾರೆ.

ಟ್ರಿಪಲ್ ಜಂಪ್‌ನಲ್ಲಿ ಭಾರತದ ಪ್ರವೀಣ್ ಚಿತ್ರವೇಲ್ ಮತ್ತು ಅಬ್ದುಲ್ಲಾ ಅಬೂಬಕ್ಕರ್ ಅವರು ಪದಕ ಗೆಲ್ಲುವ ಉಜ್ವಲ ಅವಕಾಶ ಹೊಂದಿದ್ದಾರೆ. ಅಬೂಬಕ್ಕರ್ ಹಾಲಿ ಚಾಂಪಿಯನ್ ಕೂಡ. ಚಿತ್ರವೇಲ್ ಈ ವರ್ಷ 17.37 ಮೀ. ಜಿಗಿದಿದ್ದು, ಇದು ಅವರ ವಿಶ್ವಾಸ ವೃದ್ಧಿಸಿದೆ.

'ಮೊದಲ ದಿನ ಟ್ರಿಪಲ್ ಜಂಪ್ ಕ್ವಾಲಿಫಿಕೇಷನ್ ಸುತ್ತು ಇರುವುದಿಲ್ಲ. ಸ್ಪರ್ಧಿಗಳು ಎರಡನೇ ದಿನ ನೇರವಾಗಿ ಫೈನಲ್‌ನಲ್ಲಿ ತಮ್ಮ ಸಾಮರ್ಥ್ಯ ತೋರಲಿದ್ದಾರೆ' ಎಂದು ರಾಷ್ಟ್ರೀಯ ತಂಡದ ಕೋಚ್ ರಾಧಾಕೃಷ್ಣನ್ ನಾಯರ್ ತಿಳಿಸಿದರು.

ಅವಿನಾಶ್ ಸಾಬ್ಳೆ (ಪುರುಷರ 3000 ಮೀ. ಸ್ಟೀಪಲ್‌ಚೇಸ್) ಮತ್ತು ಯುವ ತಾರೆಯರಾದ ಜ್ಯೋತಿ ಯರ್ರಾಜಿ (100 ಮೀ. ಹರ್ಡಲ್ಸ್), ಪಾರುಲ್ ಚೌಧರಿ (ಮಹಿಳೆಯರ 3000 ಮೀ. ಸ್ಟೀಪಲ್‌ಚೇಸ್) ಮೇಲೂ ಕುತೂಹಲದ ಕಣ್ಣು ಇದೆ. ಈ ಕೂಟದಲ್ಲಿ 43 ದೇಶಗಳ 2000 ಅಥ್ಲೀಟುಗಳು ಭಾಗವಹಿಸುತ್ತಿದ್ದು, ಚೀನಾ ಮತ್ತು ಜಪಾನ್ ತಂಡಗಳು ಪದಕಗಳಲ್ಲಿ ಸಿಂಹಪಾಲು ಪಡೆಯುತ್ತಿದೆ. ಭಾರತ ಸಾರ್ವಕಾಲಿಕ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ.

ಬ್ಯಾಂಕಾಕ್‌ನಲ್ಲಿ ನಡೆದ ಈ ಹಿಂದಿನ ಆವೃತ್ತಿಯಲ್ಲಿ ಭಾರತ ಆರು ಚಿನ್ನ, 12 ಬೆಳ್ಳಿ ಮತ್ತು 9 ಕಂಚಿನ ಪದಕ ಸೇರಿದಂತೆ 27 ಪದಕಗಳನ್ನು ಗೆದ್ದುಕೊಂಡಿತ್ತು.